ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 38 | ಸೆಪ್ಟೆಂಬರ್ 14–20, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಅಸಮ್ಮತಿಯ ರಾಕ್ಷಸೀಕರಣ






ದೇಶಕ್ಕೆ ಅವಳಿ ವಿಪತ್ತು ಪ್ರಜಾಪ್ರಭುತ್ವಕ್ಕೆ ಆಪತ್ತು



ಕೊರೋನಾ ಕಾಲದಲ್ಲಿ ಮತ್ತು ನಂತರ ದುಡಿಮೆಗಾರರ ಮೇಲೆ ಕ್ರೂರ ದಮನ

ಅಫಘಾನಿಸ್ತಾನದಲ್ಲಿ ಕಂಪನಿ ಸರ್ಕಾರ





ಸೆಪ್ಟೆಂಬರ್ 5 – ದುಡಿಯುವ ಜನಗಳ ಮತ್ತೊಂದು ದೇಶವ್ಯಾಪಿ ಪ್ರತಿಭಟನೆ








ಗುಡಿಸಲುವಾಸಿಗಳನ್ನು ಕೊವಿಡ್ ಕಾಲದಲ್ಲಿ ವಸತಿಹೀನರಾಗಿಸಬೇಡಿ

– ರೈಲ್ವೆ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



ಗುಡಿಸಲುವಾಸಿಗಳಿಗೆ ಪುನರ್ವಸತಿ ಮತ್ತು ಪರಿಹಾರದ ವ್ಯವಸ್ಥೆ ಮಾಡದೆ ಅವರನ್ನು ಒಕ್ಕಲೆಬ್ಬಿಸದಂತೆ ತಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ರೈಲ್ವೆ ಮಂತ್ರಿ ಪೀಯೂಷ್ ಗೋಯಲ್ ಅವರಿಗೆ ಪತ್ರ ಬರೆದಿದ್ದಾರೆ.

ಆಗಸ್ಟ್ 31 ರಂದು ಸರ್ವೋಚ್ಚ ನ್ಯಾಯಾಲಯ ದಿಲ್ಲಿಯಲ್ಲಿ ರೈಲ್ವೆ ಭೂಮಿಯ ಮೇಲೆ ರೈಲು ಹಳಿಗಳ ಬಳಿ ಇರುವ ಎಲ್ಲ ಗುಡಿಸಲುಗಳನ್ನು ಮೂರು ತಿಂಗಳ ಒಳಗೆ ತೆಗೆಯಬೇಕು ಎಂದು ತೀರ್ಪಿತ್ತಿದೆ. **ಆದರೆ ಒಂದು ವರ್ಷದ ಹಿಂದೆ ದಿಲ್ಲಿ ಹೈಕೋರ್ಟ್ ಗುಡಿಸಲುವಾಸಿಗಳನ್ನು ಅವರಿದ್ದಲ್ಲಿಂದ ಎಬ್ಬಿಸಿ ಬೇರೆಡೆಯಲ್ಲಿ ನೆಲೆಗೊಳಿಸುವ ಅಗತ್ಯವಿದ್ದರೆ ಅವರ ಪುನರ್ವಸತಿಯ ವ್ಯವಸ್ಥೆಯನ್ನು ಮಾಡಬೇಕು ಎಂದು ತನ್ನ ತೀರ್ಪಿನಲ್ಲಿ ಹೇಳಿತ್ತು.** ಬಹುಶಃ ಗುಡಿಸಲುವಾಸಿಗಳನ್ನು ಈ ವಿಚಾರಣೆಯಲ್ಲಿ ಪಾರ್ಟಿ ಮಾಡದ್ದರಿಂದ ಸುಪ್ರಿಂ ಕೋರ್ಟಿಗೆ ದಿಲ್ಲಿ ಹೈಕೋರ್ಟಿನ ತೀರ್ಪಿನ ಬಗ್ಗೆ ತಿಳಿದಿಲಿಕ್ಕಿಲ್ಲ. ಇಲ್ಲವಾಗಿದ್ದರೆ ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠ ಇಂತಹ ಒಂದು ಅಮಾನವೀಯ ತೀರ್ಪನ್ನು, ಅದೂ ಮಹಾಸೋಂಕಿನ ಸಮಯದಲ್ಲಿ ನೀಡುತ್ತಿರಲಿಲ್ಲ ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ಬೇಜವಾಬ್ದಾರಿ, ಮನಸ್ಸಾಕ್ಷಿ ಒಪ್ಪಲಾರದ ಕೃತ್ಯ

"ಅದೇನೇ ಇರಲಿ, ರೈಲ್ವೆ ಮಂತ್ರಿಯಾಗಿ ನಿಮಗೆ ಗುಡಿಸಲುವಾಸಿಗಳನ್ನು ಮರುನೆಲೆಗೊಳಿಸುವ ಮತ್ತು ಮರುವಸತಿ ಕಲ್ಪಿಸುವ ಅಧಿಕಾರ ಇದೆ" ಎಂದು ಬೃಂದಾ ಅವರು ತಮ್ಮ ಪತ್ರದಲ್ಲಿ ರೈಲ್ವೆ ಮಂತ್ರಿಗಳಿಗೆ ಹೇಳಿದ್ದಾರೆ. ಸುಪ್ರಿಂ ಕೋರ್ಟಿನ ಮುಂದೆ ಸಲ್ಲಿಸಿರುವ ಅಂದಾಜಿನ ಪ್ರಕಾರ ಸುಮಾರು 48,000 ಗುಡಿಸಲುವಾಸಿಗಳನ್ನು ಅವರಿದ್ದಲ್ಲಿಂದ ಎಬ್ಬಿಸಬೇಕಾಗಿದೆ. ಅಂದರೆ ಹೆಂಗಸರು, ಮಕ್ಕಳು ಸೇರಿದರೆ ಸುಮಾರು 2.5ಲಕ್ಷದಿಂದ 3 ಲಕ್ಷ ಜನಗಳನ್ನು ಅವರ ನೆಲೆಗಳಿಂದ ಎಬ್ಬಿಸಬೇಕಾಗಿದೆ. ಮಹಾಸಾಂಕ್ರಾಮಿಕ ಸಂದರ್ಭದಲ್ಲಿ ಇದು ಒಂದು ಆರೋಗ್ಯ ಅನಾಹುತಕ್ಕೆ ದಾರಿ ಮಾಡಿಕೊಡುತ್ತದೆ. ಸಾಕಷ್ಟು ಮಂದಿಯನ್ನು ಅಪಾಯಕ್ಕೀಡು ಮಾಡಬಹುದು. ದಿಲ್ಲಿ ಈಗ ಕೊವಿಡ್–19 ಹರಡಿಕೆಯ ಎರಡನೇ ಅಲೆಯನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಜನಗಳನ್ನು ಒಕ್ಕಲೆಬ್ಬಿಸುವುದು ಅತ್ಯಂತ ಬೇಜವಾಬ್ದಾರಿ ಕೃತ್ಯವಾಗುತ್ತದೆ.

ಎರಡನೆಯದಾಗಿ, ಲಾಕ್ಡೌನಿನಿಂದಾಗಿ, ಗುಡಿಸಲುವಾಸಿಗಳ ವರಮಾನದಲ್ಲಿ ತೀವ್ರ ಇಳಿಕೆಯಾಗಿದೆ. ಹೀಗೆ ಈಗಾಗಲೇ ಸಂಕಟ ಪಡುತ್ತಿರುವ ಅವರನ್ನು ವಸತಿಹೀನ ನಾಗರಿಕರನ್ನಾಗಿ ಮಾಡುವುದು ಮನಸ್ಸಾಕ್ಷಿ ಒಪ್ಪಲಾರದ ಒಂದು ಕೃತ್ಯವಾಗುತ್ತದೆ ಎಂಬುದನ್ನು ಮಂತ್ರಿಗಳ ಗಮನಕ್ಕೆ ತಂದಿರುವ ಈ ಪತ್ರ "ಕಾಲಕಾಲಕ್ಕೆ ಅಂಗೀಕರಿಸಿದ ರಾಷ್ಟ್ರೀಯ ವಸತಿ ಕುರಿತಂತಹ ಧೋರಣಾ ಚೌಕಟ್ಟುಗಳು ಕೊಳೆಗೇರಿ ವಾಸಿಗಳನ್ನು ಅವರಿದ್ದಲ್ಲೇ ಮರುನೆಲೆಗೊಳಿಸುವುದನ್ನು ಪ್ರೋತ್ಸಾಹಿಸುತ್ತದೆ, ಅದು ತೀರಾ ಸಾಧ್ಯವೇ ಇಲ್ಲವೆಂದಾಗ ಮಾತ್ರವೇ ಬೇರೆಡೆಯಲ್ಲಿ ನೆಲೆಗೊಳಿಸಲಾಗುತ್ತದೆ ಎಂಬುದು ತಮಗೆ ತಿಳಿದೇ ಇದೆ. ಈ ಪ್ರಕರಣದಲ್ಲಿ ಈಗಿದ್ದಲ್ಲೇ ಅಭಿವೃದ್ಧಿ ಸಾಧ್ಯವೇ ಎಂದು ಯೋಚಿಸಲಾಗುತ್ತಿಲ್ಲ, ಮಾತ್ರವಲ್ಲ ಮರುವಸತಿಯ ಬಗ್ಗೆಯೂ ಯೋಚಿಸಲಾಗುತ್ತಿಲ್ಲ. ಆದ್ದರಿಂದ ಮರುನೆಲೆ, ಮರುವಸತಿ ಮತ್ತು ಪರಿಹಾರವಿಲ್ಲದೆ ಜನಗಳನ್ನು ಒಕ್ಕಲೆಬ್ಬಿಸುವುದನ್ನು ತಡೆಯಬೇಕು ಎಂದು ತಮ್ಮನ್ನು ಕೋರುತ್ತೇನೆ. **ಜನಗಳು, ಕುಟುಂಬಗಳು ತಮ್ಮ ಆಯ್ಕೆಯಿಂದೇನೂ ಗುಡಿಸಲುಗಳಲ್ಲಿ ವಾಸಿಸುತ್ತಿಲ್ಲ ಅಥವ ವಸತಿಹೀನರಾಗಿಲ್ಲ., ಕೇಂದ್ರದಲ್ಲಿನ ಸರಕಾರಗಳ ಧೋರಣೆಗಳಿಂದಾಗಿ ಅಂಚಿಗೆ ತಳ್ಳಲ್ಪಟ್ಟಿದ್ದಾರೆ ಮನೆ ಹೊಂದುವುದು ಒಂದು ಮೂಲಭೂತ ಮಾನವ ಹಕ್ಕು, ಅದು ಉದಾರ ದಾನವೇನಲ್ಲ"** ಎಂಬ ಸಂಗತಿಯನ್ನು ತಮ್ಮ ಪತ್ರದ ಕೊನೆಯಲ್ಲಿ ಬೃಂದಾ ಕಾರಟ್ ರೈಲ್ವೆ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಕೃಷಿ ಜಿಡಿಪಿ ಬೆಳವಣಿಗೆ ದರವೂ ಏರಿಲ್ಲ–ಎಐಕೆಎಸ್

ಜಿಡಿಪಿ ಬೆಳವಣಿಗೆ ದರ ಸೊನ್ನೆಗಿಂತಲೂ ಕೆಳಗೆ 24ಶೇ. ದಷ್ಟು ಇಳಿದದ್ದು 'ದೇವರಾಟ' ಎನ್ನುತ್ತಲೇ ಮೋದಿ ಸರಕಾರ ಈ ಹಣಕಾಸಿನ ಮೊದಲ ತ್ರೈಮಾಸಿಕದಲ್ಲಿ ಕೃಷಿವಲಯ 3.4ಶೇ. ಬೆಳವಣಿಗೆ ದಾಖಲಿಸಿದೆ, ಕಳೆದ ಬಾರಿಗಿಂತ 0.4 ಶೇ. ಹೆಚ್ಚಿನ ಬೆಳವಣಿಗೆಯಾಗಿದೆ ಎಂದು ಬೆನ್ನು ತಟ್ಟಿಕೊಂಡಿದೆ. ಆದರೆ ಇದು ನಿಜಸಂಗತಿಗಳನ್ನು ಆಧರಿಸಿರುವ ಅಂದಾಜು ಅಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

'ಅಗ್ಮಾರ್ಕೆಟ್' ದತ್ತಾಂಶಗಳ ಪ್ರಕಾರ ಎಪ್ರಿಲ್ ಮತ್ತು ಜೂನ್ ನಡುವೆ ಮಾರಾಟವಾದ ಉತ್ಪನ್ನಗಳ ಒಟ್ಟು ಮೌಲ್ಯ ಕಳೆದ ವರ್ಷದ ಈ ಅವಧಿಗೆ ಹೋಲಿಸಿದರೆ, ಧಾನ್ಯಗಳಲ್ಲಿ 31ಶೇ. ದಷ್ಟು, ಬೇಳೆಕಾಳುಗಳಲ್ಲಿ 45ಶೇ. ದಷ್ಟು, ಎಣ್ಣೆ ಬೀಜಗಳಲ್ಲಿ 32ಶೇ.ದಷ್ಟು ಮತ್ತು ತರಕಾರಿಗಳಲ್ಲಿ 38ಶೇ. ದಷ್ಟು ಕಡಿಮೆಯಗಿದೆ. ಇದಕ್ಕೆ ಮಾರುಕಟ್ಟೆಗೆ ಬಂದ ಉತ್ಪನ್ನಗಳ ಪ್ರಮಾಣದಲ್ಲಿ ಇಳಿಕೆಯೂ ಕಾರಣ ಮತ್ತು ರೈತರು ಹೆಚ್ಚಿನ ಬೆಳೆಗಳಿಗೆ ಪಡೆದ ಬೆಲೆಗಳಲ್ಲಿ ಇಳಿಕೆಯೂ ಕಾರಣ. ಬಹುಪಾಲು ರೈತರು ತಮ್ಮ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಗಳಿಗಿಂತಲೂ ಕಡಿಮೆ ಬೆಲೆಗಳಲ್ಲಿ ಮಾರಬೇಕಾಗಿ ಬಂದಿದೆ. ದೇಶದೆಲ್ಲೆಡೆಗಳಲ್ಲಿ ಬೇಗನೇ ಹಾಳಗುವ ತಮ್ಮ ಉತ್ಪನ್ನಗಳನ್ನು ಮಾರಲಾಗದೆ ಹಾಗೆಯೇ ಬಿಟ್ಟು ಬಿಡಬೇಕಾಗಿ ಬಂದಿದೆ. ಹಾಲು ಉತ್ಪಾದಕ ರೈತರು ಅತ್ಯಂತ ಕಡಿಮೆ ಬೆಲೆಯಿಂದಾಗಿ ಅದನ್ನು ಚೆಲ್ಲಬೇಕಾಗಿ ಬಂದಿದೆ.

ರೈತರು ಕೊವಿಡ್ ಮತ್ತು ಲಾಕ್‌ಡೌನ್ ಜತೆಗೆ ದೇಶಾದ್ಯಂತ ಅಕಾಲ ಮಳೆ ಮತ್ತು ಸುಂಟರಗಾಳಿ, ಮಿಡಿತೆ ಹಾವಳಿ ಇತ್ಯಾದಿ ನೈಸರ್ಗಿಕ ವಿಪತ್ತುಗಳಿಂದಲೂ ಬೆಳೆ ನಷ್ಟ ಅನುಭವಿಸಬೇಕಾಗಿ ಬಂದಿದೆ.

ಹಾಗಿದ್ದರೆ ಮೋದಿ ಸರಕಾರ 3.4ಶೇ. ಕೃಷಿ ಜಿಡಿಪಿ ಬೆಳವಣಿಗೆ ದರ ಎಂದು ಹೇಗೆ ಲೆಕ್ಕ ಹಾಕಿದೆ?

ಅಂಕಿ–ಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಇಲಾಖೆ ಈ ಸಂಬಂಧದಲ್ಲಿ ಹೊರಡಿಸಿದ ಪತ್ರಿಕಾ ಟಿಪ್ಪಣಿಯ ಪ್ರಕಾರ "ಮೊದಲ ತ್ರೈಮಾಸಿಕದ ಅಂದಾಜುಗಳು ಜೂನ್ 2020ರಂದು ಕೊನೆಗೊಂಡ 2019–20ರ ಹಿಂಗಾರು ಅವಧಿಯ ಕೃಷಿ ಉತ್ಪಾದನೆಯನ್ನು ಆಧರಿಸಿದ್ದು, ಇದನ್ನು ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆ, ಮುಖ್ಯವಾಗಿ ಹಾಲು, ಮೊಟ್ಟೆ,ಮತ್ತು ಉಣ್ಣೆ ಕುರಿತಂತೆ ಪಶು ಸಂಗೋಪನೆ ಇಲಾಖೆಯಿಂದ ಹಾಗೂ ಮೀನುಗಾರಿಕಾ ಉತ್ಪಾದನೆಯ ಬಗ್ಗೆ ಮೀನುಗಾರಿಕಾ ಇಲಾಖೆಯಿಂದ ಉತ್ಪಾದನಾ ಗುರಿಗಳ ಸ್ವರೂಪದಲ್ಲಿ ಪಡೆದ ಅಂದಾಜುಗಳು" ಎಂದಿದೆ.

ದೇಶ ಒಂದು ಕರಾಳ ಲಾಕ್‌ಡೌನಿನಿಂದಾಗಿ ಅಭೂತಪೂರ್ವ ಆರ್ಥಿಕ ವಿಧ್ವಂಸಕ್ಕೆ ಒಳಗಾಗಿದ್ದಾಗ, **ರೈತರು ದೇಶಾದ್ಯಂತ ಅನುಭವಿಸಿರುವ ವ್ಯಾಪಕ ನಷ್ಟಗಳನ್ನು ಗಮನಕ್ಕೆ ತಗೊಳ್ಳದೆ ಸರಕಾರ ತನ್ನ ಜಿಡಿಪಿ ಅಂದಾಜನ್ನು 'ಉತ್ಪಾದನಾ ಗುರಿ'ಗಳ ಆಧಾರದಲ್ಲಿ ಲೆಕ್ಕ ಹಾಕಿರುವುದು, ಹಾಸ್ಯಾಸ್ಪದ ಸಂಗತಿ** ಎಂದು ಎಐಕೆಎಸ್ ಹೇಳಿದೆ.

ಅಂದರೆ ಸರಕಾರಕ್ಕೆ ಇತರ ವಲಯಗಳಲ್ಲಿ ಆಗಿರುವ ಆರ್ಥಿಕ ವಿಧ್ವಂಸವನ್ನು ಒಪ್ಪಿಕೊಳ್ಳದೇ ಇರಲು ಆಗಿಲ್ಲ. ಆದರೆ, ಕೃಷಿ ವಲಯದಲ್ಲಿ ಅದನ್ನು ಮರೆಮಾಚುವ ತಂತ್ರಕ್ಕೆ ಮೊರೆ ಹೋಗಿದೆ ಎಂಬುದು ಸ್ಪಷ್ಟ ಎಂದು ಎಐಕೆಎಸ್ ಈ ಅಂಕಿ–ಅಂಶಗಳ ಆಧಾರದಲ್ಲಿ ವಿಶ್ಲೇಷಿಸಿದೆ.

ವಾಸ್ತವವಾಗಿ ಸರಕಾರ ಲಾಕ್‌ಡೌನ್ ಉಂಟು ಮಾಡಿರುವ ಅಭೂತಪೂರ್ವ ಸಂಕಟಗಳಿಂದ ಗಮನಾರ್ಹಪರಿಹಾರ ಕೊಡಲು ನಿರಾಕರಿಸಿರುವುದರಿಂದ ರೈತರು ಬೇಸಾಯ ಮಾಡುವಲ್ಲಿಯೂ ಮತ್ತು ತಮ್ಮ ಉತ್ಪನ್ನಗಳನ್ನು ಮಾರುವಲ್ಲಿಯೂ ಹಿಂದೆಂದೂ ಕಾಣದಂತಹ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿ ಬಂದಿದೆ. ಆದ್ದರಿಂದ ಸರಕಾರದ ಈ ಸುಳ್ಳುಗಳಿಂದ ರೈತರು ಮೋಸ ಹೋಗುವುದಿಲ್ಲ, ಈ ಜನ–ವಿರೋಧಿ ಸರಕಾರದ ವಿರುದ್ಧ ತಮ್ಮ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ್ದಾರೆ, ಸರಕಾರ ತನ್ನ ತಪ್ಪುಗಳ ಹೊಣೆ ಹೊತ್ತು ನೈಜ ಬೇಡಿಕೆಗಳನ್ನು ಈಡೇರಿಸುವ ವರೆಗೂ ರೈತರ ಹೋರಾಟ ಮುಂದುವರೆಯುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಎರಡು ದಿನಗಳ ಬಿಪಿಸಿಎಲ್ ಮುಷ್ಕರ

ಬಿಜೆಪಿ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧದ ಪ್ರತೀಕ: ಸಿಐಟಿಯು

ಸೆಪ್ಟಂಬರ್ 7 ಮತ್ತು 8 ರಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.(ಬಿಪಿಸಿಎಲ್)ನ ಕಾರ್ಮಿಕರು ಮತ್ತೊಮ್ಮೆ ಖಾಸಗೀಕರಣದ ವಿರುದ್ಧ ದೇಶವ್ಯಾಪಿ ಮುಷ್ಕರ ನಡೆಸಿದ್ದಾರೆ. ಅವರನ್ನು ಅಭಿನಂದಿಸುತ್ತ ಇದು ಬಿಜೆಪಿ ಸರಕಾರದ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧದ ಪ್ರತೀಕ ಎಂದು ಸಿಐಟಿಯು ಹೇಳಿದೆ.

ಬಿಪಿಸಿಎಲ್ ರಚನೆಯಾದದ್ದು 1976ರಲ್ಲಿ ಒಂದು ವಿದೇಶಿ ಬಹುರಾಷ್ಟ್ರೀಯ ತೈಲ ಕಂಪನಿಯನ್ನು ವಹಿಸಿಕೊಂಡು ಸಂಸತ್ತಿನ ಒಂದು ಶಾಸನದ ಮೂಲಕ. 2002–03ರ ಬಿಜೆಪಿ ಸರಕಾರ ಕೂಡ ಇದನ್ನು ಮತ್ತೆ ಖಾಸಗೀಕರಿಸುವ ಪ್ರಯತ್ನ ನಡೆಸಿತು. ಆದರೆ ಕಾರ್ಮಿಕರ ಮೂರು ದಿನಗಳ ಮುಷ್ಕರ, ಅದಕ್ಕೆ ಇಡೀ ಪೆಟ್ರೋಲಿಯಂ ವಲಯದ ಕಾರ್ಮಿರಕ ಬೆಂಬಲದಿಂದಾಗಿ ಆ ಪ್ರಯತ್ನ ವಿಫಲವಾಯಿತು ಎಂಬುದನ್ನು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಈ ಸಂದರ್ಭದಲ್ಲಿ ನೆನಪಿಸಿದ್ದಾರೆ.



ಬಿಪಿಸಿಎಲ್ ಸಾರ್ವಜನಿಕ ವಲಯದಲ್ಲಿ ರಚನೆಯಾದ ನಂತರ ಅದರ ತೈಲಶುದ್ಧೀಕರಣ ಸಾಮರ್ಥ್ಯ ಎಲ್‌ಪಿಜಿ ವಿತರಣಾ ಜಾಲ ಮತ್ತು ಮಾರುಕಟ್ಟೆ ಜಾಲ ಅಗಾಧವಾಗಿ ವಿಸ್ತರಿಸಿತು. ಇವೆಲ್ಲ ನಡೆದದ್ದು ಸಾರ್ವಜನಿಕ ಹೂಡಿಕೆಗಳ ಮೂಲಕ. ಇದರಿಂದಾಗಿ ಈ ಕಂಪನಿಯ ಆಸ್ತಿಯ ಮೌಲ್ಯ 9.5 ಲಕ್ಷ ಕೋಟಿ ರೂ.ಗಳಿಗೇರಿತು. ಇವೆಲ್ಲ ರಾಷ್ಟ್ರೀಯ ಆಸ್ತಿ ಎಂದೂ ತಪನ್ ಸೇನ್ ನೆನಪಿಸಿದ್ದಾರೆ.

ಇದು ರಾಷ್ಟ್ರೀಯ ಖಜಾನೆಗೆ ಪ್ರತಿವರ್ಷ ಡಿವಿಡೆಂಡ್‌ಗಳು ಮತ್ತು ತೆರಿಗೆಗಳ ಮೂಲಕವೂ ಉತ್ತಮ ವಂತಿಗೆಗಳನ್ನು ಕೊಡುತ್ತ ಬಂದಿದೆ. ಆದರೂ ಸರಕಾರಕ್ಕೆ ಈ ಆದಾಯಗಳನ್ನು ಬಿಟ್ಟುಕೊಟ್ಟು, ಇದನ್ನು ತನ್ನ ಆಯ್ಕೆಯ ಒಂದು ಖಾಸಗಿ ಕಂಪನಿಗೆ, ಅತ್ಯಂತ ಅಗ್ಗದ ಬೆಲೆಯಲ್ಲಿ (ಸುಮಾರು 60 ಸಾವಿರ ಕೊಟಿ ರೂ.ಗಳಿಗೆ ಎನ್ನಲಾಗಿದೆ) ಮಾರಲು ಈಗ ಮೋದಿ ನೇತೃತ್ವದ ಬಿಜೆಪಿ ಸರಕಾರ ಕಟಿಬದ್ಧವಾಗಿರುವಂತೆ ಕಾಣುತ್ತದೆ.

ಈ ಮುಷ್ಕರ ಕೊಚ್ಚಿ ಮತ್ತು ಮುಂಬೈ ರಿಫೈನರಿಗಳಲ್ಲಿ ಎರಡೂ ದಿನ 100ಶೇ. ಆಗಿತ್ತು. ಪೂರ್ವ, ಈಶಾನ್ಯ ಮತ್ತು ಉತ್ತರ ವಲಯಗಳಲ್ಲಿ ಹೆಚ್ಚಿನ ಎಲ್‌ಪಿಜಿ ಬಾಟ್ಲಿಂಗ್ ಸ್ಥಾವರಗಳು ಮುಚ್ಚಿದ್ದವು. ಮಾರುಕಟ್ಟೆ ಚಟುವಟಿಕೆಗಲೂ ಉತ್ತರ, ಪೂರ್ವ ಮತ್ತು ಪಶ್ಚಿಮ ವಲಯದಲ್ಲೂ ಬಹುಮಟ್ಟಿಗೆ ಸ್ಥಗಿತಗೊಂಡವು.

ದೇಶಾದ್ಯಂತ ಈ ಎರಡು ದಿನಗಳ ಮುಷ್ಕರಕ್ಕೆ ಸೌಹಾರ್ದ ಕಾರ್ಯಾಚರಣೆಗಳೂ ನಡೆದವು. ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಇದಕ್ಕೆ ಬೆಂಬಲ ನೀಡಿದ್ದವು.

ಇದಕ್ಕೆ ಮೊದಲು ಜುಲೈ ತಿಂಗಳಲ್ಲಿ ಕಲ್ಲಿದ್ದಲು ವಲಯದ ಕಾರ್ಮಿಕರು ಮೂರು ದಿನಗಳ ಮುಷ್ಕರ ನಡೆಸಿದ್ದರು. ಈಗ ಈ ಎರಡು ದಿನಗಳ ಬಿಪಿಸಿಎಲ್ ಮುಷ್ಕರದ ನಂತರ ರಕ್ಷಣಾ ವಲಯದ ಕಾರ್ಮಿಕರು ಅಕ್ಟೋಬರ್ 12ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ

ಇವೆಲ್ಲ ರಾಷ್ಟ್ರೀಯ ಆಸ್ತಿಗಳನ್ನು ತಮ್ಮ ಬಂಟರಿಗೆ ಮಾರುವ ಮತ್ತು ರಾಷ್ಟ್ರೀಯ ಉತ್ಪಾದನಾ ಸಾಮರ್ಥ್ಯವನ್ನು ನಾಶಪಡಿಸುವ ಮೋದಿ ಸರಕಾರದ ಹತಾಶ ಪ್ರಯತ್ನಗಳ ವಿರುದ್ಧ ಕಾರ್ಮಿಕ ವರ್ಗದ ಪ್ರತಿರೋಧ ಬೆಳೆಯುತ್ತಿರುವುದರ ಪ್ರತೀಕ ಎಂದು ತಪನ್ ಸೇನ್ ಹೇಳಿದ್ದಾರೆ.

ಸಂಪಾದಕೀಯ

ರೋಗ ನಿರೋಧಕ ಶಕ್ತಿಯನ್ನು ಬೆಳೆಸಲು ಬೇಕು ಪೌಷ್ಟಿಕ ಆಹಾರ

ಕೊವಿಡ್–19 ರ ಪ್ರಸಾರವನ್ನು ತಡೆಗಟ್ಟುವ ತನ್ನ ಜವಾಬ್ದಾರಿಯನ್ನು ಕೇಂದ್ರದ ಮೋದಿ ಸರ್ಕಾರ ತನ್ನ ಕೈ ತೊಳೆದುಕೊಂಡಿದೆ ಎಂದು ಹೇಳಲು ತೀರಾ ಖೇದ ವೆನಿಸುತ್ತದೆ. ಕೊರೊನಾ ದೊಡ್ಡ ರೋಗವಲ್ಲ, ಅದನ್ನು ಧೈರ್ಯದಿಂದ ಎದುರಿಸಬೇಕು. ಅವರೊಂದಿಗೆ ಬದುಕಲು ಕಲಿಯ ಬೇಕು, ಎಂಬ ಬಿಜೆಪಿ ಸರ್ಕಾರದ ಹೃದಯಹೀನ ಆದೇಶ ಜನಮನ ಕುಲುಕುತ್ತಿದೆ. ಸರ್ಕಾರ ಈ ಮೂಲಕ ತನ್ನ ಕಾರ್ಯವಿಫಲತೆಯನ್ನು ಮರೆಮಾಚಲು ಪ್ರಯತ್ನ ಮಾಡುತ್ತಿದೆ. ಸತ್ತರೆ ಕಾಯಿರಿ, ಬದುಕಿದರೆ ಬದುಕಿರಿ ಎಂಬ ಅಮಾನವೀಯ ಪರಿಸ್ಥಿತಿಯನ್ನು ಒಪ್ಪಿಕೊಳ್ಳಲು ಒತ್ತಾಯಿಸುತ್ತದೆ.

ಕೊರೊನಾ ಸಾಂಕ್ರಾಮಿಕವನ್ನು ಪರಿಣಾಮಕಾರಿಯಾಗಿ ಎದುರಿಸಿ ಹಿಮ್ಮೆಟಿಸಲು ನಮ್ಮ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿರಬೇಕು. ರೋಗ ತಗಲುವ ಮುನ್ನಾವೇ ದೇಹದಲ್ಲಿ ರೋಗ ನಿರೋಧಕ ಶಕ್ತಿ ಗಣನೀಯ ಪ್ರಮಾಣದಲ್ಲಿದ್ದರೆ ವೈರಾಣುಗಳ ದಾಳಿ ನಿಯಂತ್ರಣಕ್ಕೆ ಒಳಪಡುವುದು. ಸಧ್ಯಕ್ಕೆ ಕೊರೊನಾ ವೈರಸ್‌ಗೆ ಔಷಧ ಇಲ್ಲದ ಕಾರಣ ಅದನ್ನು ತಡೆಗಟ್ಟಲು ನಮ್ಮ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದೊಂದೇ ಮಾರ್ಗ. ಈ ಸಂದರ್ಭದಲ್ಲಿ ಹೆಚ್ಚು ಪೌಷ್ಟಿಕ ಆಹಾರವನ್ನು ಸೇವಿಸುವುದು ಅತ್ಯಗತ್ಯ.

ಗ್ರಾಮೀಣ ಹಾಗೂ ನಗರ ಪ್ರದೇಶಗಳ ದುಡಿಯುವ ಜನಗಳು ಪೌಷ್ಟಿಕ ಆಹಾರ ಕೊರತೆಯನ್ನು ತೀವ್ರವಾಗಿ ಅನುಭವಿಸುತ್ತಿರುತ್ತಾರೆ. ನಮ್ಮ ದುಡಿಮೆಗಾರ ಮಹಿಳೆಯರು ನಿರಂತರವಾಗಿ ರಕ್ತಹೀನತೆಯಿಂದ ನರಳುತ್ತಿರುತ್ತಾರೆ. ಹಾಗಾಗಿ ಅವರು ಸುಲಭವಾಗಿ ಇಂತಹ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಾರೆ. ಒಳ್ಳೆಯ ಆಹಾರ ಸೇವಿಸಲು ಸಾಧ್ಯವಾಗಬೇಕಾದರೆ ಅವರಿಗೆ ಹಣ ಸಂಪಾದನೆಗೆ ನಿರಂತರ ಕೆಲಸ ಸಿಗುವಂತಿರಬೇಕು. ಉದ್ಯೋಗ ಖಾತ್ರಿ ಯಂತ ಯೋಜನೆ ಸಮರ್ಪಕವಾಗಿ ಜಾರಿಯಾಗಬೇಕು. ಉದ್ಯೋಗ ಖಾತ್ರಿ ವಿಷಯದಲ್ಲಿ ಕಿರುಕುಳ ನೀಡುವುದನ್ನು ತಡೆಗಟ್ಟಬೇಕು. ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಮನೆಗೊಬ್ಬ ರಂತೆ ಕೆಲಸ ಕೊಡುವುದು ಏನೇನು ಸಾಲದು. ಒಂದು ಮನೆಯಲ್ಲಿ ಕೆಲಸ ಬಯಸುವರೆಲ್ಲರಿಗೂ ಕೆಲಸ ಕೊಡಬೇಕು. ಆಗ ಮಾತ್ರ ಕುಟುಂಬದ ಆದಾಯ ಹೆಚ್ಚಾಗಿ ಅವರು ಒಳ್ಳೆಯ ಪೌಷ್ಟಿಕ ಆಹಾರವನ್ನು ಸೇವಿಸಬಹುದು.

ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ದಿನಸಿ, ತರಕಾರಿ, ಹಣ್ಣುಹಂಪಲುಗಳು ಬಡವರ ಕೈಗೆಟುಕ ಇವುಗಳನ್ನು ಗಣನೀಯವಾಗಿ ಸೇವನೆ ಮಾಡದಿದ್ದರೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗದು. ಇತ್ತೀಚೆಗೆ ಇಂಧನ ದರ ಏರಿಕೆಯಿಂದಾಗಿ ಸಾರಿಗೆ ವೆಚ್ಚ ಅಧಿಕವಾಗಿದೆ. ಅಡುಗೆ ಎಣ್ಣೆ ದರದಲ್ಲಿ ಕೆ.ಜಿ. ಒಂದಕ್ಕೆ 20 ರೂ. ಹೆಚ್ಚಳವಾಗಿದೆ. ಈ ಬೆಲೆ ಏರಿಕೆಗೆ ತಕ್ಕಂತೆ ಕೂಲಿಕಾರರ ವೇತನ ಹೆಚ್ಚಾದರೆ ಮಾತ್ರ ಅವರು ಕನಿಷ್ಟ ಬದುಕನ್ನಾದರೂ ಬದುಕ ಬಹುದು. ಇನ್ನೊಂದೆಡೆ ನಿರುದ್ಯೋಗ ಉಲ್ಬಣಗೊಳ್ಳುತ್ತಿದೆ. ಇನ್ನೊಂದೆಡೆ ಅಗತ್ಯ ವಸ್ತುಗಳ ಕಾಯ್ದೆಯನ್ನು ತೆಗೆದು ಹಾಕಲು ಸಂಚು ಹೂಡಲಾಗುತ್ತಿದೆ. ಇದು ದೇಶದ ಆಹಾರ ವ್ಯವಸ್ಥೆಯನ್ನೇ ನಾಶ ಮಾಡಲಿದೆ.

ಈ ಹಿನ್ನೆಲೆಯಲ್ಲಿ, ಎಡಪಕ್ಷಗಳು ಉದ್ಯೋಗ ಖಾತ್ರಿಯಲ್ಲಿ ದಿನಗೂಲಿಯನ್ನು 600 ರೂ. ಹೆಚ್ಚಿಸಬೇಕೆಂದು ಒತ್ತಾಯಿಸುತ್ತಾ ಬಂದಿವೆ. ವರ್ಷದಲ್ಲಿ 100 ದಿನಗಳ ಬದಲಾಗಿ ಕನಿಷ್ಟ ವರ್ಷದಲ್ಲಿ 200 ದಿನಗಳ ಕೆಲಸ ಕೊಡಬೇಕೆಂದು ಒತ್ತಾಯಿಸುತ್ತವೆ. ನಗರ ಪ್ರದೇಶಗಳಿಗೂ ಒಂದು ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಒಲವು ತೋರಿದೆ ಎಂದು ತಿಳಿದು ಬಂದಿದೆ. ಇದು ಎಡಪಕ್ಷಗಳಿಗೆ ಸಿಕ್ಕ ಜಯವಾಗಿದೆ. ಎಲ್ಲ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಬೇಕು. ನಿರುದ್ಯೋಗಿಗಳ ಹೋರಾಟವೂ ತೀವ್ರವಾಗಬೇಕು.

ತಿಂಗಳುಗಟ್ಟಲೆ ಘೋಷಿಸಲಾದ ಲಾಕ್‌ಡೌನ್‌ನಿಂದಾಗಿ ವಲಸೆ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು, ಪೌರಕಾರ್ಮಿಕರು, ಹಮಾಲಿ ಕಾರ್ಮಿಕರು ಆದಾಯದ ಕೊರತೆಯಿಂದ ತೀವ್ರ ಸಂಕಷ್ಟ ಅನುಭವಿಸಿದ್ದಾರೆ. ಇದುವರೆಗೂ ಅವರು ಚೇತರಿಸಿಕೊಂಡಿಲ್ಲ ಅಂತಹ ಪ್ರತಿಯೊಂದು ಕುಟುಂಬಕ್ಕೆ ಮುಂದಿನ 6 ತಿಂಗಳು ಮಾಸಿಕ ತಲಾ. 7500 ಆರ್ಥಿಕ ನೆರವು ನೀಡಬೇಕೆಂದು ಎಡಪಕ್ಷಗಳು ಒತ್ತಾಯ ಮಾಡುತ್ತಿವೆ. ಇಂತಹ ಕುಟುಂಬದ ಪ್ರತಿಯೊಂದ ಸದಸ್ಯನಿಗೆ ಉಚಿತ ಆಹಾರ ದಾನ್ಯ ವಿತರಿಸಬೇಕು. ಅದು ಕೇವಲ ಅಕ್ಕಿ ಮಾತ್ರವಲ್ಲ, ಗೋಧಿ, ಅಡುಗೆ ಎಣ್ಣೆ, ಸಕ್ಕರೆ, ತೊಗರಿ ಬೇಳೆ, ಸೀಮೆ ಎಣ್ಣೆ ಉಚಿತವಾಗಿ ವಿತರಿಸಬೇಕು. ಇಂತಹ ಕನಿಷ್ಟ ಸೌಲಭ್ಯಗಳನ್ನು ಒದಗಿಸಿದರೆ ಮಾತ್ರ ಅವರು ನಿರೋಧಕ ಶಕ್ತಿ ಹೆಚ್ಚಿಸಿಕೊಂಡು ಸಾಂಕ್ರಾಮಿಕವನ್ನು ತಡೆಗಟ್ಟಬಹುದು.

ತುಮಕೂರು ಜಿಲ್ಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ – ನ್ಯಾಯಕ್ಕಾಗಿ ಆಗ್ರಹ



ತುಮಕೂರು ಜಿಲ್ಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ ನ್ಯಾಯ ಸಿಗಲೇಬೇಕು
ಪೋಲಿಸರಿಂದ ರಕ್ಷಣೆ ಸಿಗಲೇ ಬೇಕು
ಆರೋಪಿಗಳಿಗೆ ಉಗ್ರ ಶಿಕ್ಷೆಯಾಗಲಿ
ನೊಂದ ದಲಿತರಿಗೆ ಸೂಕ್ತ ಪರಿಹಾರ ಸಿಗಲೇಬೇಕು

ಅಸ್ಪೃಶತೆ, ಜಾತಿ ತಾರತಮ್ಯ ಕೊರೊನಾ ವೈರಸ್‌ಗಿಂತ ಬೀಕರವಾಗಿದೆ. ಈ ಜಾತಿಯ ವಿಷಬೀಜ ಸಮಾನತೆ ಸಮಾಜದ ಹಾದಿಗೆ ಮಾರಕ ರೋಗವಾಗಿದೆ. ಬಿ.ಜೆ.ಪಿ ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲಿನ ದೌರ್ಜನ್ಯಗಳು ತೀವ್ರವಾಗಿ ಹೆಚ್ಚಾಗಿದೆ. ಸಂವಿಧಾನ ಬದಲಿಸಿವ ಇವರ ಮಾತಿನ ಧೋರಣೆಗಳು, ಸಂವಿಧಾನ ಸುಡುವ ಕುಕೃತ್ಯಗಳು, ಮಹಾ ಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಸ್ಮಾರಕಗಳನ್ನು ಧ್ವಂಸ ಮಾಡುತ್ತಿರುವ ಆರ್.ಎಸ್. ಎಸ್.ಕೋಮುವಾದಿ ಪೃವತ್ತಿಗಳು, ಮೀಸಾಲಾತಿ ವಿರೋಧಿ ಮನಸ್ಸುಗಳು, ನ್ಯಾಯಲಯದ ಮೂಲಕ ಬರುತ್ತಿರುವ ದಲಿತ ವಿರೋಧಿ ತೀರ್ಪುಗಳು, ದಲಿತ ಪರ ಹೋರಾಟ ಧ್ವನಿಯನ್ನು ನ್ಯಾಯಲಯದ ಆದೇಶದಿಂದ ಅಡಗಿಸುವ ನೀತಿಗಳು ದಲಿತರ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಬಿಜೆಪಿ ಯಡಿಯೂರಪ್ಪರವರ ಸರ್ಕಾರ ದೌರ್ಜನ್ಯ ತಡೆ ಕಾಯಿದೆಯನ್ನು ಕಟ್ಟು ನಿಟ್ಟಾಗಿ ಜಾರಿಮಾಡದೆ ಸಂಪೂರ್ಣ ವಿಫಲವಾಗಿದೆ.

ಈ ಜಾತಿವಾದ, ಕೋಮುವಾದ ಹಿಮ್ಮೆಟ್ಟಿಸಲು ದೇಶ ಪ್ರೇಮಿ ಜನತೆ ಒಗ್ಗಟ್ಟಿ ಪ್ರಭಲ ಹೋರಾಟ ನಡೆಸಬೇಕಾಗಿದೆ.

ತುಮಕೂರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ದೌರ್ಜನ್ಯಗಳು; ದಲಿತರಿಗೆ ಸಿಗುತ್ತಿಲ್ಲ ರಕ್ಷಣೆ:

ತುಮಕೂರು ಜಿಲ್ಲೆಯಲ್ಲಿ ಕೋವಿಡ್ ಸಂಕಷ್ಟ ಕಾಲದಲ್ಲೂ ದೌರ್ಜನ್ಯ ನಡೆದಿದೆ. ಈ ಕೆಳಗಿನ ಎಲ್ಲಾ ಘಟನೆಗಳಲ್ಲೂ ದಲಿತರಿಗೆ ನ್ಯಾಯ ಸಿಗದೆ ಪರಿತಪಿಸುತ್ತಿದ್ದಾರೆ. ಜಿಲ್ಲೆಯ ಪೋಲಿಸ್ ಮೇಲ್‌ಜಾತಿ ಜಮೀನುದಾರರ ರಾಜಕೀಯ ಪ್ರಭಾವದಿಂದ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ದೌರ್ಜನ್ಯ ತಡೆ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡದೆ ಕೌಂಟರ್ ಕೇಸು ಹಾಕಿ ದಲಿತರಿಗೆ ಅನ್ಯಾಯವೆಸಗಿದ್ದಾರೆ. ಈ ಘಟನೆಗಳ ಬಗ್ಗೆ ತಾವು ಪರೀಶೀಲನೆ ನಡೆಸಿ ತಪ್ಪು ಎಸಗಿರುವ ಪೋಲಿಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತೇವೆ.

ನಮ್ಮ ಹಕ್ಕೋತ್ತಾಯಗಳು:

1. ಮಧುಗಿರಿ ತಾಲೋಕ್ ತಿಪ್ಪಾಪುರದಲ್ಲಿ ದಲಿತ ಹನುಮಂತಪ್ಪನ ತನ್ನ ಹೊಲದಲ್ಲಿ ಸ್ವಂತ ಖರ್ಚಿನಿಂದ ಬೋರ್ ಕೊರೆಸಿದಾಗ ಒಳ್ಳೆ ನೀರು ಸಿಕ್ಕತು. ಇದನ್ನು ಸಹಿಸದ ಮೇಲ್ಜಾತಿ ಜನರು ದೌರ್ಜನ್ಯ ನಡೆಸಿ ಕೈ ಕಾಲು ಮುರಿದು ಹಾಕಿದರು. ಅದು ಸಾಲದೆ ಎಂ.ಎ, ಬಿ.ಎಡ್. ಪಡೆದಿರುವ ಪಧವಿದರನನ್ನು ಮಗ ಅಶೋಕನನ್ನು ಸುಳ್ಳು ಕೌಂಟರ್ ಕೇಸು ಹಾಕಿ ಜೈಲಿಗೆ ಕಳುಹಿಸಿದ್ದಾರೆ. ಆರೋಪಿಗಳು ಬೆಲ್ ಪಡೆದು ಆರಾಮಾಗಿದ್ದಾರೆ. ದಲಿತ ಕುಟುಂಬ ಸಂಕಷ್ಟ ಅನುಭವಿಸುತ್ತಿದೆ.
2. ಗುಬ್ಬಿ ತಾಲೋಕ್ ಸಿ.ಎಸ್. ಪುರ ಹೊಬಳಿ, ಕೋಡುಗೆಹಳ್ಳಿಯಲ್ಲಿ ಜಾತ್ರೆ ಸಂದರ್ಭದಲ್ಲಿ ನಡೆಯುತ್ತಿದ್ದ ವಾದ್ಯಗೋಷ್ಠಿ ನೋಡುತ್ತಿದ್ದ ದಲಿತ ಹೆಣ್ಣು ಮಕ್ಕಳನ್ನು ಅವ್ಯಾಚ್ಚ ಶಬ್ದಗಳಿಂದ ಬೈದು ಕೇರಿಗೆ ನುಗ್ಗಿ ದಾಂದಲೆ ನಡೆಸಿದರು. ಕೇಸು ದಾಖಲಾಯಿತು ಆದರೆ ಪೋಲಿಸರು ದೌರ್ಜನ್ಯ ಮಾಡಿದವರನ್ನು ಬಂದಿಸಲಿಲ್ಲ. ದಲಿತರಿಗೆ ನ್ಯಾಯ ಸಿಗಲಿಲ್ಲ.
3. ಕೊರಟಗೆರೆ ತಾಲೋಕ್ ಮಲ್ಲೇಕಾವು ಗ್ರಾಮದಲ್ಲಿ ದೊಡ್ಡಮ್ಮ ದೇವಿ ಹಬ್ಬದಲ್ಲಿ ಜಗದೀಶ ದಲಿತ ಕುಂಟುಂಬ ದೇವಸ್ಥಾನ ಪ್ರವೇಶಿಸಿ ಪೂಜೆ ಮಾಡಿದ ಅಪರಾಧಕ್ಕೆ ರೂ.25000 ದಂಡ ಹಾಕಿದರು. ಸಾಮಾಜಿಕ ಇದುವರವಿಗೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ.
4. ಕುಣಿಗಲ್ ತಾಲೋಕ್ ಕಸಬಾ ಹೋಬಳಿ ಹನುಮೇಗೌಡನ ಪಾಳ್ಯದಲ್ಲಿ ಕೋರವ ಜನಾಂಗದ ಮೇಲೆ ಜಾತಿ ದೌರ್ಜನ್ಯ. ದೌರ್ಜನ್ಯಕ್ಕೊಳಗದವರ ಮೇಲೆ ಕೌಂಟರ್ ಕೇಸ್ ಹಾಕಲಾಗಿದೆ. ಮೇಲಿನ ಎಲ್ಲಾ ಪ್ರಕರಣಗಳಲ್ಲಿ ಜಾತಿತಾರತಮ್ಯ ಮಾಡಿ ದೌರ್ಜನ್ಯ ನಡೆಸಿದವರ ಮೇಲೆ ಕಠಿಣ ಶಿಕ್ಷೆಯಾಗಲು ಕ್ರಮ ಜರುಗಿಸಬೇಕು. ಮದುಗಿರಿ ತಿಪ್ಪಾಪುರದ ಪಧವೀಧರ ಆಶೋಕ್ ಮೇಲೆ ಹಾಕಿರುವ ಸುಳ್ಳು ಕೇಸನ್ನು ರದ್ದು ಮಾಡಬೇಕು. ಕೊರಟಗೆರೆ ತಾಲೋಕ್, ಮಲ್ಲೇ ಕಾವು, ಗುಬ್ಬಿ ತಾಲೋಕ್, ಸಿ.ಎಸ್. ಪುರ, ಕೂಡುಗೆಹಳ್ಳಿ, ಕುಣಿಗಲ್ ತಾಲೋಕ್ ಹನುಮೇಗೌಡನ ಪಾಳ್ಯ ಈ ಪ್ರಕರಣಗಳಲ್ಲಿ ಸುಳ್ಳು ಕೌಂಟರ್ ಕೇಸ್ ಹಾಕಲು ಸಹಕರಿಸಿರುವ ಪೋಲಿಸ್ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು.
5. ಕುಣಿಗಲ್ ತಾಲೋಕಿನ ಹೊಸೂರು ಕಾಲೋನಿಯಲ್ಲಿ 70 ದಲಿತ ಕುಟುಂಬಗಳು ವಾಸವಾಗಿದ್ದು ಜೆಲ್ಲಿ ಕ್ರಸರ್ ನಡೆಯುತ್ತಿದ್ದು ಅದರಿಂದ ಬರುವ ದೂಳಿನಿಂದ ಆನಾರೋಗ್ಯ ಉಂಟಾಗಿದೆ. ಜಮೀನು ಹಾಳಾಗಿ ಹೋಗಿದೆ, ಈ ಹಲವು ಬಾರಿ ದೂರು ನೀಡಿದರು ಪ್ರಯೋಜನವಾಗಿಲ್ಲ. ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಸಂಬಂದ ಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿ ದಲಿತರು ಮುಕ್ತ ಜೀವನ ನಡೆಸಲು ಅವಕಾಶ

ಪುಟ 4 ಕ್ಕೆ

ವರದಿ:
ವಾ.ಉ.

ರೈತ ಸಮಸ್ಯೆಗಳನ್ನು ನಿವಾರಿಸಲು ಆಗ್ರಹಿಸಿ ರೈತ ಕಾರ್ಮಿಕರ ಸಂಯುಕ್ತ ಪ್ರತಿಭಟನೆ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರಕಾರವು ಅನುಸರಿಸುತ್ತಿರುವ ಆಕ್ರಮಣಕಾರಿ ಆರ್ಥಿಕ ನೀತಿಗಳಿಂದಾಗಿ ರೈತರ, ಕಾರ್ಮಿಕರ ಮತ್ತು ಕೃಷಿ ಕೂಲಿಕಾರರ ಪರಿಸ್ಥಿತಿ ಅತ್ಯಂತ ದಾರುಣವಾಗುತ್ತಿದೆ. ಇದನ್ನು ಪ್ರತಿಭಟಿಸಿ ರಾಷ್ಟ್ರಾದ್ಯಂತ ಎಐಕೆಎಸ್ ಮತ್ತು ಸಿಐಟಿಯು ನೇತೃತ್ವದಲ್ಲಿ ಸಪ್ಟೆಂಬರ್ 5 ರಂದು ನಡೆಸಲಾಗುತ್ತಿರುವ ಪ್ರತಿಭಟನೆಗಳ ಭಾಗವಾಗಿ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ದ.ಕ.ಜಿಲ್ಲಾ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ದ.ಕ.ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು.

ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಯಾದವ ಶೆಟ್ಟಿ ಮಾತನಾಡಿ, ದೇಶದ ಅನೇಕ ಭಾಗಗಳಲ್ಲಿ ಭೀಕರ ಮಳೆ ಮತ್ತು ಪ್ರವಾಹದಿಂದಾಗಿ ರೈತರ ಬೆಳೆ, ಭೂಮಿ ನಾಶವಾಗಿದೆ, ಅದಕ್ಕೆ ಶೀಘ್ರ ಪರಿಹಾರ ನೀಡಬೇಕಾಗಿದೆ. 5 ವರ್ಷಗಳಿಗೂ ಹಿಂದೆ ರೈತರ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆ ನೀಡಲಾಗುವುದೆಂದು ಪ್ರಧಾನಿಯಾಗುವ ಮೊದಲು ಹಲವಾರು ಚುನಾವಣಾ ಪ್ರಚಾರ ಸಭೆಗಳಲ್ಲಿ ನರೇಂದ್ರ ಮೋದಿಯವರು ಹೇಳಿದ್ದರು. ಅದನ್ನು ಇನ್ನೂ ಅವರು ಜಾರಿ ಮಾಡಿಲ್ಲ. ರೈತರ ಆತ್ಮಹತ್ಯೆಗಳು ಮುಂದುವರಿದೇ ಇವೆ. ಕೇಂದ್ರ ಸರಕಾರವು ಅನುಸರಿಸುತ್ತಿರುವ ನೀತಿಗಳಿಂದ ಶ್ರೀಮಂತ ಉದ್ಯಮಿಗಳಿಗೆ ಪ್ರಯೋಜನವಾಗುತ್ತಿದೆಯೇ ಹೊರತು, ರೈತರಿಗೂ ಕಾರ್ಮಿಕರಿಗೂ ಅಲ್ಲ ಎಂದವರು ಟೀಕಿಸಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡಿ, ಮೋದಿ ಸರಕಾರವು ಕಾರ್ಮಿಕರ ಪರವಾಗಿದ್ದ 44 ಕಾನೂನುಗಳನ್ನು ದುರ್ಬಲಗೊಳಿಸಿ ನಾಲ್ಕು ಕೋಡ್‌ಗಳಾಗಿ ಪರಿವರ್ತಿಸಿದೆ. ಈಗಾಗಲೇ ಪಾರ್ಲಿಮೆಂಟಿನಲ್ಲಿ ಅಂಗೀಕರಿಸಿರುವ ಕೋಡ್‌ನಂತೆ ಕಾರ್ಮಿಕರ ದಿನದ ಕೆಲಸದ ಅವಧಿಗೆ ಮಿತಿಗಳಿರುವುದಿಲ್ಲ, ಕನಿಷ್ಠ ವೇತನ ಸೌಲಭ್ಯ ಇರುವುದಿಲ್ಲ, ಪಿ.ಎಫ್, ಹೆರಿಗೆ ಭತ್ತೆ ಇತ್ಯಾದಿ ಭದ್ರತೆಗಳನ್ನು ತೆಗೆದು ಹಾಕಲಾಗುತ್ತಿದೆ. ಇನ್ನೊಂದೆಡೆ ಕಟ್ಟಡ ಕಾರ್ಮಿಕರ ವತಿಯಿಂದ ಸಂಗ್ರಹಿಸಲಾಗಿರುವ ರೂ.70,000 ಕೋಟಿ ಸೆಸ್, ಬೀಡಿ ಕಾರ್ಮಿಕರೇ ಮೊದಲಾದ ವಿಭಾಗಗಳಿಗೆ ಪಾವತಿಯಾಗಬೇಕಾಗಿದೆ. ರೂ.60,000 ಕೋಟಿ ಪಿ.ಎಫ್. ಮೊಬಲಗು ಇತ್ಯಾದಿಯನ್ನೆಲ್ಲ ಸರಕಾರ ಕಾರ್ಮಿಕರಿಗಾಗಿ ವೆಚ್ಚ ಮಾಡುವ ಬದಲು, ಕೇಂದ್ರ ಸರಕಾರದ ಆರ್ಥಿಕ ಕೊರತೆಯನ್ನು ಭರ್ತಿ ಮಾಡುವ ಹುನ್ನಾರ ಕಂಡು ಬರುತ್ತಿದೆ. ಅನೇಕ ಉದ್ದಿಮೆಗಳು ಮುಖ್ಯವಾಗಿ ಮೋಟಾರು ಉದ್ದಿಮೆ ಮುಚ್ಚಲಾಗುತ್ತಿದ್ದು, ಸಾವಿರಗಟ್ಟಲೆ ಕಾರ್ಮಿಕರನ್ನು ಮನೆಗೆ ಕಳುಹಿಸಲಾಗಿದೆ ಎಂದು ದೂರಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ನೋಟು ಅಮಾನ್ಯೀಕರಣ ಜಿಎಸ್‌ಟಿ ಇತ್ಯಾದಿ ಆರ್ಥಿಕ ಕ್ರಮಗಳ ಬಳಿಕ, ದೇಶವು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ರಕ್ಷಣಾ ವಲಯವನ್ನೂ, ರೈಲ್ವೆಯನ್ನೂ, ವಿಮಾನ ನಿಲ್ದಾಣಗಳನ್ನೂ ಖಾಸಗೀಕರಣ ಮಾಡುವ ಪ್ರಯತ್ನ ನಡೆಯುತ್ತಿದ್ದು, ಅವುಗಳ ಕಾರ್ಮಿಕರು ಕೂಡಾ ಮುಷ್ಕರ ಹಾಗೂ ಪ್ರತಿಭಟನೆಗಳನ್ನು ನಡೆಸಿದ್ದಾರೆ. ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಪ್ರಧಾನ ಮಂತ್ರಿ ಹಾಗೂ ವಿತ್ತ ಮಂತ್ರಿಗಳು ಹೇಳುತ್ತಿರುವ ಬೊಗಳೆ ಮಾತುಗಳಿಗೆ ಜನತೆ ಬಲಿ ಬೀಳಬಾರದೆಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ವಾಸುದೇವ ಉಚ್ಚಿಲ, ಜಯಂತ ಅಂಬ್ಲಮೊಗರು, ಸಿಐಟಿಯು ಜಿಲ್ಲಾ ಮುಖಂಡರಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ರಾಮಣ್ಣ ವಿಟ್ಲ, ಬಿ.ಜಯಂತಿ ಶೆಟ್ಟಿ, ಗಂಗಯ್ಯ ಅಮೀನ್, ಜಯಂತ ನಾಯಕ್ ಭಾಗವಹಿಸಿದ್ದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ವಂದಿಸಿದರು. ■

ಹಲವು ಬೇಡಿಕೆಗಳಿಗೆ ಆಗ್ರಹಿಸಿ ಹೆಮ್ಮಾಡಿಯಲ್ಲಿ ಸಿಪಿಐ(ಎಂ) ಧರಣಿ:

ಕೊರೋನಾ ಸಂಕಷ್ಟಕ್ಕೊಳಗಾದ ಜನತೆಯ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಪಿಎಂ ಹೆಮ್ಮಾಡಿ ಕಟ್ಟಡ ಶಾಖೆ ನೇತೃತ್ವದಲ್ಲಿ ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮ ಪಂಚಾಯತ್ ಎದುರು ಸೋಮವಾರ ಧರಣಿ ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿ ಕೊರೋನಾ ತಡೆಗಟ್ಟಬೇಕಾದರೆ ಕೃಷಿಕೂಲಿಕಾರರು ಮತ್ತು ಕಾರ್ಮಿಕರ ಪೌಷ್ಠಿಕಾಂಶಯುಕ್ತ ಆಹಾರ ಹಾಗೂ ಮುಂದಿನ 6 ತಿಂಗಳವರೆಗೆ ಮಾಸಿಕ 7500/– ರೂ.ನಗದು ವರ್ಗಾಯಿಸಬೇಕು. ಅಲ್ಲದೇ ಸಿಪಿಎಂ ಪಕ್ಷವು ಮಂಡಿಸಿರುವ 15 ಬೇಡಿಕೆಗಳನ್ನು ಜಾರಿಮಾಡಬೇಕು ಎಂದರು.

ಸಿಪಿಎಂ ರಾಜ್ಯ ಮುಖಂಡರಾದ ಕೆ.ಶಂಕರ್ ಮಾತನಾಡಿದರು. ಬಳಿಕ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಿಪಿಎಂ ಕಾರ್ಯದರ್ಶಿ ಮಂಡಳಿ ಸದಸ್ಯ ವೆಂಕಟೇಶ್ ಕೋಣಿ, ಸ್ಥಳೀಯ ಮುಖಂಡರಾದ ಸಂತೋಷ್ ಹೆಮ್ಮಾಡಿ, ನರಸಿಂಹ ಹೆಮ್ಮಾಡಿ, ರಾಮ ಕುಲಾಲ್, ಸಿಪಿಎಂ ಜಿಲ್ಲಾ ಸಮಿತಿ ಮುಖಂಡರಾದ ರಾಜೀವ ಪಡುಕೋಣೆ, ನಾಗರತ್ನ ನಾಡ ಮತ್ತಿತರರು ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಬೈಂದೂರಿನಲ್ಲಿ ರೈತರ ಧರಣಿ:

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರೈತರ, ಕಾರ್ಮಿಕರ, ಕೂಲಿಕಾರರ ಐಕ್ಯ ಧರಣಿ ಸೆ. 5 ರಂದು ಬೈಂದೂರು ತಾಲೂಕು ಪಂಚಾಯತ್ ಎದುರು ನಡೆಯಿತು.

ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ಪ್ರತಿಯೊಬ್ಬರನ್ನು ಉಚಿತವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಿ ಉಚಿತ ಚಿಕಿತ್ಸೆ ಒದಗಿಸಬೇಕು. ಮುಂದಿನ 6 ತಿಂಗಳವರೆಗೆ ಮಾಸಿಕ 7500/– ರೂ.ಕೋವಿಡ್ ಪರಿಹಾರ ನೀಡಬೇಕು. ಕುಟುಂಬದ ಪ್ರತಿ ಸದಸ್ಯನಿಗೂ ಮಾಸಿಕ 10 ಕೆ.ಜಿ.ಉಚಿತ ಆಹಾರ ಧಾನ್ಯ ವಿತರಿಸಬೇಕು. ಉದ್ಯೋಗ ಖಾತ್ರಿ ವೇತನವನ್ನು ಕನಿಷ್ಟ 6,000 ರೂ.ಗೆ ಹೆಚ್ಚಿಸಬೇಕೆಂಬ ಆಗ್ರಹ ಕೇಳಿ ಬಂತು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಕೆ.ಶಂಕರ್, ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕೃಷಿ ಕೂಲಿಕಾರ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಮಾತನಾಡಿದರು. ಈ ಕುರಿತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಭಾರತಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭ ಸಂಘಟನೆಯ ಮುಖಂಡರಾದ ನಾಗರತ್ನಾ ನಾಡ, ರಾಜೀವ ಪಡುಕೋಣೆ, ರಾಘವೇಂದ್ರ ಬಿಜೂರು, ಕಟ್ಟಡ ಕಾರ್ಮಿಕ ಮುಖಂಡರಾದ ಉದಯ ಗಾಣಿಗ, ವಿಜಯ ಕೋಯನಗರ, ಮಂಜು ಪಡುವರಿ ಮತ್ತಿತರರು ಉಪಸ್ಥಿತರಿದ್ದರು.

ತುಮಕೂರು ಜಿಲ್ಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ......... ಪುಟ 3 ರಿಂದ

ಕಲ್ಪಿಸಿಕೊಡಬೇಕೆಂದು ವಿನಂತಿ.

6. ರಂಗಸ್ವಾಮಿ ಬೆಟ್ಟದ ಕಾವಲು ಸರ್ವೆ ನಂ 1 ರಲ್ಲಿ 40–50 ವರ್ಷಗಳಿಂದ ದಲಿತರು ಭೂಮಿ ಉಳುಮೆ ಮಾಡುತ್ತಿದ್ದು ಉಳುಮೆ ಚೀಟಿ ಹೊಂದಿದ್ದಾರೆ, ಕೆಲವರ ಹತ್ತಿರ ಇದ್ದ ಉಳುಮೆ ಚೀಟಿಯನ್ನು ಅರಣ್ಯ ಇಲಾಖೆಯವರು ಕಸಿದುಕೊಂಡು ಉಳುಮೆ ಮಾಡುತಿದ್ದ ಕೆಲವರನ್ನು ಒಕ್ಕಲೆಬ್ಬಿಸಲಾಗಿದೆ ಈಗ ದಲಿತರು ನಿರ್ಗತಿಕರಾಗಿದ್ದಾರೆ. ಹಕ್ಕು ಪತ್ರ ನೀಡಿರುವುದಿಲ್ಲ.
7. ಮಧುಗಿರಿ ತಾಲೋಕ್ ಕೋಡುಗೇನಹಳ್ಳಿ ವೆಂಗಮ್ಮನಹಳ್ಳಿ ಸರ್ವೇ 156, 158 ಗೋಮಾಳದಲ್ಲಿ 25 ಜನ ದಲಿತರು ಬಗರ್ ಹುಕುಂ ದಾರರು ಭೂಮಿಯಲ್ಲಿ ಮೂವತ್ತು ವರ್ಷಗಳಿಂದ ಉಳುಮೆ ಮಾಡುತ್ತಿದ್ದು ಉಳುಮೆ ಚೀಟಿ ಹೊಂದಿದ್ದಾರೆ. ಹಕ್ಕು ಪತ್ರ ನೀಡಿರುವುದಿಲ್ಲ. ಅದೇ ರೀತಿ ಗಿಡ್ಡಯ್ಯನ ಪಾಳ್ಯ ಪುರನರ ಹೋಬಳಿ, ಗಾಮಕಾರನಹಳ್ಳಿಯಲ್ಲಿ 40 ಎಕರೆ ಜಮೀನು ಉಳುಮೆ ಮಾಡುತ್ತಿದ್ದಾರೆ. ಹಕ್ಕು ಪತ್ರ ನೀಡಿರುವುದಿಲ್ಲ.
8. ಮದುಗಿರಿ ಪುರಸಭೆ ಯಲ್ಲಿ ಮಲ್ಲೇ ರಂಗಯ್ಯ ರವರು 2000ನೇ ಇಸವಿಯಲ್ಲಿ ಖಾತೆ ಮಾಡಿಕೊಂಡು ಕಂದಾಯ ಕಟ್ಟಿರುವ ನಿವೇಶನ ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಲು ಕ್ರಮ ಜರುಗಿಸಬೇಕು. ಈಗಾಗಲೇ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದರು ಆದೇಶ ಜಾರಿಗೋಳಿಸುತ್ತಿಲ್ಲ.
9. ಅಂಬೇಡ್ಕರ್ ಅಭಿವೃದ್ದಿ ನಿಗಮ ಮತ್ತು ಇತರೆ ನಿಗಮದ ಎಸ್.ಸಿ/ಎಸ್.ಟಿ ಯೋಜನೆಯಲ್ಲಿ ಕೊಳವೆ ಭಾವಿ, ಅರ್ಜಿಸಲ್ಲಿಸಿರುವ ಎಲ್ಲಾರಿಗೂ ತಕ್ಷಣ ಕೊಳವೆ ಬಾವಿ ಸೌಲಭ್ಯ ಒದಗಿಸಬೇಕೆಂದು ಅದಕ್ಕಾಗಿ ಸರ್ಕಾರ 2 ಕೋಟಿ ಹಣ ಬಿಡುಗಡೆ ಮಾಡಬೇಕು.
10. ಆದೇ ರೀತಿ ಭೂಮಿ ಇಲ್ಲಧವರಿಗೆ 5 ಎಕರೆ ಭೂಮಿ, ವಸತಿ ಇಲ್ಲದವರಿಗೆ ವಸತಿ, ಇತರೆ ಯೋಜನೆಯಲ್ಲಿ ಅರ್ಜಿ ಹಾಕಿರುವ ಎಲ್ಲರಿಗೂ ಸೌಲಭ್ಯ ಸಿಗಬೇಕು ಎಂದು ಒತ್ತಾಯಿಸುತ್ತೇವೆ.



ತುಮಕೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಅನೇಕ ದೌರ್ಜನ್ಯಗಳನ್ನು ವಿರೋಧಿಸಿ ಸೆಪ್ಟೆಂಬರ್ 7, 2020 ರಂದು ಜಿಲ್ಲೆಯ ವಿವಿಧ ತಾಲೂಕುಗಳಿಂದ ಬಂದಿದ್ದ ದಲಿತರು ಪ್ರತಿಭಟನೆಯನ್ನು ನಡೆಸಿದರು. ಸಭೆಯನ್ನು ಉದ್ದೇಶಿಸಿ ರಾಜ್ಯ ಸಂಚಾಲಕರಾದ ಗೋಪಾಲ ಕೃಷ್ಣ ಹರಳಹಳ್ಳಿ ಮಾತಾನಾಡಿದರು. ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಅಜ್ಜಪ್ಪ, ಸಿಐಟಿಯು ರಾಜ್ಯ ಮುಖಂಡರಾದ ಮುಜೀಬ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸುಬ್ರಹ್ಮಣ್ಯ, ಡಿಹೆಚ್‌ಎಸ್ ರಾಜ್ಯ ಸಹ ಸಂಚಾಲಕರದ ರಾಜಣ್ಣ ಎನ್, ನಾಗಣ್ಣ, ರಾಜ್ಯ ಮುಖಂಡರಾದ ಮಹಾದೇವ ಕುಮಾರ್, ಗೌರಮ್ಮ ಕುಣಿಗಲ್, ಅಶೋಕ್ ಮದುಗಿರಿ ಮತ್ತು ಜಿಲ್ಲಾ ಸಂಚಾಲಕರಾದ ರಾಜು ವೆಂಟಪ್ಪ ಮಾತಾನಾಡಿದರು. ಎಸಿ ಮತ್ತು ಡಿವೈಎಸ್‌ಪಿ ಮನವಿ ಸ್ವೀಕರಿಸಿ ದಿನಾಂಕ ನಿಗದಿಗೊಳಿಸುವುದಾಗಿ ತಿಳಿಸಿದರು. ಕೊನೆಯದಾಗಿ ಜಿಲ್ಲಾ ಸಂಚಾಲಕ ರಾಜು ವೆಂಕಟಪ್ಪ ನೇತ್ರತ್ವ ವಹಿಸಿದ್ದರು. ಗಂಗ ವಂದಿಸಿದರು. ●


ಬಿಬಿಎಂಪಿ

ನಾವು ಕಟ್ಟಿದ ತೆರಿಗೆ ಹಣಕ್ಕೆ ಲೆಕ್ಕ ಕೊಡಿ 'ಹೋಗುವ ಮುನ್ನ ಲೆಕ್ಕ ಕೊಟ್ಟು ಹೋಗಿ'

ಇದೇ ಸೆಪ್ಟೆಂಬರ್ 10 ಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಆಡಳಿತದ ಅವಧಿ ಮುಗಿಯುತ್ತದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ಧಕ್ಷಿಣ ಜಿಲ್ಲಾ ಸಮಿತಿಗಳ ಕರೆಯ ಮೇರೆಗೆ, ಕೇಂದ್ರ ಬಿಬಿಎಂಪಿ ಕಚೇರಿಯ ಮುಂಭಾಗ ಮಧ್ಯಾಹ್ನ ಎರಡು ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಪ್ರತಿ ಭಟನೆ ನಡೆಸಲಾಯಿತು. ಪ್ರತಿಭಟನೆಯ ಮುಂಚೂಣಿಯನ್ನು ಕಾಮ್ರೇಡ್ ಕೆ.ಎನ್. ಉಮೇಶ್ ಮತ್ತು ಕಾಮ್ರೇಡ್ ಎನ್ ಪ್ರತಾಪ್ ಸಿಂಹ ವಹಿಸಿದ್ದರು. ಸುಮಾರು 200 ಕ್ಕೂ ಹೆಚ್ಚು ಜನರು ಪ್ರತಿಭಟನೆ ಯಲ್ಲಿ ಭಾಗವಹಿಸಿದ್ದರು.

ಇದರ ಭಾಗವಾಗಿ, ವಲಯ ವ್ಯಾಪ್ತಿಗಳಲ್ಲಿಯೂ ಬೆಳಿಗ್ಗೆ ಆಯಾ ಬಿಬಿಎಂಪಿ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು. ಬೆಂಗಳೂರು ಪೂರ್ವ ವಲಯದ ವ್ಯಾಪ್ತಿಯಲ್ಲಿ, ಕೆ.ಆರ್. ಪುರಂ ಬಿಬಿಎಂಪಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಯಿತು. ಕಾಮ್ರೇಡ್ ಸಿ.ರಮೇಶ್ ಬಿಎನ್ ಶ್ರೀನಿವಾಸ್ ಮಂಗಳ ಮತ್ತು ಸರೋಜ ರವರು ಮಾತನಾಡಿದರು. ಸುಮಾರು 60 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.


ಅದೇ ರೀತಿ ರಾಜಾಜಿನಗರ ವಲಯ ಸಮಿತಿ, ಕಾರ್ಯದರ್ಶಿ ಕಾಮ್ರೇಡ್ ವೀರಮಣಿ ನೇತೃತ್ವದಲ್ಲಿ ಮತ್ತು ಉತ್ತರ ವಲಯ ಸಮಿತಿ ಕಾರ್ಯದರ್ಶಿ ಹುಳ್ಳಿ ಉಮೇಶ್ ಮತ್ತು ವಿಜಯ ಕುಮಾರಿ, ವಿಜಯ ಲಕ್ಷ್ಮಿ ನೇತೃತ್ವದಲ್ಲಿ ಟಿ.ದಾಸರಹಳ್ಳಿ ಜಂಟೀ ಕಮಿಷನರ್ ಕಛೇರಿ ಎದುರು ನಡೆದ ಪ್ರತಿಭಟನೆ. ಹಾಗೆಯೇ ರಾಜಗೋಪಾಲ್ ನಗರ, ಹೆಗ್ಗನಹಳ್ಳಿ, ಮುನಿರೆಡ್ಡಿಪಾಳ್ಯದ ಬಿ.ಬಿ.ಎಂ.ಪಿ ಕಛೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯ ಮೂಲ ಉದ್ದೇಶವೆಂದರೆ," ಹೋಗುವ ಮುನ್ನಾ ಲೆಕ್ಕಾ ಕೊಟ್ಟು ಮನೆಗೆ ಹೋಗಿ" ಲಾಕ್ ಡೌನ್ ಕಾಲದಲ್ಲಿ ವಿತರಿಸಿದ ರೇಷನ್ ಕಿಟ್ ಗಳ ಲೆಕ್ಕ ಕೊಡಿ, ಕಂಟೈನ್ ಮೆಂಟ್ ಝೋನ್ ಗಳಿಗೆ ಬಳಕೆಯಾದ ಹಣದ ಲೆಕ್ಕ ಕೊಡಿ, ಮೇಯರ್, ಉಪ ಮೇಯರ್, ಆಡಳಿತ ಪಕ್ಷದ ನಾಯಕರ ವಿವೇಚನಾ ನಿಧಿ ರೂ. 375 ಕೋಟಿಯನ್ನು ಯಾವುದಕ್ಕೆ ಖರ್ಚು ಮಾಡಿದ್ದೀರಿ ಲೆಕ್ಕ ಕೊಡಿ, ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ಕೊಡಿಸಲು ಖರ್ಚು ಮಾಡಿದ ಲೆಕ್ಕ ಕೊಡಿ, ಎಂದು ಒತ್ತಾಯಿಸಲಾಯಿತು.

ಕೊನೆಯಲ್ಲಿ ತಟ್ಟೆ ಬಾರಿಸುವುದರ ಮೂಲಕ ಬಿಬಿಎಂಪಿ ಅಧಿಕಾರಿಗಳನ್ನು ಎಚ್ಚರಿಸಲಾಯಿತು

ಕೇಂದ್ರ ಕಚೇರಿಯ ಮುಂದೆ ನಡೆದ ಪ್ರತಿಭಟನೆಯಲ್ಲಿ, ಕಾಮ್ರೇಡ್ ಉಮೇಶ್, ಕಾಮ್ರೇಡ್ ಎನ್. ಪ್ರತಾಪ್ ಸಿಂಹ, ಕಾಮ್ರೇಡ್ ಗೋಪಾಲಗೌಡರು, ಗೌರಮ್ಮ, ಹಾಗೆಯೇ, ವಲಯ ಸಮಿತಿಯ ಕಾರ್ಯದರ್ಶಿಗಳಾದ ಕಾಮ್ರೇಡ್ ನಾಗರಾಜ ನಂಜುಂಡಯ್ಯ,, ಪಿ.ನಾಗರಾಜ್ ವೀರಮಣಿ, ಸಿ. ರಮೇಶ್, ಸೆಲ್ವಿ ವಕೀಲರು ಇನ್ನಿತರರು ಭಾಗವಹಿಸಿ, ಮಾತನಾಡಿದರು. ಆ ನಂತರ, ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು. ವಲಯ ಸಮಿತಿ ಗಳಲ್ಲಿ ಯೂ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.


ದಾಸರಹಳ್ಳಿ


ಕೆ.ಆರ್. ಪುರಂ

ಅಕಾಡೆಮಿಗಳಿಗೆ ಹಣ ಕಡಿತ, ಸಾಂಸ್ಕೃತಿಕ ಚಿಂತಕರ ಆಕ್ರೋಶ

ಅಕಾಡೆಮಿಗಳ ಅನುದಾನವನ್ನು ಕೊರೊನಾ ಸಂಕಷ್ಟಕ್ಕೆ ಸಿಲುಕಿದ್ದ ಕಲಾವಿದರಿಗೆ ಹಾಗೂ ಸಾಹಿತಿಗಳಿಗೆ ಬಳಸಿಕೊಂಡಿರುವ ಕಾರಣವನ್ನು ಮುಂದೆ ಮಾಡಿ, ಈ ಬಾರಿಯ ವಾರ್ಷಿಕ ಅನುದಾನವನ್ನು ರಾಜ್ಯ ಸರಕಾರ ಕಡಿತ ಮಾಡಿದೆ. ಇದೇ ವೇಳೆ 39 ಮಠಗಳಿಗೆ ತಲಾ ಒಂದು ಕೋಟಿ ರೂ. ಹಣ ನೀಡಲು ರಾಜ್ಯ ಸರಕಾರ ಮುಂದೆ ಬಂದಿದೆ. ಹಣದ ಕೊರತೆಯ ನೆಪ ಒಡ್ಡಿ ಅಕಾಡೆಮಿಗಳಿಗೆ ಹಣ ಕಡಿತ ಮಾಡಿರುವ ಸರಕಾರ ಮಠಗಳಿಗೆ ಹಣ ಕೊಡಲು ಮುಂದಾಗಿರುವ ಕ್ರಮ ಎಷ್ಟು ಸರಿ?

ಅಕಾಡೆಮಿಯಲ್ಲಿದ್ದ ಹಣವನ್ನು ಕೊರೊನಾ ಸಂಕಷ್ಟಕ್ಕೆ ಬಳಸಿಕೊಂಡಿದ್ದ ಸರಕಾರ ಅದನ್ನು ವಾಪಸ್ಸು ನೀಡದೆ ಅಕಾಡೆಮಿಗೆ ದೋಖಾ ಮಾಡಿತ್ತು. ಈಗ ಅನುದಾನಕ್ಕೆ ಕತ್ತರಿ ಹಾಕಿದೆ. ಸರಕಾರದ ಈ ನಡೆಗೆ ಸಾಂಸ್ಕೃತಿಕ ವಲಯದ ಚಿಂತಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ವರ್ಷ ಕ್ರೀಯಾಯೋಜನೆ ರೂಪಿಸುವಾಗ ಹಿಂದೆ ನೀಡಿದ್ದ ಅನುದಾನಕ್ಕೆ 5% ಅಥವಾ 10% ಏರಿಕೆಯನ್ನು ಮಾಡಲಾಗುತ್ತದೆ. ಆದರೆ ಈಗ ಕತ್ತರಿ ಹಾಕಿದ್ದಕ್ಕೆ ಹಲವು ಅನುಮಾನಗಳು ಕಾರಣವಾಗಿದೆ. 2018 ರಲ್ಲಿ ಅಕಾಡೆಮಿಗಳಿಗೆ 1 ಕೋಟಿ ರೂ ಅನುದಾನ ಕೊಡುತ್ತಿದ್ದರು. ನಂತರ ಅಂದರೆ 2018–19 ರಲ್ಲಿ ಚಿಂತಕರ ಪ್ರಯತ್ನದಿಂದಾಗಿ ಅದು 1 ಕೋಟಿ 10 ಲಕ್ಷ ರೂ. ಗೆ ಏರಿಕೆಯಾಯಿತು. ಈಗ ಅದನ್ನು 80 ಲಕ್ಷಕ್ಕೆ ಇಳಿಕೆ ಮಾಡಲಾಗಿದೆ. ಈ ಮೊದಲು ಸಿಬ್ಬಂದಿಗಳಿಗೆ ವೇತನವನ್ನು ಪ್ರತ್ಯೇಕ ಶೀರ್ಷಿಕೆಯಲ್ಲಿ ಕೊಡುತ್ತಿದ್ದರು. ಈಗ ಆ ಶೀರ್ಷಿಕೆಯನ್ನೆ ತೆಗೆದು ಹಾಕಿದ್ದಾರೆ ಎಂಬ ಚರ್ಚೆಗಳು ನಡೆಯುತ್ತಿವೆ. ಇದು ನಿಜವೆ ಆದರೆ ಕೊಟ್ಟಿರುವ 80 ಲಕ್ಷದಲ್ಲಿ 30% ಹಣವನ್ನು ಸಿಬ್ಬಂದಿಗಳ ವೇತನಕ್ಕೆ ಇಟ್ಟು ಉಳಿದ 50 ಲಕ್ಷ ರೂ. ಗಳಲ್ಲಿ ಕಾರ್ಯಕ್ರಮ ನಡೆಸುವುದು ಸಾಧ್ಯವೆ? ಎಂದು ಸಾಂಸ್ಕೃತಿಕ ವಲಯದ ಚಿಂತಕರು ಸರಕಾರವನ್ನು ಪ್ರಶ್ನಿಸುತ್ತಿದ್ದಾರೆ.

ಈ ಕುರಿತು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಅರವಿಂದ ಮಾಲಗತ್ತಿಯವರು ಪ್ರತಿಕ್ರಿಯಿಸಿದ್ದು ಮಠಗಳಿಗೆ 1 ಕೋಟಿ ಹಣದಂತೆ 39 ಮಠಗಳಿಗೆ ಹಣಕೊಡುವುದಾಗಿ ತಿಳಿಸಿದೆ. ಆದರೆ ಅದೇ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತ ಅಕಾಡೆಮಿಗಳ ಅನುದಾನ ಕಡಿತ ಸೂಕ್ತವಾದುದಲ್ಲ. ಹಿಂದಿನ ಯೋಜನೆಗಳಿಗೆ ಮೀಸಲಿಟ್ಟ ಹಣದಲ್ಲಿ ಸಾಕಷ್ಟು ಹಣ ಉಳಿದಿದೆ. ಅದನ್ನು ಬಳಸಿಕೊಳ್ಳಬೇಕು. ಸಾಹಿತ್ಯ ಅಕಾಡೆಮಿ ಸಾಕಷ್ಟು ಕೆಲಸವನ್ನು ಮಾಡಿ, ತಾನೇ ತೋಡಿಕೊಂಡಿರುವ ಹಳ್ಳಕ್ಕೆ ಬೀಳಬಾರದು ಎಂದು ಅರವಿಂದ ಮಾಲಗತ್ತಿಯವರು ತಿಳಿಸಿದ್ದಾರೆ.

ಜನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಪಿಚ್ಚಳ್ಳಿ ಶ್ರೀನಿವಾಸ್ ಪ್ರತಿಕ್ರೀಯೆ ನೀಡಿದ್ದು, ಅನುದಾನ ಕಡಿತಗೊಂಡರೆ ಕಾರ್ಯಕ್ರಮ ನಡೆಸಲು ಸಾಕಷ್ಟು ಸಮಸ್ಯೆ ಉದ್ಭವವಾಗಲಿದೆ. ಇದು ಸೃಜನಶೀಲ ಸಾಹಿತ್ಯ ಹಾಗೂ ಕಲಾವಿದರ ಕಲೆಯನ್ನು ಕೊಲ್ಲುವಂತಹ ಕೆಲಸವಾಗುತ್ತಿದೆ. ಸರಕಾರದ ನಡೆಯನ್ನು ಪ್ರಶ್ನಿಸಿದವರ ಧ್ವನಿಯನ್ನು ಅಡಗಿಸುವ ಕೆಲಸ ನಡೆಯುತ್ತಿದೆ. ಕಲೆ, ಸಾಹಿತ್ಯ, ಸಾಂಸ್ಕೃತಿಕ ವಿಚಾರದಲ್ಲಿ ಜನಪರವಾದ ವಿಚಾರಗಳನ್ನು ಈಗಿನ ಸಚಿವರು ಒಪ್ಪುತ್ತಿಲ್ಲ, ಇಂತವರಿಂದ ಅಕಾಡೆಮಿಗಳು ಬಲಗೊಳ್ಳಲು ಸಾಧ್ಯವಿಲ್ಲ. ಈಗ ಅದು ಕ್ರೀಯಾಶೀಲತೆಯನ್ನು ಕಳೆದುಕೊಂಡಿದೆ. ನಾಮಕಾವಸ್ತೆ ಕೆಲಸ ನಡೆಯುತ್ತಿವೆ ಎಂದು ಪಿಚ್ಚಳ್ಳಿ ಶ್ರೀನಿವಾಸ ಆರೋಪಿಸಿದ್ದಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಸಮುದಾಯ ಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಟಿ. ಸುರೇಂದ್ರರಾವ್ ಪ್ರತಿಕ್ರಿಯಿಸಿದ್ದು, ಅಕಾಡೆಮಿಗಳು ಸಾಂಸ್ಕೃತಿಕ ಸಂಸ್ಥೆಗಳು, ಪ್ರಜಾಸತ್ತಾತ್ಮಕ ಸಂಸ್ಥೆಗಳು, ಸಂವಿಧಾನಿಕ ಸಂಸ್ಥೆಗಳು ಇವುಗಳಿಗೆ ಅನುದಾನ ಕಡಿತ ಮಾಡುವುದರಲ್ಲಿ ಸಾಂಸ್ಕೃತಿ ರಾಜಕೀಯ ಅಡಗಿದೆ. ಆಶ್ಚರ್ಯವೆಂಬಂತೆ ರಾಜ್ಯ ಸರ್ಕಾರ ಮಠಗಳಿಗೆ 1 ಕೋಟಿ ಹಣ ನೀಡುವುದಾಗಿ ಹೇಳಿದೆ. ಮಠಗಳು ಪಾಳೆಗಾರಿಕೆ ಸಂಸ್ಥೆಗಳ ಭಾಗ, ಪ್ರಜಾಪ್ರಭುತ್ವ ನಾಶಮಾಡಿ ಪಾಳೆಗಾರಿಕೆ ಜಾರಿಮಾಡುವುದು ಬಿಜೆಪಿ, ಆರ್‌ಎಸ್‌ಎಸ್ ಹುನ್ನಾರ. ನಮ್ಮ ದೇಶ ವೈವಿಧ್ಯಮಯದಿಂದ ಕೂಡಿದೆ. ಸೌಹಾರ್ದ ಪರಂಪರೆಯನ್ನು ಪಾಲಿಸುತ್ತಾ ಬಂದಿದೆ. ಬಹು ಸಂಸ್ಕೃತಿಯ ನಾಡಿನಲ್ಲಿ ಏಕ ಸಂಸ್ಕೃತಿ ತರುವುದು ಬಿಜೆಪಿ ಸರ್ಕಾರದ ಉದ್ದೇಶ, ಹೀಗಾಗಿ ಅಕಾಡೆಮಿಗಳ ಅನುದಾವನ್ನು ಕಡಿತ ಮಾಡಿ, ಅವುಗಳನ್ನು ದುರ್ಬಲಗೊಳಿಸುವುದು ಇದರ ಉದ್ದೇಶವಾಗಿದೆ ಎಂದು ಸುರೇಂದ್ರರಾವ್‌ರವರು ಕಿಡಿಕಾರಿದ್ದಾರೆ.

ನಾಡಿನ ಸಾಹಿತ್ಯ, ಸಾಂಸ್ಕೃತಿಯನ್ನು, ಕನ್ನಡದ ಗರಿಮೆಯನ್ನು ಎಲ್ಲೆಡೆ ಪಸರಿಸಲು ಪ್ರಯತ್ನ ಮಾಡುತ್ತಿರುವ ಅಕಾಡೆಮಿಗಳಿಗೆ ಬಲ ನೀಡುವ ಕೆಲಸ ಹೆಚ್ಚಾಗಬೇಕಿದೆ. ಹಣವನ್ನು ಕಡಿತ ಮಾಡುವ ಬದಲು ಇನ್ನಷ್ಟು ಅನುದಾನವನ್ನು ಹೆಚ್ಚಿಸಲು ರಾಜ್ಯ ಸರಕಾರ ಮುಂದೆ ಬರಬೇಕಿದೆ.

ಉಪ್ಪುಂದ: ಉದ್ಯೋಗ ಖಾತ್ರಿ ಕೂಲಿಕಾರರ ಸಮಾವೇಶ



ಉಪ್ಪುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿಕಾರರ ಸಮಾವೇಶ ಉಪ್ಪುಂದದ ಕಾಸನಾಡಿ ದೈವಸ್ಥಾನ ವಠಾರ ಹಾಗೂ ಉಪ್ಪುಂದ ಅಮ್ಮನರ್ ತೊಪ್ಲುನಲ್ಲಿ 9 ಸೆಪ್ಟೆಂಬರ್ 2020 ರಂದು ಯಶಸ್ವಿ ಯಾಗಿ ಜರುಗಿತು. ಕೂಲಿಕಾರರ ಸಮಾವೇಶದಲ್ಲಿ ಕಾಯಕ ಸಂಘ ರಚನೆ ಮಾಡಲಾಯಿತು. ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಕೂಲಿಕಾರರನ್ನು ದ್ದೇಶಿಸಿ ಮಾತನಾಡಿ, ನರೇಗಾ ಯೋಜನೆಯ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಸಂಘಟಿತ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಸಭೆಯಲ್ಲಿ ಕಾಸನಾಡಿ ಮತ್ತು ಅಮ್ಮನರ್ ತೊಪ್ಲು ಪ್ರದೇಶದ ಎರಡು ಕಾಯಕ ಸಂಘ ರಚಿಸಲಾಯಿತು, ಕ್ರಮವಾಗಿ ಜ್ಯೋತಿ ಜನಾರ್ಧನ ಕುಂದರ್ ಮತ್ತು ಲಕ್ಷ್ಮಿ ರಾಮ ಖಾರ್ವಿ ಇವರನ್ನು ಕಾಯಕ ಬಂಧುಗಳನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯ ಕೊನೆಯಲ್ಲಿ ಮೀನುಗಾರರ ಸಂಘದ ಅಧ್ಯಕ್ಷ ಕೆ.ಶಂಕರ್ ರವರು ಮೀನುಗಾರರ ಸಂಘಟನೆ ಉದ್ದೇಶ, ಕಾರ್ಯಕ್ರಮದ ಕುರಿತು ಹಾಗೂ ಸಂಘಟನೆಯ ಅವಶ್ಯಕತೆ ಬಗ್ಗೆ ವಿವರಿಸಿದರು. ಉಪ್ಪುಂದದ ಕಾಸನಾಡಿಯಲ್ಲಿ ದಿನಾಂಕ 17 ಸೆಪ್ಟೆಂಬರ್ 2020ರಂದು ಮೀನುಗಾರರ ಮತ್ತು ಮೀನು ಕಾರ್ಮಿಕರ ಸಮಾವೇಶ ಯಶಸ್ವಿಯಾಗಿ ಜರುಗಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ಕಾರ್ಮಿಕ ಮುಖಂಡರಾದ ಮಾಧವ ದೇವಾಡಿಗ ಉಪ್ಪುಂದ, ಮಾಧವ ಪೂಜಾರಿ, ಶ್ರೀಧರ್ ಅಮ್ಮನರ್ ತೊಪ್ಲು, ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಬೈಂದೂರು ಅಧ್ಯಕ್ಷ ಬಾಬು ಕೆ. ದೇವಾಡಿಗ ಮೊದಲಾದವರು ಇದ್ದರು. ಕಾಯಕ ಬಂಧು ಜ್ಯೋತಿ ಜನಾರ್ಧನ ಕುಂದರ್ ಎಲ್ಲರಿಗೂ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಕರ್ನಾಟಕ ಕೊರೋನಾ ಕಾಲದಲ್ಲಿ, ಮೊದಲು ಮತ್ತು ನಂತರ

ಕರ್ನಾಟಕದ ದುಡಿಯುವ ಜನ ಕ್ರೂರ ದಮನ ಕಾಣಲಿದ್ದಾರೆ

ಕರ್ನಾಟಕದ ಯಾವುದೇ ಬಿಜೆಪಿ ನಾಯಕರಿಗೆ ಬಲಾಢ್ಯವಾದ, ಕೇಂದ್ರೀಕರಣವನ್ನು ಆರಾಧಿಸುವ ಪ್ರಾಂತೀಯ ರಾಜಕೀಯ ಶಕ್ತಿಗಳನ್ನು ಮೂಲೆಗುಂಪು ಮಾಡಲು ಬಯಸುವ ರಾಷ್ಟ್ರನಾಯಕರನ್ನು ಪ್ರಶ್ನಿಸುವ ಸಾಮರ್ಥ್ಯವೇ ಇಲ್ಲ. ಇದರ ಪರಿಣಾಮವೆಂದರೆ ಕೊರೋನಾ ಪಿಡುಗನ್ನು ತಡೆಗಟ್ಟುವುದರಲ್ಲಿ ಆಗಿರುವ ಆಘಾತಕಾರಿ ಸೋಲು.. ಸಂಪೂರ್ಣವಾಗಿ ಬಂಡವಾಳಶಾಹಿಗಳ ಪರವಾಗಿರುವ ಕರ್ನಾಟಕದ ರಾಜಕೀಯ ವ್ಯವಸ್ಥೆಯು ಇನ್ನು ಮುಂದೆ ರೈತರನ್ನು, ಕಾರ್ಮಿಕರನ್ನು, ಅಸಂಘಟಿತ ಶ್ರಮಜೀವಿಗಳನ್ನು ಅತ್ಯಂತ ಕ್ರೂರವಾಗಿ ದಮನಿಸುತ್ತದೆ. ಏಕೆಂದರೆ ಅಂತರರಾಷ್ಟ್ರೀಯ ಬಂಡವಾಳಶಾಹಿಯ ಈಗಿನ ಅಪೇಕ್ಷೆಯೆಂದರೆ – ಬಲಿಷ್ಠವಾದ ಸರ್ವಾಧಿಕಾರಿ ಪ್ರಭುತ್ವಗಳು; ಈ ಪ್ರಭುತ್ವಗಳ ಆದೇಶಗಳನ್ನು ಪಾಲಿಸುವ ಸೈನಿಕರು ಮತ್ತು ಪೋಲೀಸರು; ರೈತರು, ಕಾರ್ಮಿಕರು ಇವರ ಪರವಾಗಿ ಹೋರಾಡುವ ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಅಪಾರ ಹಿಂಸೆಗೆ ಈಡು ಮಾಡುವುದಕ್ಕೆ ಸಿದ್ಧವಾಗಿರುವ ನ್ಯಾಯಾಂಗ ವ್ಯವಸ್ಥೆ. ಇವೆಲ್ಲವು ಇಂದು ಭಾರತದಲ್ಲಿವೆ. ಆದರೆ ಈ ಅಸಹ್ಯ ರಾಜಕೀಯವನ್ನು ವಿಮರ್ಶಿಸುವ, ವಿರೋಧಿಸುವ ನೆಲೆಗಳು ಕರ್ನಾಟಕದಲ್ಲಿವೆ. ಇಡೀ ದೇಶದ ಜನಸಾಮಾನ್ಯರ ಸಾವು–ಬದುಕಿನ ಸಮಸ್ಯೆ ಇರುವಾಗ, ಪ್ರಜಾಪ್ರಭುತ್ವದ ಮೂಲ ಆಕಾಂಕ್ಷೆಗಳೇ ಅಪಾಯದಲ್ಲಿರುವಾಗ ಕರ್ನಾಟಕದ ಜನಪರ ಸಂಘಟನೆಗಳು ಒಂದು ವೇದಿಕೆಯಲ್ಲಿ ಒಂದುಗೂಡಲು ಈಗಲೂ ಸಿದ್ಧರಿಲ್ಲ. ನೆನಪಿರಲಿ! ಚರಿತ್ರೆಯು ಇಂಥ ಬೇಜವಾಬಾರಿಯನ್ನು ಎಂದೂ ಕ್ಷಮಿಸುವುದಿಲ್ಲ.

ಕೊರೋನಾ ಪೂರ್ವ ಹಾಗೂ ನಂತರದ ಕರ್ನಾಟಕ ರಾಜ್ಯದ ರಾಜಕೀಯವು ಎಂದಿನಂತೆ ಅನೇಕ ವೈರುಧ್ಯಗಳನ್ನು ಒಳಗೊಂಡಿದೆ. ಒಂದು ಕಡೆಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ಯಾವುದೇ ಪಕ್ಷಕ್ಕೆ ಪ್ರಬಲವಾದ ಬಹುಮತ ಬರದಿದ್ದುದರಿಂದ ಉಂಟಾಗುವ ಅಸ್ಥಿರತೆ. ಇದರಿಂದಾಗಿ ಪ್ರಣಾಳಿಕೆಗಳಲ್ಲಿ, ರಾಜಕೀಯ ನಿಲುವುಗಳಲ್ಲಿ, ಸಿದ್ಧಾಂತಗಳಲ್ಲಿ ಯಾವುದೇ ಸಹಮತವಿಲ್ಲದ ಪಕ್ಷಗಳು ಸಮ್ಮಿಶ್ರ ಸರಕಾರಗಳನ್ನು ರಚಿಸುವಂತಾಗುತ್ತದೆ. ಈ ಸರಕಾರಗಳು ಸ್ಪಷ್ಟವಾಗಿಯೇ ತಾತ್ಕಾಲಿಕ ಹೊಂದಾಣಿಕೆಯ ಫಲಗಳು. ಈವರೆಗೂ ಯಾವುದೇ ಸಮ್ಮಿಶ್ರ ಸರಕಾರವು ಕರ್ನಾಟಕದಲ್ಲಿ common minimum ಕಾರ್ಯಕ್ರಮಗಳನ್ನು ರಚಿಸಿಕೊಳ್ಳಲೇ ಇಲ್ಲ. ಹೀಗಾಗಿ ವಿವಿಧ ನಾಯಕರುಗಳ ವರ್ಚಸ್ಸು, ಜಾತಿ, ಹಣದ ಬಲ ಇವುಗಳ ಆಧಾರದ ಮೇಲೆ ಸದಾ ಅಸ್ಥಿರವಾಗುವ ಸರಕಾರಗಳನ್ನೇ ಕಂಡಿದ್ದೇವೆ. ಹೀಗೆ ಆಗುವುದಕ್ಕೆ ಎರಡು ಮುಖ್ಯ ಕಾರಣವೆಂದರೆ ಕರ್ನಾಟಕದ ರಾಜಕೀಯವು ಏಕೀಕರಣದಿಂದ ಇಲ್ಲಿಯವರೆಗೆ ಜಾತಿ ರಾಜಕಾರಣವೇ ಆಗಿದೆ. ತಮಿಳುನಾಡಿನಲ್ಲಿ ಎಷ್ಟೇ ವೈರುಧ್ಯಗಳಿದ್ದರೂ ಒಂದು ಬಗೆಯ "ತಮಿಳು ರಾಷ್ಟ್ರವಾದ" ಹಾಗೂ "ಉತ್ತರ ಭಾರತದ ರಾಜಕೀಯದ ವಿರೋಧ"ಗಳು ಅಲ್ಲಿಯ ರಾಜಕೀಯಕ್ಕೆ ಒಂದು ಚಹರೆಯನ್ನು ಕೊಟ್ಟಿವೆ. ಬ್ರಾಹ್ಮಣ ವಿರೋಧಿ, ದ್ರಾವಿಡ ಸಿದ್ಧಾಂತ ಹಾಗೂ ಹೋರಾಟಗಳ ಸಾಂಸ್ಕೃತಿಕ ನೆನಪುಗಳು ಈಗ ಇಲ್ಲದಿರಬಹುದು. ಆದರೆ ಕರ್ನಾಟಕ ರಾಜಕೀಯಕ್ಕೆ ಯಾವ ಚಹರೆ ಅಥವಾ ಐಡೆಂಟಿಟಿ ಇಲ್ಲವೇ ಇಲ್ಲ.

ಎರಡು ಪ್ರಬಲ ಜಾತಿಗಳಾದ ಲಿಂಗಾಯತರು ಮತ್ತು ಒಕ್ಕಲಿಗರು ಕರ್ನಾಟಕದ ರಾಜಕೀಯ ಅಧಿಕಾರವನ್ನು ಹಂಚಿಕೊಂಡಿದ್ದಾರೆ. ಈ ಎರಡು ಜಾತಿಗಳು ತಮ್ಮ ಶೂದ್ರ ಅಸ್ಮಿತೆಯನ್ನು ಎಂದಿಗೂ ಒಪ್ಪಿಕೊಳ್ಳಲಿಲ್ಲ. ಹೀಗಾಗಿ ಇತರ ರಾಜ್ಯಗಳಲ್ಲಿ ಜಯಶೀಲವಾದ ಶೂದ್ರ ರಾಜಕೀಯವು ಕರ್ನಾಟಕದಲ್ಲಿ ಬೆಳೆಯಲಿಲ್ಲ. ಹೀಗೆ ಸಾಂಸ್ಕೃತಿಕ ನೆನಪುಗಳೇ ಇಲ್ಲದ ಕಾರಣದಿಂದಾಗಿ ವಚನಕಾರ ಚಳುವಳಿಗೆ ವಾರಸುದಾರ ಎಂದು ಹೇಳಿಕೊಳ್ಳುವ ಲಿಂಗಾಯತ ಜಾತಿ(ಜಾತಿಗಳು ಎನ್ನುವುದು ಹೆಚ್ಚು ಸೂಕ್ತ) ಕೋಮುವಾದಿ ರಾಜಕೀಯ ಪಕ್ಷದ ಭದ್ರವಾದ ನೆಲೆಯಾಗಿದೆ. ಲಿಂಗಾಯತ ಮಠಗಳು 'ನಮ್ಮವರು ಅಧಿಕಾರದಲ್ಲಿದ್ದರೆ ಸಾಕು ಎನ್ನುವ ರಾಜಕೀಯದ ಬಹುಮುಖ್ಯ ಸಮರ್ಥಕ ಶಕ್ತಿಗಳಾಗಿವೆ. ಇದಕ್ಕೆ ಸಮನಾಂತರವಾಗಿ ಯಾವುದೇ ರಾಜಕೀಯ ಪಕ್ಷದಲ್ಲಿದ್ದರೂ "ನಮ್ಮವರು" ಎನ್ನುವ ಸಿದ್ಧಾಂತವನ್ನು ಒಕ್ಕಲಿಗ ಜಾತಿಯೂ ಪಾಲಿಸುತ್ತಿದೆ. ದುರಂತವೆಂದರೆ ಸಂಖ್ಯೆ ಹಾಗೂ ಪ್ರಭಾವದಲ್ಲಿ ಗಟ್ಟಿಯಾಗಿರುವ ಇತರ ಶೂದ್ರ ಜಾತಿಗಳು ತಾವೇ ಅಧಿಕಾರಕ್ಕೆ ಬರುವ ಸ್ಥಿತಿಯಲ್ಲಿಲ್ಲ. ಇತಿಹಾಸಕಾರರಿಗೆ ಅರ್ಥವಾಗದ ವಿಷಯವೆಂದರೆ ಆಧುನಿಕ ಭಾರತದ ಅತ್ಯಂತ ಪ್ರಮುಖ ಚಳುವಳಿಯಾದ ದಲಿತ ಸಂಘರ್ಷ ಸಮಿತಿಯ ತವರಾದ ಕರ್ನಾಟಕದಲ್ಲಿ ದಲಿತ ರಾಜಕೀಯವು ಬೆಳೆಯಲೇ ಇಲ್ಲ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಹೋರಾಟಗಳನ್ನು ರಾಜಕೀಯ ಶಕ್ತಿಯಾಗಿ (hegemony) ಪರಿವರ್ತಿಸಲು ಈವರೆಗೂ ಸಾಧ್ಯವಾಗಲಿಲ್ಲ. ಯಾವುದೇ ಪಕ್ಷದಲ್ಲಿದ್ದುಕೊಂಡು, ದಲಿತ ಸಿದ್ಧಾಂತವೆಂದರೇನು ಎಂದು ಗೊತ್ತಿರದ ಕರ್ನಾಟಕದ ದಲಿತ ರಾಜಕೀಯ ಜನಪ್ರತಿನಿಧಿಗಳು ಮತ್ತು ಮಂತ್ರಿಗಳು ಹಾಸ್ಯಾಸ್ಪದ ನಕಲಿ ಶಾಮರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಕೊರೋನಾ ಪಿಡುಗು ಪ್ರವೇಶ ಮಾಡಿತು. ಯಾವುದೇ ಮುಚ್ಚುಮರೆಯಿಲ್ಲದೆ ಬಹಿರಂಗವಾಗಿಯೇ ನಡೆದ ಅಪಾರವಾದ ಹಣದ ವ್ಯವಹಾರದ ಮೂಲಕ ಪಕ್ಷಾಂತರ ಮಾಡಿಸಿ ಅನೈತಿಕ ಸರಕಾರವೊಂದು ಅಸ್ತಿತ್ವಕ್ಕೆ ಬಂದಿತ್ತು. ಯಾವ ದೃಷ್ಟಿಯಿಂದ ನೋಡಿದರೂ ಇದೊಂದು ತೇಪೆ ಹಚ್ಚಿದ ಅಸ್ಥಿರವಾದ ರಾಜಕೀಯವೇ. ಸ್ಥಿರತೆಯ ಒಂದೇ ಶಕ್ತಿಯೆಂದರೆ ರಾಷ್ಟ್ರದಲ್ಲಿಯೂ, ಪಕ್ಷದಲ್ಲಿಯೂ ಯಾವುದೇ ಪ್ರಜಾಪ್ರಭುತ್ವವಾದಿ ಭಿನ್ನಮತವನ್ನು ಇಲ್ಲದಂತೆ ಮಾಡುತ್ತಿರುವ ರಾಷ್ಟ್ರನಾಯಕರು. ಇದಕ್ಕೆ ಪೂರಕವಾಗಿ ಕರ್ನಾಟಕದ ಯಾವುದೇ ಬಿಜೆಪಿ ನಾಯಕರಿಗೆ ಬಲಾಢ್ಯವಾದ, ಕೇಂದ್ರೀಕರಣವನ್ನು ಆರಾಧಿಸುವ ಪ್ರಾಂತೀಯ ರಾಜಕೀಯ ಶಕ್ತಿಗಳನ್ನು ಮೂಲೆಗುಂಪು ಮಾಡಲು ಬಯಸುವ ರಾಷ್ಟ್ರನಾಯಕರನ್ನು ಪ್ರಶ್ನಿಸುವ ಸಾಮರ್ಥ್ಯವೇ ಇಲ್ಲ. ಅದೇ ಹೊತ್ತಿಗೆ ಈಗಿರುವ ಕರ್ನಾಟಕದ ಸರಕಾರದಲ್ಲಿ ಅನೇಕ ಮಂತ್ರಿಗಳು ತಮ್ಮದೇ ಆದ ಆರ್ಥಿಕ, ರಾಜಕೀಯ ಶಕ್ತಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಇದರ ಪರಿಣಾಮವೆಂದರೆ ಕೊರೋನಾ ಪಿಡುಗನ್ನು ತಡೆಗಟ್ಟುವುದರಲ್ಲಿ ಆಗಿರುವ ಆಘಾತಕಾರಿ ಸೋಲು. ಕಳೆದ ತಿಂಗಳಿನಿಂದ ಕರ್ನಾಟಕವು ಕೊರೋನಾ ಸೋಂಕಿತರ ಸಂಖ್ಯೆಯಲ್ಲಿ ಮತ್ತು ಸಾವುಗಳಲ್ಲಿ ಮುಂಚೂಣಿಗೆ ಬರುತ್ತಿದೆ. ಈ ಭೀಕರ ಸಾವು ನೋವುಗಳ ಮಧ್ಯ ಸರಕಾರವು ಮಾಡಿದ ಭ್ರಷ್ಟಾಚಾರವು ಮನುಷ್ಯರು ಮಾಡುವ ಕೆಲಸವಲ್ಲ. ನಾನು ವಿರೋಧ ಪಕ್ಷದ ಟೀಕೆಗಳನ್ನು ಸಮರ್ಥಿಸುತ್ತಿಲ್ಲ. ನಾನು ವಾಸಿಸುವ ಶಿವಮೊಗ್ಗೆಯ ಜನಸಾಮಾನ್ಯರು ನನಗೆ ದಿನವೂ ಕೊಡುವ ವಿವರಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಅಲ್ಲದೆ ಇದು ಕೇವಲ ಆಡಳಿತ ಪಕ್ಷದ ಟೀಕೆಯೂ ಅಲ್ಲ, ಕರ್ನಾಟಕದ ಯಾವುದೇ ರಾಜಕೀಯ ಪಕ್ಷವು ಅಧಿಕಾರದಲ್ಲಿದ್ದರೆ ಜಾಗತಿಕ ಪಿಡುಗನ್ನು ಭ್ರಷ್ಟಾಚಾರಕ್ಕಾಗಿ ಬಳಸಿಕೊಳ್ಳುತ್ತಿತ್ತು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇದು ಕರ್ನಾಟಕ ರಾಜ್ಯದ ಸ್ಥಿತಿ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಇದನ್ನು ಅತಿಶಯೋಕ್ತಿ ಎನ್ನುವವರು ಒಂದು ಸರಳ ಪ್ರಶ್ನೆಗೆ ಉತ್ತರಿಸಲಿ. ಕಳೆದ ಹಲವಾರು ವರ್ಷಗಳಿಂದ ನಡೆದಿರುವ ರಾಜ್ಯಗಳಲ್ಲಿನ ಭ್ರಷ್ಟಾಚಾರದ ಎಲ್ಲಾ ಸಮೀಕ್ಷೆಗಳಲ್ಲಿ ಕರ್ನಾಟಕವು ಮೊದಲ ಅಥವಾ ಮೊದಲ ಮೂರನೇ ಸ್ಥಾನಗಳೊಳಗೆ ಯಾಕೆ ಇದೆ?

ನಮ್ಮ ಮಂತ್ರಿಗಳು ಪ್ರತಿದಿನ ಹೇಳುವ ಗಿಳಿಶಾಸ್ತ್ರವನ್ನು ಬದಿಗಿಟ್ಟು ನೋಡಿದರೆ ಈಗ ಕೊರೋನಾ ಪರಿಸ್ಥಿತಿಯು ಭೀಕರವಾಗಿದೆ. ಕರ್ನಾಟಕವು ಅತಿ ಹೆಚ್ಚು ಸಾವುಗಳನ್ನು ಕಾಣತೊಡಗಿದೆ. ಹಿಂದಿನ ಸರಕಾರಗಳು ಸರಕಾರಿ ಆರೋಗ್ಯ ವ್ಯವಸ್ಥೆಯನ್ನು ಹಾಳು ಮಾಡಿ ರಾಜ್ಯದಲ್ಲಿ ವೈದ್ಯಕೀಯ, ಆರೋಗ್ಯ ವ್ಯವಸ್ಥೆಯನ್ನು ಖಾಸಗಿ ಬಂಡವಾಳಶಾಹಿಗಳಿಗೆ ಒಪ್ಪಿಸುತ್ತಾ ಬಂದಿವೆ. ಖಾಸಗಿ ವೈದ್ಯಕೀಯ ಸಂಸ್ಥೆಗಳು ಎಲ್ಲಾ ಸರಕಾರಗಳ ಪ್ರತಿಯೊಬ್ಬ ಮಂತ್ರಿಗೂ ನೀಡುತ್ತಾ ಬಂದಿರುವ ಕಪ್ಪಕಾಣಿಕೆಗಳಿಂದಾಗಿ ಕೊರೋನಾ ಪೀಡಿತರಿಗೆ ಆರೈಕೆ ನೀಡದ, ಅಥವಾ ಲಕ್ಷಾನುಗಟ್ಟಲೆ ಶುಲ್ಕ ಪಡೆಯುವ ಖಾಸಗಿ ಆಸ್ಪತ್ರೆಗಳಿಗೆ ಇಂದಿನ ಸರಕಾರವು ಏನನ್ನೂ ಮಾಡುವುದಿಲ್ಲ. ಏಕೆಂದರೆ ಉಪ್ಪಿನ ಋಣ ಇರುವ ಮತ್ತು ರಾಜಕೀಯ ನಾಯಕರಿಗೆ ಕೋವಿಡ್ ಬಂದರೆ 10 ಸೆಕೆಂಡ್‌ಗಳಲ್ಲಿ ಬೆಡ್ ನೀಡುವ ಖಾಸಗಿ ಆಸ್ಪತ್ರೆಗಳ ವಿರುದ್ಧ ಈ ಸರಕಾರವು ಏನು ಮಾಡಬಲ್ಲದು?

ಇದಕ್ಕಿಂತ ಮುಖ್ಯವೆಂದರೆ ವಲಸೆ ಹೋದ ಕಾರ್ಮಿಕರು ಮರಳಿ ಮನೆಗೆ ಬಂದ ಮೇಲೆ ಅವರಿಗೆ ಕೆಲಸ, ಆದಾಯ ಬರುವ ಯಾವ ಕೆಲಸವೂ ಆಗಿಲ್ಲ. ಈಗ ಅನೇಕ ಕೆಲಸಕಾರರು, ಶ್ರಮಜೀವಿಗಳು ವಾಪಸ್ಸು. ಮಹಾನಗರಗಳ ಕಡೆಗೆ ಬರುತ್ತಿದ್ದಾರೆ. ಈ ಬಾರಿ ಅವರು ಇನ್ನೂ ಕ್ರೂರವಾದ ಪರಿಸ್ಥಿತಿಯನ್ನು ಎದುರಿಸುತ್ತಾರೆ. ಏಕೆಂದರೆ ಕೋವಿಡ್ ಪಿಡುಗನ್ನು ಬಳಸಿಕೊಂಡು ಕಾರ್ಮಿಕ ವಿರೋಧಿ, ರೈತವಿರೋಧಿ ಕಾನೂನುಗಳನ್ನು ತರಲಾಗುತ್ತಿದೆ.

ಇದರಲ್ಲಿ ನನಗೆ ಕಾಣುವ ಲಕ್ಷಣಗಳೆಂದರೆ ಸಂಪೂರ್ಣವಾಗಿ ಬಂಡವಾಳಶಾಹಿಗಳ ಪರವಾಗಿರುವ ಕಿರ್ನಾಟಕದ ರಾಜಕೀಯ ವ್ಯವಸ್ಥೆಯು ಇನ್ನು ಮುಂದೆ ರೈತರನ್ನು, ಕಾರ್ಮಿಕರನ್ನು, ಅಸಂಘಟಿತ ಶ್ರಮಜೀವಿಗಳನ್ನು ಅತ್ಯಂತ ಕ್ರೂರವಾಗಿ ದಮನಿಸುತ್ತದೆ. ಏಕೆಂದರೆ ಅಂತರ್‌ರಾಷ್ಟ್ರೀಯ ಬಂಡವಾಳಶಾಹಿಯ ಈಗಿನ ಅಪೇಕ್ಷೆಯೆಂದರೆ – ಬಲಿಷ್ಠವಾದ ಸರ್ವಾಧಿಕಾರಿ ಪ್ರಭುತ್ವಗಳು; ಈ ಪ್ರಭುತ್ವಗಳ ಆದೇಶಗಳನ್ನು ಪಾಲಿಸುವ ಸೈನಿಕರು ಮತ್ತು ಪೋಲೀಸರು; ರೈತರು, ಕಾರ್ಮಿಕರು ಇವರ ಪರವಾಗಿ ಹೋರಾಡುವ ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಅಪಾರ ಹಿಂಸೆಗೆ ಈಡು ಮಾಡುವುದಕ್ಕೆ ಸಿದ್ಧವಾಗಿರುವ ನ್ಯಾಯಾಂಗ ವ್ಯವಸ್ಥೆ. ಇವೆಲ್ಲವು ಇಂದು ಭಾರತದಲ್ಲಿವೆ. ಹೀಗಾಗಿ "ಸ್ವರ್ಗಾದಪಿ ಗರೀಯಸಿ" ಎಂದು ಬಂಡವಾಳಶಾಹಿಗಳು ಈ ಜನ್ಮಭೂಮಿಯನ್ನು ದೇವರುಗಳ ಭಾಷೆಯಲ್ಲಿ ಕೊಂಡಾಡುತ್ತಿದ್ದಾರೆ.

ಕರ್ನಾಟಕ ರಾಜ್ಯದ ರಾಜಕೀಯದ ಇನ್ನೊಂದು ಲಕ್ಷಣವೆಂದರೆ ಕೇಂದ್ರದಿಂದ ಬರುವ ನೀತಿ ನಿರ್ದೇಶನಗಳನ್ನು ಅತ್ಯಂತ ವಿಧೇಯವಾಗಿ ಪಾಲಿಸುವುದು. ಇದು ಶಿಸ್ತು ಅಥವಾ ವಿಧೇಯತೆಗಿಂತಾಗಿ ಈ ರಾಜ್ಯದ ರಾಜಕೀಯವು ತನ್ನದೇ ಆದಂಥ ರಾಜಕೀಯ ಚಿಂತನೆ ಮತ್ತು ಕಾರ್ಯಸೂಚಿಗಳನ್ನು ಹೊಂದಿರದೆ ಇರುವುದರ ದ್ಯೋತಕವಾಗಿದೆ. ಕರ್ನಾಟಕದ ಏಕೀಕರಣ ಚಳುವಳಿಯ ನಂತರ ಸ್ವತಂತ್ರ ಭಾರತದ ಸರಕಾರವು ಭಾಷಾವಾರು ರಾಜ್ಯಗಳ ರಚನೆಗೆ ಉತ್ಸುಕವಾಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಜವಾಹರ್‌ಲಾಲ್ ನೆಹರು ಭಾಷಾ ರಾಜಕೀಯದಿಂದ ದೇಶವು ವಿಚ್ಛಿದ್ರವಾಗಬಹುದೆಂಬ ಸಂಶಯವಿಟ್ಟುಕೊಂಡಿದ್ದರು. ಆಗಲೂ ಕೂಡ ಅಂದಿನ ಮೈಸೂರಿನ ಕಾಂಗ್ರೆಸ್ ಸರಕಾರವು ರಾಜ್ಯದ ಮಹಾನ್ ಸಾಂಸ್ಕೃತಿಕ ಏಕೀಕರಣ ಚಳುವಳಿಯನ್ನು ಸಮರ್ಥಿಸಿಕೊಂಡು ಕೇಂದ್ರದ ಮೇಲೆ ಒತ್ತಡ ತರಲಿಲ್ಲ. ಹುಬ್ಬಳ್ಳಿಯಲ್ಲಿ ಕಮ್ಯೂನಿಸ್ಟ್ ಪಕ್ಷದ ಕಾರ್ಮಿಕ ನಾಯಕರು ದೊಡ್ಡ ಪ್ರತಿಭಟನೆ ಮಾಡಿ ಕಾಂಗ್ರೆಸ್ ನಾಯಕರುಗಳಿಗೆ ಬಳೆ ತೊಡಿಸುತ್ತೇವೆ ಎಂದು ಗಲಾಟೆ ಮಾಡದಿದ್ದರೆ ಸರಕಾರವು ಎಚ್ಚರಗೊಳ್ಳುತ್ತಿರಲಿಲ್ಲ. ಈಗಲೂ ಪರಿಸ್ಥಿತಿ ಹಾಗೆಯೇ ಇದೆ. ಕರ್ನಾಟಕದ ಕಾಗೋಡು ಸತ್ಯಾಗ್ರಹ, ದೇವರಾಜ್ ಅರಸ್ ಅವರು ಜಾರಿಗೆ ತಂದ ಭೂಸುಧಾರಣಾ ಕಾನೂನು, ಅಭೂತಪೂರ್ವ ರೈತ ಚಳುವಳಿ–ಇವೆಲ್ಲವುಗಳ ಸಾಂಸ್ಕೃತಿಕ ನೆನಪುಗಳೇ ಇಲ್ಲದಂತೆ ಇಂದಿನ ಸರಕಾರವು ಭೂ ಸುಧಾರಣೆ ಕಾನೂನನ್ನು ಸರ್ವನಾಶ ಮಾಡಿದೆ. APMC ಯಂಥ ಸಂಸ್ಥೆಯನ್ನು ಮಾರುಕಟ್ಟೆ ಶಕ್ತಿಗಳಿಗೆ ಪರಭಾರೆ ಮಾಡಿದೆ. ವಿದ್ಯುಚ್ಛಕ್ತಿ ಸರಬರಾಜನ್ನೂ ಇದೇ ಸ್ಥಿತಿಗೆ ತಂದಿದೆ. ವಿಶೇಷವೆಂದರೆ ಇವೆಲ್ಲವು ಕೇಂದ್ರ ಸರಕಾರದಿಂದ ಬಂದಿರುವ ನಿರ್ದೇಶನಗಳ ಪ್ರಕಾರ. ಮತ್ತು ಇವು ಸಂವಿಧಾನವು ಕಲ್ಪಿಸಿದ ಒಕ್ಕೂಟ ವ್ಯವಸ್ಥೆಯನ್ನು ನಾಶಮಾಡುವಂಥವು. ಇಂಥ ಕ್ರಮವನ್ನೇ ನಮ್ಮ ಸರಕಾರವು ಪ್ರಶ್ನಿಸುತ್ತಿಲ್ಲ. ಅಥವಾ ಖಾಸಗೀಕರಣದಿಂದ ಕರ್ನಾಟಕ ರಾಜ್ಯಕ್ಕೆ ಈವರೆಗೆ ಏನು ಲಾಭವಾಗಿದೆಯೆಂದೂ ಹೇಳಲು/ಕೇಳಲು ಸಿದ್ಧವಾಗಿಲ್ಲ. ನಿಜವಾದ ಅರ್ಥದಲ್ಲಿ ಕರ್ನಾಟಕ ರಾಜಕೀಯವು ರಾಜಕೀಯವೇ ಅಲ್ಲ. ಸುಸಂಗತೆಯೇ ಇಲ್ಲದ ad hoc ಕ್ರಿಯೆಗಳ ಸರಣಿಯಾಗಿದೆಯಷ್ಟೆ.

ಇಲ್ಲಿಯವರೆಗೆ ನಾನು ವಿವರಿಸಿದ್ದು ಕರ್ನಾಟಕ ರಾಜಕೀಯದ ಕರಾಳಮುಖ. ಆದರೆ ಈ ಅಸಹ್ಯ ರಾಜಕೀಯವನ್ನು ವಿಮರ್ಶಿಸುವ, ವಿರೋಧಿಸುವ ನೆಲೆಗಳು ಕರ್ನಾಟಕದಲ್ಲಿವೆ. ಜಾಗತೀಕರಣ, ಖಾಸಗೀಕರಣ, ಕೋಮುವಾದ ಇವುಗಳ ವಿರುದ್ಧ ಅತ್ಯಂತ ಪ್ರಬಲವಾದ ವೈಚಾರಿಕ ಪ್ರತಿರೋಧವು ಬಂದಿದ್ದು ಕರ್ನಾಟಕದಿಂದಲೇ. ಇದು ಕೇವಲ ಅಲ್ಪಸಂಖ್ಯಾತ ಬುದ್ಧಿಜೀವಿಗಳ ಕೊಡುಗೆಯಲ್ಲ, ಅತ್ಯಂತ ಪ್ರತಿಭಾವಂತ, ಸೂಕ್ಷ್ಮ ಚಿಂತನೆಯ ಅನೇಕರು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಸ್ಯೆಯೆಂದರೆ ಇಲ್ಲಾ ನೀವು ವೈಯಕ್ತಿಕವಾಗಿ ನಿಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಬಹುದು ಅಥವಾ ಯಾವುದೋ ಒಂದು ಸಂಘಟನೆಯ ಮೂಲಕ ಇದನ್ನು ಮಾಡಬೇಕು. ಆದರೆ ಇಡೀ ದೇಶದ ಜನಸಾಮಾನ್ಯರ ಸಾವು–ಬದುಕಿನ ಸಮಸ್ಯೆ ಇರುವಾಗ, ಪ್ರಜಾಪ್ರಭುತ್ವದ ಮೂಲ ಆಕಾಂಕ್ಷೆಗಳೇ ಅಪಾಯದಲ್ಲಿರುವಾಗ ಕರ್ನಾಟಕದ ಜನಪರ ಸಂಘಟನೆಗಳು ಒಂದು ವೇದಿಕೆಯಲ್ಲಿ ಒಂದುಗೂಡಲು ಈಗಲೂ ಸಿದ್ಧರಿಲ್ಲ. ನೆನಪಿರಲಿ! ಚರಿತ್ರೆಯು ಇಂಥ ಬೇಜವಾಬ್ದಾರಿಯನ್ನು ಎಂದೂ ಕ್ಷಮಿಸುವುದಿಲ್ಲ. ■





ಅವಳಿ ವಿಪತ್ತುಗಳ ಎದುರು

ವೇಗವಾಗಿ ಹರಡುತ್ತಿರುವ ಮಹಾಸೋಂಕು ಮತ್ತು ಕುಸಿಯುತ್ತಿರುವ ಜಿಡಿಪಿ ಇವೆರಡೂ ವಿಪತ್ತುಗಳಿಂದ ಪ್ರಧಾನ ಮಂತ್ರಿಗಳಿಗೇನೂ ಗಾಬರಿಯಾದಂತಿಲ್ಲ. ಆದರೆ ಇದರಿಂದ ಆರೋಗ್ಯ ಬಿಕ್ಕಟ್ಟು ಆರ್ಥಿಕ ಚಟುವಟಿಕೆಗಳನ್ನು ತಟ್ಟಲಿದೆ ಮತ್ತು ಬೆಳವಣಿಗೆಯ ಪುನಶ್ಚೇತನವನ್ನು ನಿಧಾನಗೊಳಿಸಲಿದೆ. ಈ ಜನ–ವಿರೋಧಿ ನಿಲುವೇ ದೇಶ ಎದುರಿಸುತ್ತಿರುವ ಮೂರನೇ ಬಿಕ್ಕಟ್ಟಿನಲ್ಲಿ ಪ್ರತಿಫಲನಗೊಳ್ಳುತ್ತಿದೆ. ಅದೆಂದರೆ ಪ್ರಜಾಪ್ರಭುತ್ವದ ಬಿಕ್ಕಟ್ಟು.
ನ್ಯಾಯಾಂಗ, ಸುಮಾರಾಗಿ, ಹೇಳಿದಂತೆ ಕೇಳುವ ಸ್ಥಿತಿಯಲ್ಲಿದ್ದು ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳ ವಿಷಯದಲ್ಲಿ ಕಾರ್ಯಾಂಗದ ಪರವಾಗಿ ಹೋಗುವುದರಿಂದ, ಈ ಮಹಾಸೋಂಕಿನ ಅವಧಿಯಲ್ಲಿ ಸರ್ವಾಧಿಕಾರಶಾಹಿ ರಚನೆ ಗಟ್ಟಿಗೊಂಡಿದೆ. ಇದಕ್ಕೆ ಬಲಿಯಾಗಿರುವುದು ಜನಗಳ ಆರೋಗ್ಯ ಮತ್ತು ಆರ್ಥಿಕ ಒಳಿತು. ಇದು ಕೋವಿಡ್ ಕಾಲದಲ್ಲಿ ಮೋದಿ ಆಳ್ವಿಕೆಯ ನಿಜವಾದ ಮುಖ..

ಪ್ರಕಾಶ ಕಾರಟ್

ಕೆಲವೇ ದಿನಗಳ ಅಂತರದಲ್ಲಿ ಮಹಾಸೋಂಕು ಮತ್ತು ಅರ್ಥವ್ಯವಸ್ಥೆಗೆ ಸಂಬಂಧಪಟ್ಟಂತೆ ಎರಡು ಬೆಳವಣಿಗೆಗಳು ಗಾಬರಿ ಉಂಟುಮಾಡುವಂತವು. ಕೊವಿಡ್–19 ಸೋಂಕಿತರ ಸಂಖ್ಯೆಯಲ್ಲಿ ಭಾರತ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿದ್ದ ಬ್ರೆಝಿಲನ್ನು ಹಿಂದೆ ಹಾಕಿ ಆ ಎರಡನೇ ಸ್ಥಾನಕ್ಕೆ ತಾನೇರಿದೆ. ಇದಕ್ಕೆ ಮೊದಲು ಮೊದಲ ತ್ರೈಮಾಸಿಕದಲ್ಲಿ(ಎಪ್ರಿಲ್–ಜೂನ್2020) ಜಿಡಿಪಿ 24ಶೇ.ಕ್ಕೆ ಕುಸಿದಿರುವ ಸುದ್ದಿ ಬಂದಿತ್ತು. ಇದು ಜಗತ್ತಿನ 25 ದೇಶಗಳ ಪೈಕಿ ಅತಿ ಹೆಚ್ಚಿನ ಪತನ.

ಮಹಾಸೋಂಕು ವೇಗವಾಗಿ ಹರಡುತ್ತಿದೆ, ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳನ್ನೂ ತಲುಪುತ್ತಿದೆ. ದೈನಂದಿನ ಸೋಂಕುಗಳ ಸಂಖ್ಯೆಯಲ್ಲಿ ಭಾರತ ಎಲ್ಲ ದೇಶಗಳನ್ನೂ ಹಿಂದಕ್ಕೆ ಹಾಕಿದೆ. ಪ್ರತಿದಿನ ದಾಖಲಾಗುತ್ತಿರುವ ಸಾವುಗಳ ಸಂಖ್ಯೆಯೂ ಭಾರತದಲ್ಲೇ ಅತಿ ಹೆಚ್ಚು. ಈ ದರದಲ್ಲಿ, ಆರೋಗ್ಯ ಪರಿಣಿತರ ಪ್ರಕಾರ, ಭಾರತ, ಅಕ್ಟೋಬರ್ ಎರಡನೇ ವಾರದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನೂ ಹಿಂದೆ ಹಾಕಿ ಒಟ್ಟು ಸೋಂಕಿತರ ಸಂಖ್ಯೆಯಲ್ಲಿ ಮೊದಲ ಸ್ಥಾನಕ್ಕೇರಬಹುದು.

ಆದರೆ ಇವೆರಡೂ ವಿಪತ್ತುಗಳಿಂದ ಪ್ರಧಾನ ಮಂತ್ರಿಗಳಿಗೇನೂ ಗಾಬರಿಯಾದಂತಿಲ್ಲ. ಮೋದಿ ಸರಕಾರ, ಈ ಸಾಂಕ್ರಾಮಿಕವನನು ತನ್ನ ದಾರಿಯಲ್ಲಿ ಹಾಗೆಯೇ ಸಾಗುವಂತೆ ಬಿಟ್ಟು ಬಿಡುವುದೇ ಏಕೈಕ ಮಾರ್ಗ ಎಂದು ನಿರ್ಧರಿಸಿರುವಂತೆ ಕಾಣುತ್ತದೆ. ಈ ಆರೋಗ್ಯಪಾಲನೆಯ ಬಿಕ್ಕಟ್ಟನ್ನು ಹೇಗೋ ದಬಾಯಿಸಿ ಬಿಡಲು ಏನೇನೋ ದಾವೆಗಳನ್ನು ಹೂಡಲಾಗುತ್ತಿದೆ– ಲಾಕ್‌ಡೌನಿನಿಂದಾಗಿ ಅದೆಷ್ಟೋ ಜೀವಗಳು ಉಳಿದವು ಮತ್ತು ಭಾರತದಲ್ಲಿನ ಮರಣ ದರ ಜಗತ್ತಿನಲ್ಲಿಯೇ ಅತಿ ಕಡಿಮೆ ಎಂದು ಹೇಳಿಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಹಿಡಿದಿರುವ ಇನ್ನೊಂದು ದಾರಿಯೆಂದರೆ, ಸರಕಾರ ಈ ಸವಾಲನನ್ನು ಎದುರಿಸಲು ತ್ವರಿತವಾಗಿಯೇ ಸಿದ್ಧಗೊಳ್ಳುವುದು ಸಾಧ್ಯವಾಯಿತು ಎಂಬುದು. ಮೋದಿಯವರು ತಮ್ಮ ಇತ್ತೀಚಿನ ಒಂದು ಭಾಷಣದಲ್ಲಿ, ಭಾರತ ವೈಯಕ್ತಿಕ ಸುರಕ್ಷತಾ ಸಾಧನ(ಪಿಪಿಇ)ಗಳ ಎರಡನೇ ಅತಿ ದೊಡ್ಡ ತಯಾರಕ ಎಂದು ಹೇಳಿಕೊಂಡರು.

ಕಳೆದ ಆರು ತಿಂಗಳಲ್ಲಿ ಸಾರ್ವಜನಿಕ ಆರೋಗ್ಯಕ್ಕೆ ಸರಕಾರದ ವೆಚ್ಚದಲ್ಲಿ ಯಾವುದೇ ಗಣನೀಯ ಹೆಚ್ಚಳ ಮಾಡಿಲ್ಲ; ಹಣಕಾಸು ಪ್ಯಾಕೇಜಿನಲ್ಲಿ ಆರೋಗ್ಯ ವಲಯಕ್ಕೆಂದು 15,000 ಕೋಟಿ ರೂ.ಗಳನ್ನು ಎತ್ತಿಡುವುದು ಬಿಟ್ಟು ಬೇರೇನನ್ನೂ ಮಾಡಿಲ್ಲ. ಇದರಲ್ಲೂ ಈ ಆರೋಗ್ಯ ಬಿಕ್ಕಟ್ಟನ್ನು ನಿಭಾಯಿಸುತ್ತಿರುವ ರಾಜ್ಯಗಳಿಗೆ ಕೊಟ್ಟಿರುವುದು ಒಂದು ಸಣ್ಣ ಭಾಗವನ್ನಷ್ಟೇ. ನಿಜ ಹೇಳಬೇಕೆಂದರೆ, ಕೇಂದ್ರ ಸರಕಾರ ರಾಜ್ಯಗಳಿಗೆ ಹಣ ಇಲ್ಲದಂತೆ ಮಾಡಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ, ವಿಸ್ತರಿಸುವ ರಾಜ್ಯ ಸರಕಾರಗಳ ಪ್ರಯತ್ನಗಳಿಗೆ ಅಡ್ಡಿಯುಂಟು ಮಾಡುತ್ತಿದೆ.

ಇದಕ್ಕೆ ಮಾನವ ಜೀವಗಳ ದೃಷ್ಟಿಯಿಂದ ತೆರಬೇಕಾದ ಬೆಲೆಗಳನ್ನು ನೋಡಿದರೆ ಗಾಬರಿಯಾಗುತ್ತದೆ. ಅಗತ್ಯ ವೈದ್ಯಕೀಯ ಸೌಕರ್ಯಗಳಿಲ್ಲದ್ದರಿಂದ ಹಲವರು ಸಾಯುವ ಸ್ಥಿತಿ ಬರುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು ನರ್ಸಿಂಗ್ ಹೋಂಗಳಲ್ಲಿ ಶುಶ್ರೂಷೆಯಲ್ಲಿ ನಡೆಯುತ್ತಿರುವ ಸುಲಿಗೆಗಳಿಂದಾಗಿ ಸಾವಿರ–ಸಾವಿರ



ಸಬ್ ಚಂಗಾ ಸೀ–ಎಲ್ಲವೂ ಚೆನ್ನಾಗಿದೆ
ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಮಧ್ಯಮ ವರ್ಗದ ಕುಟುಂಬಗಳು ಸಾಲಶೂಲೆಗೆ ಒಳಗಾಗುತ್ತಿವೆ. ಆರೋಗ್ಯ ಬಿಕ್ಕಟ್ಟು ಆರ್ಥಿಕ ಚಟುವಟಿಕೆಗಳನ್ನು ತಟ್ಟಲಿದೆ ಮತ್ತು ಬೆಳವಣಿಗೆಯ ಪುನಶ್ಚೇತನವನ್ನು ನಿಧಾನಗೊಳಿಸಲಿದೆ.

ಅರ್ಥವ್ಯವಸ್ಥೆ ತೀವ್ರ ರೀತಿಯಲ್ಲಿ ಸಂಕುಚನಗೊಳ್ಳಲು ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೇರಿದ ಎರಡು ತಿಂಗಳ ಸಂಪೂರ್ಣ ಲಾಕ್‌ಡೌನೇ ಪ್ರಾಥಮಿಕ ಕಾರಣ. ಸಮಯಕ್ಕೆ ಸರಿಯಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು, ಬಡವರಿಗೆ ನಗದು ವರ್ಗಾವಣೆ ಮಾಡಲು, ಆಹಾರಧಾನ್ಯಗಳ ಭಾರೀ ದಾಸ್ತಾನನ್ನು ಅಗತ್ಯವಿರುವ ಕುಟುಂಬಗಳಿಗೆ ಉಚಿತವಾಗಿ ಹಂಚಲು ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಹಣಕಾಸು ಬೆಂಬಲ ಒದಗಿಸಲು ಕ್ರಮಗಳನ್ನು ಕೈಗೊಂಡಿದ್ದರೆ ಬಿಕ್ಕಟ್ಟಿನ ದುಷ್ಪರಿಣಾಮಗಳನ್ನು ತಗ್ಗಿಸಬಹುದಾಗಿತ್ತು. ಆದರೆ ಸರಕಾರ ಇವನ್ನು ಮಾಡಲು ನಿರಾಕರಿಸಿತು. ಹಣಕಾಸು ಉತ್ತೇಜನಾ ಪ್ಯಾಕೇಜಿನಲ್ಲಿ ಪ್ರಕಟಿಸಿದ ಸಾರ್ವಜನಿಕ ವೆಚ್ಚಗಳ ಮೊತ್ತ ಕೇವಲ ಜಿಡಿಪಿಯ 1ಶೇ. ಮಾತ್ರ.

ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರಾದ ಕೃಷ್ಣಮೂರ್ತಿ ಸುಬ್ರಮಣ್ಯಂ, ಜಿಡಿಪಿ ಇಳಿಕೆ ಕೇವಲ ಕೊವಿಡ್–19ರಿಂದಾಗಿ ಮಾತ್ರ, ಲಾಕ್‌ಡೌನನ್ನು ತೆರವು ಮಾಡುವ ಘಟ್ಟಗಳಲ್ಲಿ ಅರ್ಥವ್ಯವಸ್ಥೆ ಬಲಿಷ್ಟ ರೀತಿಯಲ್ಲಿ ಪುನಶ್ಚೇತನಗೊಳ್ಳುತ್ತಿದೆ ಎಂದು ಹೇಳಿದ್ದಾರೆ. ಅವರು V ಆಕಾರದ ಪುನಶ್ಚೇತನವನ್ನು ನಿರೀಕ್ಷಿಸುತ್ತಿದ್ದಾರೆ. 24ಶೇ. ನಕಾರಾತ್ಮಕ ಬೆಳವಣಿಗೆ ಎಂದರೆ, ಉದ್ಯೋಗದಲ್ಲಿ, ಆದಾಯಗಳಲ್ಲಿ ಮತ್ತು ಬಳಕೆಯಲ್ಲಿ ಬೃಹತ್ ಪ್ರಮಾಣದ ಇಳಿಕೆಯಾಗಿದೆ ಎಂದರ್ಥ. ಸಿ.ಎಂ.ಐ.ಇ. ಪ್ರಕಾರ 2.1 ಕೋಟಿ ಸಂಬಳದಾರ ಉದ್ಯೋಗಗಳು ಎಪ್ರಿಲ್‌ನಿಂದ ಆಗಸ್ಟ್ ನಡುವೆ ಕಾಣೆಯಾಗಿವೆ. ಇನ್ನೂ ಎಷ್ಟೋ ಕೋಟಿ ಜನರು ಅನೌಪಚಾರಿಕ ವಲಯದಲ್ಲಿ ತಮ್ಮ ಜೀವನಾಧಾರಗಳನ್ನು ಕಳಕೊಂಡಿದ್ದಾರೆ. ಆರ್ಥಿಕ ಚಟುವಟಿಕೆಗಳು ಮತ್ತೆ ಆರಂಭವಾಗುತ್ತಿರುವಂತೆ ಈ ಎಲ್ಲ ಉದ್ಯೋಗಗಳು ಮತ್ತೆ ಬರುವುದಿಲ್ಲ. ಕೊವಿಡ್‌ಗಿಂತ ಹಿಂದಿನ ಅವಧಿಯಲ್ಲೇ ಅರ್ಥವ್ಯವಸ್ಥೆ ಸಾಕಷ್ಟು ನಿಧಾನಗೊಂಡಿತ್ತು. ಈಗ ಕೊವಿಡ್–ಪೂರ್ವ ಮಟ್ಟಕ್ಕೆ ಹಿಂದಿರುಗಲೂ ಕೂಡ ಸಾಧ್ಯವಾಗದು. ಅರ್ಥವ್ಯವಸ್ಥೆಯಲ್ಲಿ 'ಹಸಿರು ಗೆಲ್ಲುಗಳು' ಕಾಣಿಸಿಕೊಳ್ಳುತ್ತಿವೆ ಎನ್ನುವುದು, V ಆಕಾರದ ಪುನಶ್ಚೇತನದ ಮಾತಾಡುವುದು ಎಲ್ಲವೂ ಕಟು ವಾಸ್ತವತೆಗಳನ್ನು ಮಬ್ಬುಗೊಳಿಸುವ ಪ್ರಯತ್ನಗಳಷ್ಟೇ.

ಸರಕಾರ ಸಾರ್ವಜನಿಕ ವೆಚ್ಚಗಳನ್ನು ಮತ್ತು ಸಾರ್ವಜನಿಕ ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವ ಬಗ್ಗೆ ಯೋಚಿಸುತ್ತಿದೆ ಎಂಬ ಲಕ್ಷಣಗಳೇನೂ ಇಲ್ಲ. ಆದರೆ ಹೀಗೆ ಮಾಡಿದರೆ ಮಾತ್ರವೇ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು, ಬಳಕೆಗೆ ಉತ್ತೇಜನೆ ನೀಡಲು ಮತ್ತು ಖಾಸಗಿ ಹೂಡಿಕೆಗಳಿಗೆ ಆಧಾರಗಳನ್ನು ಹೆಚ್ಚಿಸಲು, ಆಮೂಲಕ ಉತ್ಪಾದನೆಯ ಪುನಶ್ಚೇತನ ಸಾಧ್ಯ. ಮೋದಿ ಸರಕಾರ ಅನುಸರಿಸಿರುವ ದಾರಿ ಭಿನ್ನವಾಗಿದೆ: ವಿದೇಶಿ ನೇರ ಹೂಡಿಕೆಗಳನ್ನು ಮೆಚ್ಚಿಸುವುದು, ಖನಿಜ ಸಂಪತ್ತುಗಳನ್ನು ಲೂಟಿ ಹೊಡೆಯಲು ಕಾರ್ಪೊರೇಟ್‌ಗಳಿಗೆ ಪರವಾನಿಗೆ, ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ, ಎಲ್ಲ ವಲಯಗಳಲ್ಲೂ ಖಾಸಗೀಕರಣಕ್ಕೆ ಉತ್ತೇಜನೆ ಮತ್ತು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿ ಕಾರ್ಮಿಕರನ್ನು 'ಶಿಸ್ತಿ'ಗೆ ಒಳಪಡಿಸುವುದು. ಇದು ನವ–ಉದಾರವಾದಿ ದಾರಿ, ದೊಡ್ಡ ಭಾರತೀಯ ಬಂಡವಳಿಗರು ಮತ್ತು ವಿದೇಶಿ ಬಂಡವಾಳ ಜನತೆಯನ್ನು ಹಾಗೂ ದೇಶದ ಸಂಪನ್ಮೂಲಗಳ ಸೂರೆಯನ್ನು ತೀವ್ರಗೊಳಿಸಲು ಅನುಕೂಲ ಮಾಡಿಕೊಡುವ ದಾರಿ.

ಈ ಜನ–ವಿರೋಧಿ ನಿಲುವೇ ದೇಶ ಎದುರಿಸುತ್ತಿರುವ ಮೂರನೇ ಬಿಕ್ಕಟ್ಟಿನಲ್ಲಿ ಪ್ರತಿಫಲನಗೊಳ್ಳುತ್ತಿದೆ. ಅದೆಂದರೆ ಪ್ರಜಾಪ್ರಭುತ್ವದ ಬಿಕ್ಕಟ್ಟು. ಮಾರ್ಚ್ 24 ರಂದು ಲಾಕ್‌ಡೌನ್ ಆರಂಭವಾದಾಗಿನಿಂದ ಕಳೆದ ಆರೂವರೆ ತಿಂಗಳಲ್ಲಿ ಪ್ರಜಾಪ್ರಭುತ್ವದ ಮೇಲೆ ಮತ್ತು ಹಲವಾರು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಯೋಜಿತ ದಾಳಿಗಳು ನಡೆಯುತ್ತಿವೆ.; ಸಿ.ಎ.ಎ.–ವಿರೋಧಿ ಪ್ರತಿಭಟನಾಕಾರರ ಮೇಲೆ, ಭೀಮ–ಕೊರೆಗಾಂವ್ ಪ್ರಕರಣದಲ್ಲಿ ಸುಳ್ಳೇ ಸಿಲುಕಿಸಿರುವ ಬುದ್ಧಿಜೀವಿಗಳು ಮತ್ತು ಕಾರ್ಯಕರ್ತರ ಮೇಲೆ ಯು.ಎ.ಪಿ.ಎ. ಮತ್ತು ರಾಜದ್ರೋಹದ ಅಂಶಗಳಂತಹ ಕರಾಳ ಕ್ರಮಗಳ ಪ್ರಯೋಗ; ಎಲ್ಲ ಪ್ರಜಾಸತ್ತಾತ್ಮಕ ಚಟುವಟಿಕೆಗಳನ್ನು ದಮನ ಮಡಲು ಸಾಂಕ್ರಾಮಿಕ ಕಾಯ್ದೆ ಮತ್ತು ವಿಪತ್ತು ನಿರ್ವಹಣಾ ಕಾಯ್ದೆಯ ಬಳಕೆ; ಜಮ್ಮು ಮತ್ತು ಕಾಶ್ಮೀರದಲ್ಲಿ ನಿವಾಸಿ ಕಾಯ್ದೆಯನ್ನು ಮುಂದೊತ್ತುವುದು, ಮತ್ತು ಅಂತಿಮವಾಗಿ ಸಂಸತ್ತನ್ನು ಕತ್ತರಿಸುವುದು.

ಸಂಸದೀಯ ಸ್ಥಾಯೀ ಸಮಿತಿಗಳ ನಿರ್ವಹಣೆಗಳನ್ನು ಕಡಿತ ಮಾಡಲಾಗಿದೆ, ಆನ್‌ಲೈನ್ ಸಭೆಗಳಿಗೆ ಅವಕಾಶ ನೀಡಲಾಗಿಲ್ಲ. ಮುಂಬರುವ ಸಂಸತ್ ಅಧಿವೇಶನದಲ್ಲಿ 'ಪ್ರಶ್ನೋತ್ತರ ಗಂಟೆ'ಯನ್ನು ರದ್ದು ಮಾಡಲಾಗಿದೆ, ಈ ಮೂಲಕ ಸರಕಾರಕ್ಕೆ ಪ್ರಶ್ನೆಗಳನ್ನು ಕೇಳುವ ಸದಸ್ಯರ ಪ್ರಾಥಮಿಕ ಹಕ್ಕನ್ನೂ ವಂಚಿಸಲಾಗಿದೆ. ರಾಜ್ಯಗಳ ಹಕ್ಕುಗಳನ್ನು ತುಳಿದು ಹಾಕಲಾಗುತ್ತಿದೆ. ಈ ಪಟ್ಟಿ ಹೀಗೇ ಸಾಗುತ್ತಿದೆ.

ರಾಜ್ಯಗಳಿಗೆ ಸಲ್ಲಬೇಕಾದ ಜಿಎಸ್‌ಟಿ ಪರಿಹಾರವನ್ನು ಕೊಡಲು ಹಣ ಇಲ್ಲ ಎಂದು ಸರಕಾರ ನೆವ ಒಡ್ಡುತ್ತಿರುವಾಗ, ಕೇಂದ್ರ ಗೃಹ ಮಂತ್ರಾಲಯ 50,000 ಕೋಟಿ ರೂ.ಗಳ ನಿಧಿಯೊಂದಿಗೆ ಒಂದು ರಾಷ್ಟ್ರೀಯ ಆಂತರಿಕ ಭದ್ರತಾ ನಿಧಿ(ಎನ್‌ಐಎಸ್‌ಎಫ್)ನ್ನು ರಚಿಸಬೇಕು ಎಂದು ಹಣಕಾಸು ಆಯೋಗಕ್ಕೆ ಹೇಳಿದೆ. ಇದು ಬಂಡವಾಳ ಖರ್ಚನ್ನು ಸರಿದೂಗಿಸಲಿಕ್ಕಾಗಿ. ಇದರಲ್ಲಿ ಬಹುಪಾಲು ಗುಪ್ತಚಾರ ಮತ್ತು ಗುಪ್ತಮಾಹಿತಿಗಳನ್ನು ಸಂಗ್ರಹಿಸುವ ತಂತ್ರಜ್ಞಾನಕ್ಕಾಗಿ. ಮಹತ್ವದ ಸಂಗತಿಯೆಂದರೆ ಅಂತರಿಕ ಭದ್ರತೆಗೆ ನಿಧಿನೀಡಿಕೆಯನ್ನು ಹಣಕಾಸು ಆಯೋಗದ ವಿಷಯವ್ಯಾಪ್ತಿಗೆ ಸೇರಿಸಲಾಗಿದೆ. ಇದು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳಬೇಕಾದ ಹೊಣೆಗಾರಿಕೆ ಎಂದು ಹೇಳುತ್ತ ಈ ಪ್ರತ್ಯೇಕ ನಿಧಿಯ ರಚನೆಯನ್ನು ಗೃಹಮಂತ್ರಿಗಳು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅಂದರೆ ಈ ಮೂಲಕ ರಾಜ್ಯಗಳಿಗೆ ಸಲ್ಲಬೇಕಾದ ಕೆಲವು ಸಂಪನ್ಮೂಲಗಳನ್ನು ಆಂತರಿಕ ಭದ್ರತೆ ಮತ್ತು ಗುಪ್ತಚಾರಿಕೆಯ ಪ್ರಭುತ್ವದತ್ತ ತಿರುಗಿಸಲಾಗುತ್ತದೆ.

ನ್ಯಾಯಾಂಗ, ಸುಮಾರಾಗಿ, ಹೇಳಿದಂತೆ ಕೇಳುವ ಸ್ಥಿತಿಯಲ್ಲಿದ್ದು ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳ ವಿಷಯದಲ್ಲಿ ಕಾರ್ಯಾಂಗದ ಪರವಾಗಿ ಹೋಗುವುದರಿಂದ, ಈ ಮಹಾಸೋಂಕಿನ ಅವಧಿಯಲ್ಲಿ ಸರ್ವಾಧಿಕಾರಶಾಹಿ ರಚನೆ ಗಟ್ಟಿಗೊಂಡಿದೆ. ಇದಕ್ಕೆ ಬಲಿಯಾಗಿರುವುದು ಜನಗಳ ಆರೋಗ್ಯ ಮತ್ತು ಆರ್ಥಿಕ ಒಳಿತು. ಇದು ಕೋವಿಡ್ ಕಾಲದಲ್ಲಿ ಮೋದಿ ಆಳ್ವಿಕೆಯ ನಿಜವಾದ ಮುಖ. ●



ಪ್ರಜಾಪ್ರಭುತ್ವಕ್ಕೆ ಗರಗಸ–ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು





ಸೆಪ್ಟಂಬರ್ 5: ಕಾರ್ಮಿಕರು, ರೈತರು, ಕೃಷಿಕೂಲಿಕಾರರ ಮತ್ತೊಂದು ದೇಶವ್ಯಾಪಿ ಪ್ರತಿಭಟನೆ



ಸೆಪ್ಟಂಬರ್ 5, 2020 ರಂದು ಸಿಐಟಿಯು, ಎಐಕೆಎಸ್ (ಅಖಿಲ ಭಾರತ ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು (ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ)ದ ಕರೆಯ ಮೇರೆಗೆ ದೇಶಾದ್ಯಂತ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರು ಮೋದಿ ಸರಕಾರದ ಜನ–ವಿರೋಧಿ, ಕಾರ್ಪೊರೇಟ್–ಪರ, ಸರ್ವಾಧಿಕಾರಶಾಹಿ ಮತ್ತು ಕೋಮುವಾದಿ ಧೋರಣೆಗಳ ವಿರುದ್ಧ ಜಂಟಿಯಾಗಿ ಮತಪ್ರದರ್ಶನ ನಡೆಸಿದರು. ಹಲವೆಡೆಗಳಲ್ಲಿ ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಕಾರ್ಯಕರ್ತರೂ ಈ ಪ್ರತಿಭಟನೆಗಳಲ್ಲಿ ಸೇರಿಕೊಂಡರು.

ಎರಡು ವರ್ಷಗಳ ಹಿಂದೆ ಸೆಪ್ಟಂಬರ್ 5, 2018 ರಂದು ಈ ಮೂರು ಸಂಘಟನೆಗಳು ಸೇರಿ ದಿಲ್ಲಿಯಲ್ಲಿ ಒಂದು ಬೃಹತ್ ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿಯನ್ನು ನಡೆಸಿದ್ದರು. ಅದರಲ್ಲಿ 2 ಲಕ್ಷ ಕಾರ್ಮಿಕರು, ರೈತರು, ಕೃಷಿಕೂಲಿಕಾರರು ದೇಶದ ಎಲ್ಲೆಡೆಗಳಿಂದ ಭಾಗವಹಿಸಿದ್ದರು. ಈ ಸೆಪ್ಟಂಬರ್ 5 ರಂದು ಕೊವಿಡ್ ಸಮಯದಲ್ಲಿ ಅದರ ಎರಡನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಮತ ಪ್ರದರ್ಶನಕ್ಕೆ ಕರೆ ನೀಡಲಾಗಿತ್ತು. ಸೆಪ್ಟಂಬರ್ 5 ಗೌರಿ ಲಂಕೇಶ್ ರವರ ಹತ್ಯೆಯ ಮೂರನೇ ವಾರ್ಷಿಕವೂ ಆಗಿದ್ದು ಮತ ಪ್ರದರ್ಶನಗಳಲ್ಲಿ ಅವರನ್ನು ನೆನಪಿಸಿಕೊಂಡು ಕೋಮುವಾದಿ ಶಕ್ತಿಗಳನ್ನು ಬಲವಾಗಿ ಖಂಡಿಸಲಾಯಿತು.

ದಿಲ್ಲಿಯಲ್ಲಿ ಬಿಟಿಆರ್ ಭವನದ ಎದುರು ನಡೆದ ಮತ ಪ್ರದರ್ಶನದಲ್ಲಿ ಸಿಐಟಿಯು ಅಧ್ಯಕ್ಷರಾದ ಕೆ. ಹೇಮಲತಾ, ಎಐಕೆಎಸ್ ಅಧ್ಯಕ್ಷರಾದ ಅಶೋಕ ಧವಳೆ ಮತ್ತು ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ವಿಕ್ರಂ ಸಿಂಗ್ ಭಾಗವಹಿಸಿದ್ದರು.

ಕರ್ನಾಟಕವೂ ಸೇರಿದಂತೆ ದೇಶದ ಎಲ್ಲ ರಾಜ್ಯಗಳಲ್ಲೂ ಈ ಮತ ಪ್ರದರ್ಶನಗಳು ವ್ಯಾಪಕವಾಗಿ ನಡೆದಿವೆ.

ಪುಟ 16 ಕ್ಕೆ









ಅಸಮ್ಮತಿಯ ರಾಕ್ಷಸೀಕರಣ





ಎರಡು ಆಡಳಿತಗಳನ್ನು ಬಯಲಿಗೆಳೆದ ಎರಡು ಹೈಕೋರ್ಟ್ ತೀರ್ಪುಗಳು

ಈ ಎರಡು ಪ್ರಕರಣಗಳಲ್ಲಿನ ನ್ಯಾಯಾಲಯದ ತೀರ್ಪುಗಳಲ್ಲಿ ವ್ಯತ್ಯಾಸವಿದೆ. ಆದರೆ ಕಲಿತಾ ಅವರ ಪ್ರಕರಣದಲ್ಲಿ ಕೇಂದ್ರ ಗೃಹ ಸಚಿವಾಲಯ ನಿರ್ದೇಶಿಸಿದಂತೆ ದೆಹಲಿ ಪೋಲೀಸ್‌ನ ಮತ್ತು ಡಾ ಖಾನ್ ಅವರ ಪ್ರಕರಣದಲ್ಲಿ ಉತ್ತರ ಪ್ರದೇಶದ ಸರಕಾರದ ಉದ್ದೇಶಗಳಲ್ಲಿ ಮತ್ತು ಅವು ಬಳಸಿದ ಅನೀತಿಯುತ ವಿಧಾನಗಳಲ್ಲಿ ಸಾಮ್ಯತೆಗಳಿವೆ. ಈ ಎರಡು ತೀರ್ಪುಗಳಲ್ಲಿ ಮೂರು ವಿಷಯಗಳು ಎದ್ದು ಕಾಣುತ್ತವೆ. ನ್ಯಾಯಾಲಯಗಳ ಜೊತೆಗೆ ಪ್ರತಿಪಕ್ಷಗಳ ರಾಜಕೀಯ ನಾಯಕರು ಸಹ ಈ ತೀರ್ಪುಗಳನ್ನು ಗಮನಿಸಬೇಕಾಗಿದೆ.

ಬೃಂದಾ ಕಾರಟ್ ಅನು: ಲವಿತ್ರ ವಿ.

ಅಲಹಾಬಾದ್ ಹೈಕೋರ್ಟ್ ಡಾ.ಕಫಿಲ್ ಖಾನ್ ಅವರನ್ನು ಎನ್.ಎಸ್.ಎ. ಅಡಿಯಲ್ಲಿ ನಿರ್ಬಂಧದಲ್ಲಿ ಇಟ್ಟಿರುವುದನ್ನು ರದ್ದು ಮಾಡಿದ ತೀರ್ಪು ಒಬ್ಬ ವ್ಯಕ್ತಿಗಷ್ಟೇ ನ್ಯಾಯ ಒದಗಿಸಿಲ್ಲ ಅದರ ವ್ಯಾಪ್ತಿ ಇನ್ನೂ ವಿಶಾಲವಾಗಿದೆ. ಅದು ನೀಡಿರುವ ಪರಿಹಾರ ಕೂಡ ಬಹಳಷ್ಟು ದೂಷಣೆಗಳಿಗೆ, ಕಿರುಕುಳಗಳಿಗೆ ಒಳಗಾದ ಈ ಭಾರತದ ನಾಗರಿಕನಗಷ್ಟೇ ಅಲ್ಲ, ಇನ್ನೂ ವ್ಯಾಪಕವಾಗಿದೆ. ಈ ತೀರ್ಪನ್ನು ಇನ್ನು ಮುಂದೆ ಇಂತಹ ಹಲವು ಪ್ರಕರಣಗಳಲ್ಲಿ ನ್ಯಾಯಾಂಗ ನಿಲುವಿನ ಒಂದು ಮಾದರಿಯಾಗಿ ಕಾಣಬಹುದು.

ಕಾಕತಾಳೀಯವಾಗಿ, ಅದೇ ದಿನ ದೆಹಲಿ ಹೈಕೋರ್ಟ್ ಮೇ ತಿಂಗಳಿನಿಂದ ಜೈಲಿನಲ್ಲಿದ್ದ ಪಿಂಜರಾ ತೋಡ್(ಪಂಜರ ಮುರಿ) ಗುಂಪಿನ ಸದಸ್ಯರಾದ ದೇವಾಂಗನಾ ಕಲಿತಾ ಅವರಿಗೆ ಜಾಮೀನು ನೀಡಿತು. ಕಲಿತಾ ಅವರನ್ನು ಒಟ್ಟು ನಾಲ್ಕು ಪ್ರಕರಣಗಳಲ್ಲಿ ಆರೋಪಿಯಾಗಿ ಮಾಡಲಾಗಿದೆ, ಈ ನಾಲ್ಕು ಪ್ರಕರಣಗಳು ಪೌರತ್ವ ತಿದ್ದುಪಡಿ ಕಾಯ್ದೆ/ರಾಷ್ಟ್ರೀಯ ಪೌರತ್ವ ರಿಜಿಸ್ಟರ್(ಸಿಎಎ–ಎನ್‌ಆರ್‌ಸಿ)–ವಿರೋಧಿ ಪ್ರತಿಭಟನೆಗಳಿಗೆ ಮತ್ತು ಈಶಾನ್ಯ ದೆಹಲಿಯಲ್ಲಿನ ಗಲಭೆಗಳಿಗೆ ಸಂಬಂಧಿಸಿದ ಪ್ರಕರಣಗಳು. ಇದು ಅವರಿಗೆ ಜಾಮೀನು ನೀಡಿದ ಮೂರನೇ ಪ್ರಕರಣವಾಗಿದೆ, ಜಾಮೀನು ಸಿಕ್ಕರೂ ಅವರು ಜೈಲಿನಲ್ಲಿಯೇ ಇರಬೇಕಾಗುತ್ತದೆ ಏಕೆಂದರೆ ಅವರ ವಿರುದ್ಧ ಕಾನೂನು ಬಾಹಿರ ಚಟುವಟಿಕೆ(ತಡೆಗಟ್ಟುವಿಕೆ) ಕಾಯ್ದೆ(ಯುಎಪಿಎ) ಅಡಿಯಲ್ಲಿ ನಾಲ್ಕನೇ ಪ್ರಕರಣವೂ ಇದೆ.

ಯುಎಪಿಎ ಮತ್ತು ಎನ್‌ಎಸ್‌ಎ ಅಡಿಯಲ್ಲಿ ಬಂಧನಕ್ಕೊಳಗಾದ ಆರೋಪಿಗಳ ಹಕ್ಕುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ನ್ಯಾಯಾಂಗ ಪ್ರಕ್ರಿಯೆಗಳು ಅಮಾನತುಗೊಳ್ಳುತ್ತವೆ. ಉತ್ತರ ಪ್ರದೇಶದ ಸರಕಾರವು ಡಾ ಖಾನ್ ಅವರ ಪ್ರಕರಣದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಬೀಮಾ ಕೋರೇಗಾಂನ ಎಲ್ಲ ಪ್ರಕರಣಗಳಲ್ಲಿ ಆರೋಪ ಪಟ್ಟಿಗಳನ್ನು ಸಲ್ಲಿಸಲು ಸಮಯಾವಕಾಶ ನೀಡಲಾಗಿದೆ. ಹೀಗೆ ಮಾಡುವುದರಿಂದ ಆರೋಪಿಗಳನ್ನು 'ಕಾನೂನಾತ್ಮಕವಾಗಿ'ಯೇ ಅನಿರ್ದಿಷ್ಟ ಕಾಲದ ವರೆಗೆ ಮತ್ತು ಯಾವುದೇ ಹಕ್ಕುಗಳಿಲ್ಲದೇ ಬಂಧಿಸಿ ಇಡಬಹುದಾಗಿದೆ.

ದ್ವೇಷಭರಿತ ಭಾಷಣ

ಈ ಎರಡು ಪ್ರಕರಣಗಳಲ್ಲಿನ ನ್ಯಾಯಾಲಯದ ತೀರ್ಪುಗಳಲ್ಲಿ ವ್ಯತ್ಯಾಸವಿದೆ. ಆದರೆ ಕಲಿತಾ ಅವರ ಪ್ರಕರಣದಲ್ಲಿ ಕೇಂದ್ರ ಗೃಹ ಸಚಿವಾಲಯ ನಿರ್ದೇಶಿಸಿದಂತೆ ದೆಹಲಿ ಪೋಲೀಸ್‌ನ ಮತ್ತು ಡಾ ಖಾನ್ ಅವರ ಪ್ರಕರಣದಲ್ಲಿ ಉತ್ತರ ಪ್ರದೇಶದ ಸರಕಾರದ ಉದ್ದೇಶಗಳಲ್ಲಿ ಮತ್ತು ಅವು ಬಳಸಿದ ಅನೀತಿಯುತ ವಿಧಾನಗಳಲ್ಲಿ ಸಾಮ್ಯತೆಗಳಿವೆ. ಈ ಎರಡು ತೀರ್ಪುಗಳನ್ನು ನೋಡಿದ ಮೇಲೆ ನನ್ನ ಗಮನಕ್ಕೆ ಬಂದಂತೆ ಒಟ್ಟು ಮೂರು ವಿಷಯಗಳು ಇಲ್ಲಿ ಎದ್ದು ಕಾಣುತ್ತವೆ. ಮೊದಲನೆಯದು ದ್ವೇಷಭರಿತ ಮಾತುಗಳು ಮತ್ತು ಹಿಂಸಾಚಾರಕ್ಕೆ ಪ್ರಚೋದನೆ. ಎರಡೂ ಪ್ರಕರಣಗಳಲ್ಲಿ, ಸಿಎಎ/ಎನ್‌ಆರ್‌ಸಿ–ವಿರೋಧಿ ಪ್ರತಿಭಟನೆಗಳಿಗೆ ಸಂಬಂಧಪಟ್ಟ ಕಾನೂನಿನ ಅಂಶಗಳ ಅಡಿಯಲ್ಲಿ ಇಂತಹ ಅಪರಾಧಗಳು ನಡೆದಿವೆ ಎಂದು ಆರೋಪ ಹೊರಿಸಲಾಗಿದೆ.

ಅಲಹಾಬಾದ್ ನ್ಯಾಯಾಲಯದ ಆದೇಶದಲ್ಲಿ ಡಾ ಖಾನ್ ಅವರ ಭಾಷಣವನ್ನು ಸಂಪೂರ್ಣವಾಗಿ ನಮೂದಿಸಲಾಗಿದೆ. "ದ್ವೇಷ ಅಥವಾ ಹಿಂಸೆಯನ್ನು ಉತ್ತೇಜಿಸಲು ಇದು ಯಾವುದೇ ಪ್ರಯತ್ನವನ್ನು ಬಹಿರಂಗಪಡಿಸುವುದಿಲ್ಲ. ಇದು ಎಲ್ಲಿಯೂ ಅಲಿಘಡ್ ನಗರದ ಶಾಂತಿ ಮತ್ತು ಪ್ರಶಾಂತತೆಗೆ ಧಕ್ಕೆ ತರುವುದಿಲ್ಲ" ಎಂದು ಅದು ಹೇಳುತ್ತದೆ. ದೆಹಲಿ ಹೈಕೋರ್ಟ್ ತನ್ನ ತೀರ್ಪಿನಲ್ಲಿ ದೆಹಲಿ ಪೋಲೀಸ್ "ಆಕೆ ತನ್ನ ಭಾಷಣದಲ್ಲಿ ನಿರ್ದಿಷ್ಟ ಸಮುದಾಯದ ಮಹಿಳೆಯರನ್ನು ಪ್ರಚೋದಿಸಿದ ಅಥವಾ ದ್ವೇಷದ ಭಾಷಣವನ್ನು ನೀಡಿದ ಮತ್ತು ಯುವ ಸಮುದಾಯದ ಅಮೂಲ್ಯ ಜೀವನಕ್ಕೆ ಮತ್ತು ಆಸ್ತಿಪಾಸ್ತಿಗೆ ಹಾನಿ ಮಾಡಿದ ಯಾವುದೇ ಸಾಕ್ಷಿಗಳನ್ನು ನೀಡುವಲ್ಲಿ ವಿಫಲವಾಗಿದೆ" ಎಂದಿದೆ.

ಇದಲ್ಲದೆ ಅಲಹಾಬಾದ್ ಹೈಕೋರ್ಟ್, ಆಡಳಿತ "ಭಾಷಣದಲ್ಲಿನ ಕೆಲವು ಪದಗುಚ್ಛಗಳನ್ನು ತಮಗೆ ಬೇಕಾದಂತೆ ಆಯ್ದುಕೊಂಡು ಅವುಗಳ ನಿಜವಾದ ಆಶಯವನ್ನು ನಿರ್ಲಕ್ಷಿಸಿ ಅದನ್ನು ಉಲ್ಲೇಖಿಸಿದೆ" ಎಂದು ದೂಷಿಸಿದೆ. ದಿಲ್ಲಿ ಹೈಕೋರ್ಟ್ ಜಾಮೀನು ನೀಡುವುದರಿಂದ ಆರೋಪಿಗೆ "ಮತ್ತಷ್ಟು ಅನಗತ್ಯ ಕಿರುಕುಳ, ಅಪಮಾನ ಮತ್ತು ಅಸಮರ್ಥನೀಯ ಬಂಧನದ ನೋವನ್ನು" ತಡೆಯಬಹುದು ಎಂದು ಹೇಳಿದೆ.

ಇದು ಯಾವ ಸಂದರ್ಭದಲ್ಲಿ ಪದಗಳನ್ನು ಉಚ್ಚರಿಸಲಾಗಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾದುದರ ಮಹತ್ವವನ್ನು ಎತ್ತಿ ತೋರಿಸುತ್ತದೆ. ಆದರೂ ಇಂದು ಹಲವಾರು ಕಾರ್ಯಕರ್ತರನ್ನು ಅವರು 'ದ್ವೇಷಭಾಷಣ' ಮಾಡಿದ್ದಾರೆಂದು ಕುತ್ಸಿತ ದೂಷಣೆಗಳಿಗೆ, ಕಿರುಕುಳಗಳಿಗೆ ಮತ್ತು ಅಪಮಾನಕ್ಕೆ ಒಳಪಡಿಸಲಾಗುತ್ತಿದೆ. ಇಂಥವುಗಳನ್ನು ಕೆಲವು ನ್ಯಾಯಾಲಯಗಳು ಕೂಡ "ಗಂಭೀರ ಆರೋಪಗಳು" ಎಂದು ಪರಿಗಣಿಸುವಂತೆಯೂ ಕಾಣುತ್ತದೆ. ಸುಪ್ರೀಂ ಕೋರ್ಟ್ ನಲ್ಲಿಯೂ ಸಹ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮಾನವ ಹಕ್ಕುಗಳ ಕಾರ್ಯಕರ್ತ ಹರ್ಷ ಮಂದರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ವಿರೋಧಿಸಿದರು. ಮಂದರ್ ಅವರ ಒಂದು ಭಾಷಣದ ಆಧಾರದ ಮೇಲೆ ಅವರು "ಸುಪ್ರೀಂ ಕೋರ್ಟಿನ ಬಗ್ಗೆ ನಂಬಿಕೆಯ ಕೊರತೆಯನ್ನು" ತೋರಿಸಿದ್ದಾರೆ ಎಂದರು. ಮತ್ತು ಸುಪ್ರಿಂ ಕೋರ್ಟ್ ಶ್ರೀ ಮೆಹತಾ ಅವರ ವಾದವನ್ನು ಒಪ್ಪಿಕೊಂಡಿತಷ್ಟೇ ಅಲ್ಲ, ಹರ್ಷ ಮಂದರ್ ಅವರ ಭಾಷಣವನ್ನೇ ಕೇಳದೆ ಅವರ ವಿರುದ್ಧ ಪ್ರತಿಕೂಲ ಟಿಪ್ಪಣಿಗಳನ್ನು ಮಾಡಿತು. ನಂತರ ಹರ್ಷ ಮಂದರ್ ಅವರ ಆ ಭಾಷಣವನ್ನು ಪೂರ್ಣವಾಗಿ ಸಾರ್ವಜನಿಕಗೊಳಿಸಲಾಯಿತು. ಕಫಿಲ್ ಖಾನ್‌ರವರ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್‌ನ "ತಮಗೆ ಬೇಕಾದಂತೆ ಆಯ್ದುಕೊಳ್ಳಲಾಗಿದೆ" ಎಂಬ ಟಿಪ್ಪಣಿ ಶ್ರೀ ಮೆಹತಾ ಮಾಡಿರುವ ಕೃತ್ಯದ ಸಂದರ್ಭದಲ್ಲಿಯೂ ಅಷ್ಟೇ ಪ್ರಸ್ತುತ ಎಂದು ಪರಿಗಣಿಸಬಹುದು.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

"ವ್ಯಕ್ತಿನಿಷ್ಟ ತೃಪ್ತಿ"

ಎರಡನೆಯ ವಿಷಯವೆಂದರೆ "ಬಂಧಿಸುವ ಅಧಿಕಾರಿಯ ವ್ಯಕ್ತಿನಿಷ್ಟ ತೃಪ್ತಿ". ಸಿಎಎ/ಎನ್‌ಆರ್‌ಸಿ–ವಿರೋಧಿ ಕಾರ್ಯಕರ್ತರ ವಿರುದ್ಧದ ಹೆಚ್ಚಿನ ಪ್ರಕರಣಗಳಲ್ಲಿ, ಆರೋಪಿಗಳನ್ನು ಬಿಡುಗಡೆ ಮಾಡಿದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತದೆ ಮತ್ತು ಅವರು ರಾಷ್ಟ್ರವಿರೋಧಿ ಪಿತೂರಿಯ ಭಾಗವಾಗಿದ್ದಾರೆ ಎನ್ನುವ ವಾದಗಳನ್ನು ಬಳಸಿಕೊಂಡು ಅವರ ಜಾಮೀನಿನ ಮನವಿಯನ್ನು ನಿರಾಕರಿಸಲಾಗಿದೆ. ಇದಕ್ಕೆ "ಬಂಧಿಸುವ ಅಧಿಕಾರಿಯ ವ್ಯಕ್ತಿನಿಷ್ಟ ತೃಪ್ತಿ". ಮಾತ್ರ ಅಗತ್ಯವಿರುತ್ತದೆ. ಡಾಕ್ಟರ್ ಖಾನ್ ಅವರ ಪ್ರಕರಣದಲ್ಲಿಯೂ ಸಹ ಇದನ್ನು ವಾದಿಸಲಾಗಿದೆ. ಅಲಹಾಬಾದ್ ಹೈಕೋರ್ಟ್ ಇದೊಂದು ಆಧಾರವಾಗಬಹುದು ಮತ್ತು ಪೂರ್ವ ನಿದರ್ಶನವಾಗಬಹುದು ಎಂದು ಒಪ್ಪಿಕೊಳ್ಳುತ್ತಲೇ "ವ್ಯಕ್ತಿನಿಷ್ಟ ತೃಪ್ತಿ ಎಂದರೆ ಒಬ್ಬ ತರ್ಕಬದ್ಧ ಮನುಷ್ಯನ ತೃಪ್ತಿ, ಇದನ್ನು ಒಬ್ಬ ವಿವೇಚನಾಶೀಲ ವ್ಯಕ್ತಿಯನ್ನು ತೃಪ್ತಿಪಡಿಸಬಲ್ಲ ಕೆಲವು ವಿಷಯಗಳ ಆಧಾರದಲ್ಲಿ ತಲುಪಬಹುದು. ಇದು ಸಂಬಂಧಪಟ್ಟ ಅಧಿಕಾರಿಯ ಹುಚ್ಚು ಕಲ್ಪನೆಗಳು ಮತ್ತು ವಿಕಾರಗಳಿಗೆ ಸಂಬಂಧಪಟ್ಟಿರುವುದಿಲ್ಲ" ಎಂದು ಹೇಳಿದೆ. ದೆಹಲಿ ಬಂಧನಗಳು ಮತ್ತು ಎಲ್ಗರ್ ಪರಿಷತ್ ಪ್ರಕರಣಗಳಲ್ಲಿಯೂ 'ಒಬ್ಬ ವಿವೇಚನಾಶೀಲ ವ್ಯಕ್ತಿಯನ್ನು ತೃಪ್ತಿಪಡಿಸಬಲ್ಲ ವಿಷಯಗಳ' ಮಾನದಂಡಗಳು ಅನ್ವಯವಾಗಬೇಕು. ಇವು ನಾಗರಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಬಹಳಷ್ಟು ಪ್ರಸ್ತುತವಾಗಿರುವ ಮಾನದಂಡಗಳು. ಕನಿಷ್ಟ ಪಕ್ಷ ಇದು ದೆಹಲಿಯ ಪ್ರಕರಣದಲ್ಲಿ ದ್ವೇಷ ಭಾಷಣ ಮಾಡಿದ ಭಾರತೀಯ ಜನತಾ ಪಕ್ಷದ ನಾಯಕರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ದಾರಿ ಮಾಡಿಕೊಡುತ್ತದೆ. ಈಗ, ಎಲ್ಗರ್ ಪರಿಷದ್ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್ ಅವರಿಗೆ ಜಾಮೀನು ನಿರಾಕರಿಸಲು ಸಾಧ್ಯವಾಗುತ್ತದೆಯೇ?

"ಸಾಕ್ಷಿ'ಗಳನ್ನು ಕರೆಯುವುದು

ಮೂರನೆಯ ವಿಷಯ ಸಾಕ್ಷಿಗಳದಾಗಿದೆ. ದೆಹಲಿ ಹೈಕೋರ್ಟ್ ಜಾಮೀನು ಆದೇಶದಲ್ಲಿ "ಅರ್ಜಿದಾರರು (ದೇವಾಂಗನಾ ಕಲಿತ) ಮಾಡಿದ ಕೃತ್ಯದಿಂದ ಆರೋಪಿತ ಅಪರಾಧ ನಡೆದಿದೆ ಎಂದು ಸಾಬೀತುಪಡಿಸಲು ಯಾವುದೇ ರೀತಿಯ ಪುರಾವೆಗಳಿಲ್ಲ, ಸೆಕ್ಷನ್ 1 164 ರ ಅಡಿಯಲ್ಲಿ ದಾಖಲಿಸಲಾದ ಹೇಳಿಕೆಗಳನ್ನು ಹೊರತುಪಡಿಸಿ, ಅದೂ ಸಹ ತಡವಾಗಿ ದಾಖಲಿಸಲಾದ ಹೇಳಿಕೆಗಳು..." ಎಂದು ವಿಶೇಷವಾಗಿ ಉಲ್ಲೇಖಿಸಿದೆ. ಇಂತಹ ಅನೇಕ ಪ್ರಕರಣಗಳು ಮುಖ್ಯವಾಗಿ ಸಾಕ್ಷಿಗಳು ಎಂದು ಹೇಳಲಾಗುವವರನ್ನೇ ಅವಲಂಬಿಸಿರುತ್ತವೆ. ದೆಹಲಿಯಲ್ಲಿ ಇಂತಹ ಉದಾಹರಣೆಗಳು ಹಲವಾರು ಸಿಗುತ್ತವೆ. ಡಿಸೆಂಬರ್ 2019 ಮತ್ತು ಫೆಬ್ರುವರಿ 2020 ರ ನಡುವೆ ಸಿಎಎ/ಎನ್‌ಆರ್‌ಸಿ ವಿರೋಧಿ ಪ್ರತಿಭಟನೆಗಳ ಸಂದರ್ಭಗಳಲ್ಲಿನ ಸೌಹಾರ್ದ ಸಭೆಗಳಲ್ಲಿ ಭಾಗವಹಿಸಿದವರನ್ನು ಸಹ ದಿಲ್ಲಿ ಪೋಲಿಸಿನ ಸ್ಪೆಷಲ್ ಬ್ರಾಂಚಿನವರು ಪ್ರಶ್ನಿಸಲು ಕರೆಸಿಕೊಂಡು, ಪೋಲಿಸರು ಗುರಿಯಿಟ್ಟಿರುವವರ ಪಟ್ಟಿಯಲ್ಲಿನ ನಿರ್ದಿಷ್ಟ ಕಾರ್ಯಕರ್ತರನ್ನು ಹೆಸರಿಸುವಂತೆ ಹೇಳಲಾಗುತ್ತಿದೆ.

ನ್ಯಾಯಾಲಯಗಳ ಜೊತೆಗೆ ಪ್ರತಿಪಕ್ಷಗಳ ರಾಜಕೀಯ ನಾಯಕರು ಸಹ ಈ ತೀರ್ಪುಗಳನ್ನು ಗಮನಿಸಬೇಕು. ದುರದೃಷ್ಟವಶಾತ್ ಎಡಪಕ್ಷಗಳನ್ನು ಹೊರತುಪಡಿಸಿ ಪ್ರತಿಭಟನಾಕಾರರ ಮೇಲಾಗುತ್ತಿರುವ ಅನ್ಯಾಯ, ಹಿಂಸಾಚಾರದ ವಿರುದ್ಧ, ಕೋಮು ಹಿಂಸಾಚಾರಕ್ಕೆ ಅವರನ್ನು ದೂಷಿಸುತ್ತಿರುವುದರ ವಿರುದ್ಧ ಮಾತನಾಡದೆ ಅನೇಕ ಪಕ್ಷಗಳು ಮೌನವನ್ನು ತಾಳಿವೆ. ಗೃಹ ಸಚಿವಾಲಯದ ತನಿಖಾ ಸಂಸ್ಥೆಗಳು ಆಳುವ ಪಕ್ಷದ ನಾಯಕರನ್ನು ನಾಚಿಕೆಯಿಲ್ಲದೆ ರಕ್ಷಿಸುತ್ತಿವೆ. ಡಾಕ್ಟರ್ ಖಾನ್ ಅವರಂತಹ ಮುಗ್ಧ ಜನಪರ ಕಾಳಜಿ ಉಳ್ಳಂತಹ ನಾಗರಿಕರನ್ನು ಬಂಧಿಸುತ್ತಿವೆ. ಇದೀಗ ಪ್ರತಿಪಕ್ಷಗಳು ಒಟ್ಟಾಗಿ ಯುಎಪಿಎ ಮತ್ತು ಎನ್‌ಎಸ್‌ಎ ಅಡಿಯಲ್ಲಿ ಜೈಲುಗಳಿಗೆ ಹಾಕಿರುವ ರಾಜಕೀಯ ಬಂಧಿತರನ್ನು ಬಿಡುಗಡೆ ಮಾಡಬೇಕೆಂದು, ಮತ್ತು ತಮ್ಮ ಭಾಷಣಗಳ ಮೂಲಕ ಹಿಂಸಾಚಾರವನ್ನು ಪ್ರಚೋದಿಸಿರುವ ಆಳುವ ಪಕ್ಷದಲ್ಲಿರುವವರನ್ನು ಬಂಧಿಸಬೇಕು ಮತ್ತು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಬೇಕಾದ ಸಮಯವಲ್ಲವೇ?

ಗ್ರಾಮೀಣ ಮಹಿಳೆಯರ ನಿರುದ್ಯೋಗ ಅರೆ-ಉದ್ಯೋಗಗಳ ವ್ಯವಸ್ಥಿತ ನಿರಾಕರಣೆಯನ್ನು ಬಯಲು ಮಾಡುವ ಪುಸ್ತಕ: ಬೃಂದಾ

– ಜಿ.ಎಸ್.ಮಣಿ (ಮೂಲ: ಸಂದೀಪನ ಬಕ್ಷಿ)

'ಮಹಿಳೆಯರ ಕೆಲಸವನ್ನು ಅಗೋಚರಗೊಳಿಸುವ, ಕಡಿಮೆ ಎಣಿಸುವ ಮತ್ತು ಕಡಿಮೆ ಅಂದಾಜು ಮಾಡುವ ವ್ಯವಸ್ಥಿತ ಪ್ರವೃತ್ತಿ ಆಡಳಿತ ತಜ್ಞರಲ್ಲಿ ಮತ್ತು ನೀತಿ ರೂಪಿಸುವ ಪ್ರಕ್ರಿಯೆಯಲ್ಲಿ ಕಂಡುಬರುತ್ತಿದೆ' ಎಂದು ಸಿ.ಪಿ.ಐ(ಎಂ) ನ ಪಾಲಿಟ್‌ಬ್ಯುರೋ ಸದಸ್ಯೆ ಬೃಂದಾ ಕಾರಟ್ ಹೇಳಿದ್ದಾರೆ. ಅವರು ಮುಂದುವರೆದು ಗ್ರಾಮೀಣ ಮಹಿಳೆಯರ ಕೆಲಸದ ವಿಷಯದಲ್ಲಿ ಇದು ಹೆಚ್ಚು ಅನ್ವಯವಾಗುತ್ತದೆ ಎಂದಿದ್ದಾರೆ. ಕಡಿಮೆ ಎಣಿಕೆ ಮತ್ತು ಕಡಿಮೆ ಅಂದಾಜಿಸುವ ಸಮಸ್ಯೆಯನ್ನು ಎತ್ತಿ ತೋರಿಸುತ್ತಾ ಅವರು ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ನಿರುದ್ಯೋಗ ಮತ್ತು ಅರೆ-ಉದ್ಯೋಗದ ಸಮಸ್ಯೆಗಳನ್ನು ನಿರಾಕರಿಸುವುದು ನೀತಿಯೇ ಆಗಿರುವ ಪರಿಸ್ಥಿತಿಯತ್ತ ಗಮನ ಸೆಳೆದರು. "ಗ್ರಾಮೀಣ ಭಾರತದಲ್ಲಿ ಮಹಿಳೆಯರು ಮತ್ತು ಕೆಲಸ" (Women and Work in Rural India) ಎಂಬ ಮಧುರಾ ಸ್ವಾಮಿನಾಥನ್, ಶ್ರುತಿ ನಾಗಭೂಷಣ್ ಮತ್ತು ವಿ ಕೆ ರಾಮಚಂದ್ರನ್ ಸಂಪಾದಿತ, ತುಲಿಕ ಬುಕ್ಸ್ ಮತ್ತು ಕೃಷಿ ಅಧ್ಯಯನ ಪ್ರತಿಷ್ಠಾನದಿಂದ (Foundation for Agrarian Studies - FAS) ಪ್ರಕಟಿತ ಕೃತಿಯನ್ನು ಬಿಡುಗಡೆ ಮಾಡುತ್ತಾ ಅವರು ಈ ಮಾತುಗಳನ್ನಾಡಿದರು. ಪುಸ್ತಕವನ್ನು ಆಗಸ್ಟ್ 25, 2020 ರಂದು ಇಂಟರ್ನೆಟ್ ಮೂಲಕ ಬಿಡುಗಡೆ ಮಾಡಲಾಯಿತು. ತುಲಿಕ ಪುಸ್ತಕಗಳ ವ್ಯವಸ್ಥಾಪಕ ನಿರ್ದೇಶಕಿ ಇಂದು ಚಂದ್ರಶೇಖರ್ ಮತ್ತು ರೋಸಾ ಲುಕ್ಸೆಂಬುರ್ಗ್ ಸ್ಟಿಫ್ತುಂಗ್ ನ ಯೋಜನಾ ವ್ಯವಸ್ಥಾಪಕ ವಿನೋದ್ ಕೊಷ್ಟಿ ಪುಸ್ತಕದ ಪ್ರತಿಯನ್ನು ಬೃಂದಾ ಕಾರಟ್ ಅವರಿಗೆ ಜಂಟಿಯಾಗಿ ಹಸ್ತಾಂತರಿಸಿದರು. ಪುಸ್ತಕ ಬಿಡುಗಡೆಯ ನಂತರ ಬೃಂದಾ ಅವರು ಮುಖ್ಯ ಭಾಷಣ ಮಾಡಿದರು.

ಈ ಪುಸ್ತಕದಲ್ಲಿನ ಪ್ರಬಂಧಗಳು ಗ್ರಾಮೀಣ ಮಹಿಳೆಯರ ಕೆಲಸದ ಬಗೆಗೆ ಸರ್ಕಾರಗಳ ಅಧಿಕೃತ ನಿಲುವು ಮತ್ತು ವಿಧಾನಗಳಲ್ಲಿನ ನ್ಯೂನತೆಗಳನ್ನು ಕಣ್ಣಿಗೆ ಕಟ್ಟುವಂತೆ ಹಿಡಿದಿಡುತ್ತವೆ ಎಂದು ಅವರು ಹೇಳಿದರು. ಅಲ್ಲದೆ ಗ್ರಾಮೀಣ ಮಹಿಳೆಯರ ಉದ್ಯೋಗಗಳ ಬಹು ಪದರುಗಳ ಹಲವು ಒಳನೋಟಗಳಿರುವ ವಿಶ್ಲೇಷಣೆಯ ಮೂಲಕ ಈ ಪ್ರಬಂಧಗಳು ನೀಡುತ್ತವೆ ಎಂದರು. ಈ ಪುಸ್ತಕ ಗ್ರಾಮೀಣ ಮಹಿಳೆಯರು ಸ್ವ-ಇಚ್ಛೆಯಿಂದ ಉದ್ಯೋಗ ತೊರೆಯುವುದರಿಂದ ಹೆಚ್ಚಿನ ಮಹಿಳಾ ನಿರುದ್ಯೋಗ ಮತ್ತು ಅರೆ-ಉದ್ಯೋಗದ ಸಮಸ್ಯೆ ಇದೆ ಎಂಬ ಸುಳ್ಳನ್ನು ಪರಿಣಾಮಕಾರಿಯಾದ ಪುರಾವೆಗಳ ಮೂಲಕ ಬಹಿರಂಗಗೊಳಿಸುತ್ತದೆ ಎಂದು ಅವರು ಹೊಗಳಿದರು.

ನಮ್ಮ ದೇಶದ 2011 ರ ಜನಗಣತಿಯ ಪ್ರಕಾರ 15 ವರ್ಷ ಮೇಲ್ಪಟ್ಟ ಗ್ರಾಮೀಣ ಭಾರತದ 27.5 ಕೋಟಿ ಮಹಿಳೆಯರ ಶೇ 35 ರಷ್ಟು ಮಹಿಳೆಯರು ಕಾರ್ಮಿಕ ಶಕ್ತಿಯ ಭಾಗವಾಗಿದ್ದಾರೆ. ಕೃಷಿ ಉತ್ಪಾದನೆಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಾದ ಪರಿಷ್ಕರಣೆ, ಉರುವಲು ಸಂಗ್ರಹ ಇತ್ಯಾದಿ ಆರ್ಥಿಕ ಫಲ ನೀಡುವ ಚಟುವಟಿಕೆಗಳನ್ನು ಕೆಲಸದ ಅಧಿಕೃತ ವ್ಯಾಖ್ಯಾನಗಳಲ್ಲಿ ಸೇರಿಸಿದರೆ ಈ ಸಂಖ್ಯೆ ದುಪ್ಪಟ್ಟಿನ ಹತ್ತಿರ ಹೋಗುತ್ತದೆ. ಇದು ನೀತಿ ನಿರೂಪಣೆಯ ಸಂಕಥನಗಳಲ್ಲಿ ಮತ್ತು ತಜ್ಞರ ತಿಳುವಳಿಕೆಯಲ್ಲಿ ಇರುವ ನ್ಯೂನತೆಗಳು. ಈ ನ್ಯೂನತೆಗಳನ್ನು ತೊಡೆದುಹಾಕುವ ಸೂಕ್ತ ಪ್ರಯತ್ನದ ದ್ಯೋತಕ ಈ ಪುಸ್ತಕ. ಭಾರತದ ಗ್ರಾಮೀಣ ಭಾಗದಲ್ಲಿನ ಮಹಿಳೆಯರ ಉದ್ಯೋಗ/ಕೆಲಸಗಳ ಅಧ್ಯಯನಕ್ಕೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕೊಡುಗೆಯನ್ನು ಈ ಪುಸ್ತಕ ನೀಡುತ್ತದೆ.


ಬೃಂದಾ ಅವರು ಮುಂದುವರೆದು ಬಂಡವಾಳಶಾಹಿ ಸೃಷ್ಟಿಸಿದ ಗ್ರಾಮೀಣ ಜೀವನೋಪಾಯಗಳ ಬಿಕ್ಕಟ್ಟಿನಿಂದಾಗಿ ಹತ್ತು ಹಲವು ಕಾರ್ಯಗಳಲ್ಲಿ ತೊಡಗಬೇಕಾದ ಅನಿವಾರ್ಯತೆಗೆ ತುತ್ತಾಗಿ ಮಹಿಳೆಯ ಕೆಲಸಗಳು ನಿರ್ದಿಷ್ಟ ವೃತ್ತಿ ಗುಂಪುಗಳಲ್ಲಿ ವರ್ಗೀಕೃತವಾಗದಿರುವ ಸಮಸ್ಯೆ ಉಂಟಾಗಿದೆ. ಪ್ರತಿಷ್ಠಾನದ ಸಂಶೋಧನೆಯಲ್ಲಿ ಅಭಿವೃದ್ಧಿಪಡಿಸಿ ಬಳಸಲಾದ 'ಸಮಯದ ಉಪಯೋಗದ' ವಿಧಾನ ಗ್ರಾಮೀಣ ಮಹಿಳೆಯರ ಕೆಲಸದ ವೈವಿಧ್ಯತೆಯ ಅಧ್ಯಯನ ಮತ್ತು ವಿಶ್ಲೇಷಣೆಯಲ್ಲಿ ಬಳಸಬಹುದಾದ ಉತ್ತಮ ವಿಧಾನವಾಗಿದೆ ಎಂದರು. ದೊಡ್ಡ ಪ್ರಮಾಣದಲ್ಲಿ 'ಸಮಯದ ಉಪಯೋಗ'ದ ಸಮೀಕ್ಷೆಗಳನ್ನು ನಡೆಸುವ ಮೂಲಕ ಭಾರತದ ಮಹಿಳಾ ಚಳುವಳಿಗಳು ವಿಶ್ಲೇಷಣೆಯ ಉತ್ತಮ ಪ್ರಯೋಜನ ಪಡೆಯಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪುಸ್ತಕದಲ್ಲಿ ಗ್ರಾಮೀಣ ಮಹಿಳೆಯರಲ್ಲಿನ ವರ್ಗ ವ್ಯತ್ಯಾಸಗಳನ್ನು ನಮೂದಿಸಿರುವ ಬಗೆಗೂ ಬೃಂದಾ ಅವರು ಮಾತನಾಡಿದರು. ಗ್ರಾಮೀಣ ಭಾರತದಲ್ಲಿ ಮಹಿಳಾ ಮತ್ತು ಪುರುಷ ಕೆಲಸಗಾರರ ನಡುವಿನ ವೇತನ ವ್ಯತ್ಯಾಸಗಳನ್ನು ಪ್ರಸ್ತಾಪಿಸಿರುವ ವಿಷಯವನ್ನೂ ಅವರು ಚರ್ಚಿಸಿದರು. ಈ ವಿಷಯದ ಎಳೆಗಳನ್ನು ಮುಂದಕ್ಕೆ ಕೊಂಡೊಯ್ಯುತ್ತಾ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಮಹಿಳಾ ದುಡಿಮೆಗಾರರ ಸ್ನೇಹಿ ಮಾಡಲು ಸೂಕ್ತ ವಿನ್ಯಾಸ ಬದಲಾವಣೆ ಮಾಡುವ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು.

ಕಾರ್ಷಕ ಸಂಬಂಧಗಳ ಅಧ್ಯಯನದಲ್ಲಿ ಜಾತಿ ಆಯಾಮವನ್ನು ಪರಿಗಣಿಸಿರುವುದನ್ನು ಪ್ರಶಂಸಿಸಿ ಅವರು ಪ್ರತಿಷ್ಠಾನವನ್ನು ಅಭಿನಂದಿಸಿದ್ದಾರೆ. ಈ ಪ್ರಯತ್ನಗಳು ಪುಸ್ತಕದಲ್ಲಿ ವ್ಯಕ್ತಗೊಂಡಿವೆ. ಪುಸ್ತಕದ ಒಂದು ವಿಭಾಗ ಗ್ರಾಮೀಣ ಭಾರತದ ದಲಿತ ಮಹಿಳೆಯ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿ ತೋರಿಸಿದೆ. ಅವಳ ಉದ್ಯೋಗದಾತನೊಡನೆ ದಲಿತ ಮಹಿಳಾ ಕಾರ್ಮಿಕಳ ಸಾಮಾಜಿಕ ಸಂಬಂಧದ ಸ್ವರೂಪವೇ ಅವಳನ್ನು ಅತ್ಯಂತ ದುರ್ಬಲ ಪರಿಸ್ಥಿತಿಗೆ ತಳ್ಳುತ್ತದೆ. ಇಂತಹ ಅಧ್ಯಯನವನ್ನು ದಲಿತ ಮತ್ತು ಆದಿವಾಸಿ ಮಹಿಳೆಯರ ಪರಿಸ್ಥಿತಿಗೂ ವಿಸ್ತರಿಸಿ ಆದಿವಾಸಿ ಮಹಿಳೆಯರ ಕಾರ್ಮಿಕೀಕರಣವನ್ನು ಅಭ್ಯಸಿಸುವ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಗ್ರಾಮೀಣ ಭಾರತದಲ್ಲಿ 'ಆಧುನಿಕ ಲೇವಾದೇವಿಗಾರರು' ಆಗಿ ಬೆಳೆದಿರುವ ಮೈಕ್ರೋ-ಫೈನಾನ್ಸ್ ಸಂಸ್ಥೆಗಳ ಪಾತ್ರದ ವಿಮರ್ಶಾತ್ಮಕ ವಿಶ್ಲೇಷಣೆ ಸಹ ಪುಸ್ತಕದ ಹೆಗ್ಗಳಿಕೆ ಎಂದರು.

ಈ ಪುಸ್ತಕವನ್ನು ಬರೆಯುವಲ್ಲಿ ಆಗಿರುವ ಕಠಿಣ ಪರಿಶ್ರಮ ಮತ್ತು ವಿಶ್ಲೇಷಣೆಯನ್ನು ಅವರು ಪ್ರಶಂಸಿಸಿ ಸಂಪಾದಕರು ಮತ್ತು ಲೇಖಕರಿಗೆ ಅವರು ಧನ್ಯವಾದ ಹೇಳಿದರು. ಇದು ಬಹಳ ವಿಶಿಷ್ಟವಾದ ಕೃತಿ ಮತ್ತು ದೇಶದ ಮಹಿಳಾ ಚಳುವಳಿಗೆ ಅದು ಮಹತ್ತರ ಕೊಡುಗೆ ನೀಡಿದೆ ಎಂಬುದನ್ನು ಅವರು ಗುರುತಿಸಿ ಪ್ರಶಂಸಿದರು. ತಮ್ಮ ಜೀವನದ ವಿವಿಧ ಹೋರಾಟಗಳಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರು ತಮ್ಮ ಹೋರಾಟಗಳನ್ನು ಸಂಯೋಜಿಸಿಕೊಂಡು ಮುಂದುವರೆಯಲು ಸಹಾಯ ಮಾಡಲಿದೆ ಎಂದು ಅವರು ಹೇಳಿದರು.

ಬೃಂದಾ ಅವರ ಮಾತಿನ ನಂತರ ಪುಸ್ತಕದ ಸಂಪಾದಕರಲ್ಲಿ ಒಬ್ಬರಾದ ಶ್ರುತಿ ನಾಗಭೂಷಣ ಪುಸ್ತಕದ ಸ್ಥೂಲ ಪರಿಚಯ ನೀಡಿದರು. ಪುಸ್ತಕದಲ್ಲಿ 17 ಅಧ್ಯಾಯಗಳಿದ್ದು ಅವುಗಳನ್ನು ಆರು ಪ್ರಮುಖ ವಿಷಯಧಾರಿತ ವಿಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಅವರು ಹೇಳಿದರು. ಆರು ವಿಷಯಗಳು ಹೀಗಿವೆ : 1. ಮಹಿಳೆಯರ ಕೆಲಸದ ಅರ್ಥೈಸುವಿಕೆಯಲ್ಲಿ ಪರಿಕಲ್ಪನೆ, ಸಿದ್ಧಾಂತ ಮತ್ತು ವಿಧಾನದ ಸಮಸ್ಯೆಗಳು 2. ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಮಹಿಳೆಯರ ಕೆಲಸ 3. ವರ್ಗ ಮತ್ತು ಜಾತಿಯ ಸಮಸ್ಯೆಗಳು 4. ಕೃಷಿಯೇತರ ಕ್ಷೇತ್ರಗಳಲ್ಲಿ ಮಹಿಳೆಯರ ಕೆಲಸ 5. ಮಹಿಳೆಯರ ಕೂಲಿ ಮತ್ತು



ಆದಾಯ 6. ಮಹಿಳಾ ಸ್ವ-ಉದ್ಯೋಗಕ್ಕೆ ಹಣಕಾಸಿನ ದೊರೆಯುವಿಕೆ

ನಂತರ ನಡೆದ ಸಂವಾದದಲ್ಲಿ ಸಿಐಟಿಯು ಅಧ್ಯಕ್ಷರಾದ ಡಾ. ಕೆ ಹೇಮಲತ, ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಲೆ, ಈ ಕ್ಷೇತ್ರದ ಪರಿಣತ ಅಕಾಡೆಮಿಕ್ ಸಂಶೋಧಕರಾದ ಮಧುರಾ ಸ್ವಾಮಿನಾಥನ್ (ಐ.ಎಸ್.ಐ), ಜೂಡಿತ್ ಹೇವರ್, ಪಲ್ಲವಿ ಚೌಹಾಣ್ ಮತ್ತು ಅಮಿತ್ ಬಸೊಲೆ ಭಾಗವಹಿಸಿದರು.

ಈ ಪುಸ್ತಕ ಬಿಡುಗಡೆಯ ಕಾರ್ಯಕ್ರಮದ ನಿರ್ವಹಣೆಯನ್ನು FAS ನಿರ್ದೇಶಕರಾದ ಸಂದೀಪನ್ ಬಕ್ಷಿ ನೆರವೇರಿಸಿದರು. ಮೊದಲಿಗೆ ಪ್ರತಿಷ್ಠಾನದ ಒಬ್ಬ ಟ್ರಸ್ಟಿ, ಪುಸ್ತಕದ ಸಂಪಾದಕರಲ್ಲಿ ಒಬ್ಬರು, ಪ್ರತಿಷ್ಠಾನದ ಕೃಷಿ ಅಧ್ಯಯನ ಸರಣಿಯ ಪ್ರಧಾನ ಸಂಪಾದಕ ಮತ್ತು ಈಗ ಕೇರಳ ಯೋಜನಾ ಮಂಡಳಿಯ ಉಪಾಧ್ಯಕ್ಷರು ಆಗಿರುವ ವಿ.ಕೆ.ರಾಮಚಂದ್ರನ್ ಅವರು ಪ್ರಾಸ್ತಾವಿಕವಾಗಿ ಪ್ರತಿಷ್ಠಾನದ ಕೆಲಸ, ಪ್ರಕಟಣೆಗಳು, ಈ ಪುಸ್ತಕದ ಕುರಿತು ಮಾತನಾಡಿದರು. ●

ಕೆಪಿಆರ್‌ಎಸ್ ನಿಂದ ಮನೆ, ನಿವೇಶನ ನೀಡಲು ಆಗ್ರಹಿಸಿ ಧರಣಿ



ಮುದಗಲ್: ಪಟ್ಟಣದ ಕೆಪಿಆರ್ ಎಸ್ ಮುದಗಲ್ ಘಟಕದಿಂದ ಮನೆ ಮತ್ತು ನಿವೇಶನ ಮಂಜೂರುಗಾಗಿ ಪುರಸಭೆ ಮುಖ್ಯಾಧಿಕಾರಿ ನರಸಿಂಹಮೂರ್ತಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿಲಾಯಿತು.

ಪಟ್ಟಣದಲ್ಲಿ ವಾಸಿಸುವ ಅನೇಕರಿಗೆ ನಿವೇಶನ ಮತ್ತು ಮನೆಗಳು ಇರುವುದಿಲ್ಲ. ಇವರಿಗೆ ಬೆಳೆದು ತಿನ್ನಲು ಸಹ ಒಂದಿಷ್ಟು ಭೂಮಿಯೂ ಇಲ್ಲ. ಇಂತಹ ಕುಟುಂಬಗಳಿಗೆ ಕನಿಷ್ಠ ಒಂದು ಮನೆ ಅಥವಾ ನಿವೇಶನ ಕಲ್ಪಿಸ ಕೊಡಬೇಕಾಗಿರುವುದು ಸ್ಥಳೀಯ ಆಡಳಿತದ ಮುಖ್ಯ ಜವಾಬ್ದಾರಿ ವಾಗಿದೆ. ಆದರೆ ಇಲ್ಲಿಯವರೆಗೂ ಎಷ್ಟು ಬಾರಿ ಮನೆ ಮತ್ತು ನಿವೇಶನಕ್ಕಾಗಿ ಪುರಸಭೆ ಗೆ ಅರ್ಜಿ ಸಲ್ಲಿಸಿದ್ದರು ಕೂಡ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನೆಕಾರರು ದೂರಿದರು. ಈ ಮನೆ ನಿವೇಶನಕ್ಕಾಗಿ ಅನೇಕ ದಿನಗಳಿಂದ ಹೋರಾಟ ಮಾಡುತ್ತಿದ್ದೇವೆ ಆದರೆ ಯಾರಿಗೂ ಇಲ್ಲಿಯವರೆಗೂ ಒಂದು ಮನೆ, ನಿವೇಶನ ನೀಡಿಲ್ಲ. ಅದರಿಂದ ಮುದಗಲ್ ಪಟ್ಟಣಕ್ಕೆ ಹೊಂದಿಕೊಂಡಿರುವ ಸರ್ವೆ ನಂಬರ್ 451ರಲ್ಲಿ ಗೈರಾಣಿ ಭೂಮಿ ಇದ್ದು. ಅಲ್ಲಿಯೊ ಅರ್ಜಿ ಹಾಕಿದ ನಿರ್ಗತಿಕರಿಗೆ ಪುರಸಭೆ ಆಡಳಿತ ಕೂಡಲೇ ಮನೆ, ನಿವೇಶನ ಮಂಜೂರು ಮಾಡಬೇಕು. ಒಂದು ವೇಳೆ ನಿರ್ಲಕ್ಷ್ಯ ಮಾಡಿದರೆ ಕರ್ನಾಟಕ ಪ್ರಾಂತ ರೈತ ಸಂಘಟನೆ ನೇತೃತ್ವದಲ್ಲಿ ಸುಮಾರು 200 ಅರ್ಜಿದಾರರು ಎಲ್ಲಾರು ಸೇರಿ ಸರ್ವೆ ನಂಬರ್ 451ರಲ್ಲಿ ಜೋಪಡಿ ಹಾಕುತ್ತೇವೆ ಎಂದು ಪ್ರತಿಭಟನೆ ಕಾರರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಕೆ.ಜಿ. ವೀರೇಶ್, ಎಸ್ಎಫ್ಐ ಜಿಲ್ಲಾಧ್ಯಕ್ಷ ರಮೇಶ ವೀರಾಪೂರು, ಕೆಪಿಆರ್ ಎಸ್ ತಾಲೂಕಾಧ್ಯಕ್ಷ ಮಾನಪ್ಪ ಲೆಕ್ಕಿಹಾಳ, ಮುದಗಲ್ ಹೋಬಳಿ ಘಟದ ಅಧ್ಯಕ್ಷ ಸದ್ದಾಂ ಹುಸೇನ್, ಮಸ್ಕಿ ತಾಲೂಕು ಕಾರ್ಯದರ್ಶಿ ಹನುಮಂತಪ್ಪ ಬಲದಂಡಿ, ಹೋಬಳಿ ಘಟಕದ ಉಪಾಧ್ಯಕ್ಷ ಮಹಮ್ಮದ್ ಅಲಿ ಮಟ್ಟೂರು, ಜುಲ್ಲೇಕಾ ಬೇಗಂ, ಹನುಮಂತ ತಾವರಗೇರಿ ಮಟ್ಟೂರು, ಹನುಮಮ್ಮ, ಚಾಂದ್ ಪಾಷಾ, ಮುತ್ತಮ್ಮ ಕಟ್ಟಿಮನಿ, ಹನುಮಂತ ಕಟ್ಟಿಮನಿ, ಕರಿಯಪ್ಪ, ಭದ್ರಯ್ಯಸ್ವಾಮಿ ಕನ್ನಾಪೂರು ಸೇರಿದಂತೆ ಇನ್ನಿತರರು ಇದ್ದರು. ●

ಶತಮಾನೋತ್ಸವ ಲೇಖನಮಾಲೆ-43

ಪಂಜಾಬ್‌ನಲ್ಲಿ ಅಭಿವೃದ್ಧಿ ಕಂದಾಯ ವಿರೋಧಿ ಹೋರಾಟ

ಹೋರಾಟದ ಉದ್ದಕ್ಕೂ, ಸತ್ಯಾಗ್ರಹದಲ್ಲಿ 19,000 ಸ್ವಯಂಸೇವಕರು ಪಾಲ್ಗೊಂಡರು, 10,000 ಜನರು ಜೈಲಿಗೆ ಹೋದರು, 3,000 ಸ್ವಯಂಸೇವಕರು ಪೋಲಿಸರ ಕ್ರೂರ ಹೊಡೆತಕ್ಕೆ ಸಿಲುಕಿದರು ಮತ್ತು ಇನ್ನೂ ನೂರಾರು ಜನರು ಪೋಲಿಸ್ ಠಾಣೆಗಳಲ್ಲಿ ಹಿಂಸೆಗೆ ಒಳಗಾದರು. ಮೂರು ಮಹಿಳೆಯರನ್ನೂ ಒಳಗೊಂಡಂತೆ ಎಂಟು ಸಂಗಾತಿಗಳು ಪೋಲಿಸರ ಗುಂಡಿಗೆ ಬಲಿಯಾದರು; ಈ ಚಳುವಳಿಯು ರಾಜಾಸ್ತಾನ ಮತ್ತು ಬಿಹಾರ್‌ಗಳಂತಹ ರಾಜ್ಯಗಳ ಮೇಲೂ ಗಮನಾರ್ಹ ಪರಿಣಾಮ ಬೀರಿತು. ಕೆಲವು ದೂರದ ಪ್ರದೇಶಗಳಲ್ಲಿನ ಹಳ್ಳಿಗಳನ್ನು ಹೊರತುಪಡಿಸಿದರೆ ಬೇರೆಲ್ಲೂ ಅಭಿವೃದ್ಧಿ ಕಂದಾಯವನ್ನು ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ರೈತಾಪಿ ಜನಗಳಲ್ಲಿ, ಹಿಂದೂ–ಸಿಖ್ ಸಮುದಾಯಗಳ ನಡುವೆ, ಗ್ರಾಮೀಣ ಮತ್ತು ಪಟ್ಟಣವಾಸಿಗಳ ನಡುವೆ ಒಡಕುಂಟುಮಾಡಲು ಪ್ರಯತ್ನಿಸಿದವರೆಲ್ಲರಿಗೂ ಈ ಚಳುವಳಿಯಿಂದಾಗಿ ದೊಡ್ಡ ಹಿನ್ನಡೆಯಾಯಿತು, ಮತ್ತು ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾ ಹೊಸ ಪ್ರದೇಶಗಳಿಗೆ ವಿಸ್ತರಿಸಿ ಕಾಂಗ್ರೆಸ್ ಪಕ್ಷ ಮತ್ತು ಅದರ ನೀತಿಗಳಿಗೆ ಒಂದು ಬಲಿಷ್ಠ ವಿರೋಧ ಶಕ್ತಿಯಾಗಿ ಹೊರಹೊಮ್ಮಿದವು.

ಕನ್ನಡಕ್ಕೆ: **ಟಿ.ಸುರೇಂದ್ರ ರಾವ್**

ಅಭಿವೃದ್ಧಿ ಕಂದಾಯ ವಿರೋಧಿಸಿ ಪಂಜಾಬಿನ ರೈತರು 1959ರಲ್ಲಿ ನಡೆಸಿದ ಧೀರೋದಾತ್ತ ಹೋರಾಟವು ಭಾರತೀಯ ಕಿಸಾನ್ ಚಳುವಳಿಯ ಇತಿಹಾಸಕ್ಕೆ ಒಂದು ಭವ್ಯ ಅಧ್ಯಾಯವನ್ನು ಸೇರಿಸಿದೆ. ಐತಿಹಾಸಿಕ ತೆಲಂಗಾಣ ರೈತ ಹೋರಾಟದ ನಂತರ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅತ್ಯಂತ ದೊಡ್ಡ ರೈತ ಹೋರಾಟ ಇದಾಗಿದೆ. ವಿಶಾಲ ತಳಹದಿಯ ರೈತರ ಐಕ್ಯತೆಯನ್ನು ಸಾಧಿಸಲು ಸಾಧ್ಯವಾದ ಈ ಹೋರಾಟವು ಅವರವರ ರಾಜಕೀಯ ನಂಟಿನ ಹೊರತಾಗಿಯೂ ಕೃಷಿ ಕೂಲಿಕಾರರ ಹಾಗೂ ಇತರೆ ಜನವಿಭಾಗಗಳ ವ್ಯಾಪಕ ಬೆಂಬಲವನ್ನು ಪಡೆಯಿತು.

ಪಂಜಾಬಿನ ರೈತರ ಈ ಶಾಂತಿಯುತ ಹೋರಾಟವು ರೈತರು ಮತ್ತು ಕೃಷಿಕೂಲಿಕಾರರಲ್ಲಿ ಮಡುಗಟ್ಟಿದ್ದ ಅತೃಪ್ತಿಯ ಅಭಿವ್ಯಕ್ತಿಯಾಗಿತ್ತು. ಕಾರ್ಷಿಕ ಬಿಕ್ಕಟ್ಟಿನ ಹೊರೆಯನ್ನು ರೈತರ ಮೇಲೆ ಹೊರಿಸುವ ಗುರಿ ಹೊಂದಿದ್ದ ಸರ್ಕಾರದ ಜನ–ವಿರೋಧಿ ನೀತಿಗಳ ಪರಿಣಾಮವಾಗಿ ಇನ್ನೂ ಆಳಕ್ಕೆ ಕುಸಿಯುತ್ತಿದ್ದ ಕಾರ್ಷಿಕ ಬಿಕ್ಕಟ್ಟಿನ ವಿರುದ್ಧ ರೈತರ ಆಕ್ರೋಶದ ಅಭಿವ್ಯಕ್ತಿಯೂ ಅದಾಗಿತ್ತು. ಅಭಿವೃದ್ಧಿ ಕಂದಾಯ ವಿರೋಧಿ ಹೋರಾಟದ ಮೂಲಕ ಆ ಅತೃಪ್ತಿಯು ತನ್ನ ಅಭಿವ್ಯಕ್ತಿಯನ್ನು ಪಡೆದಿದ್ದಾಗಿದ್ದಾಗ್ಯೂ, ಸ್ವಾತಂತ್ರ್ಯಾನಂತರ ಅನುಸರಿಸಿದ ಜನ–ವಿರೋಧಿ ನೀತಿಗಳ ಒಟ್ಟುಗೂಡಿದ ಫಲದಿಂದಾಗಿ ಅದು ಎದ್ದು ಬಂದಿತು.

ಸ್ವಾತಂತ್ರ್ಯದ ನಂತರ, ಪಂಜಾಬಿನ ಜನರ ಮೇಲಿನ ತೆರಿಗೆಯ ಹೊರೆ ಪ್ರತಿಯೊಬ್ಬರ ತಲೆಯ ಮೇಲೆ ರೂ.14 ರಿಂದ ರೂ.25 ಕ್ಕೆ ಹೆಚ್ಚಾಯಿತು. ಋಣಭಾರ ತ್ವರಿತವಾಗಿ ಹೆಚ್ಚಾಯಿತು. ಇದೂ ಸಾಲದೆಂಬಂತೆ, ನಿರುದ್ಯೋಗ ಹೆಚ್ಚಾಯಿತು; ಲಕ್ಷಾಂತರ ಗೇಣಿದಾರರು ಅವರ ಜಮೀನುಗಳಿಂದ ಒಕ್ಕಲೆಬ್ಬಿಸಲ್ಪಟ್ಟರು ಮತ್ತು ಅನಿವಾರ್ಯವಾಗಿ ಕೃಷಿಕಾರ್ಮಿಕರಾಗಿ ಮಾರ್ಪಾಟಾದರು. ಪಂಜಾಬಿನ ರೈತರು ಮಾರುಕಟ್ಟೆ ಶಕ್ತಿಗಳಿಂದಲೂ ಸುಲಿಗೆಗೆ ಒಳಗಾದರು.

1952ರಲ್ಲಿ, ಭಾಕ್ರಾ ನಂಗಲ್ ಕಾಲುವೆ ಪೂರ್ಣವಾಗುವುದಕ್ಕೆ ಮುಂಚೆಯೇ, ಪಂಜಾಬ್ ಸರ್ಕಾರವು ಒಂದು ಶಾಸನವನ್ನು ತಂದು ಇಡೀ ಕಾಲುವೆ ವ್ಯವಸ್ಥೆಯ ವೆಚ್ಚವನ್ನು ಈ ಅಭಿವೃದ್ಧಿ ಕಂದಾಯ(ಬೆಟರ್‌ಮೆಂಟ್ ಲೆವಿ)ದಿಂದಲೇ ಭರಿಸಬೇಕೆಂಬ ಉದ್ದೇಶದಿಂದ ಇದನ್ನು ವಿಧಿಸಿತು. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾವು ಆರಂಭದಿಂದಲೇ ಈ ಶಾಸನವನ್ನು ವಿರೋಧಿಸಿದವು. ಈ ಕಂದಾಯದ ಹೇರಿಕೆಯಿಂದ ರೈತರಿಗೆ ಕೃಷಿಯಲ್ಲಿ ತೊಡಗಿಸಲು ಏನೇನೂ ಉಳಿಯುವುದಿಲ್ಲ ಮತ್ತು ಬಡವರಂತೂ ಇದರಿಂದ ತಮ್ಮ ಜಮೀನುಗಳನ್ನು ಮಾರಬೇಕಾಗುತ್ತದೆ ಎಂದು ಅವರು ವಾದ ಮಾಡಿದರು. ಆದರೆ ಕಾಂಗ್ರೆಸ್ ಸರ್ಕಾರವು ಆ ವಾದವನ್ನು ತಿರಸ್ಕರಿಸಿತು ಮತ್ತು ಬದಲಿಗೆ ಜನವರಿ 1959ರಲ್ಲಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಅಭಿವೃದ್ಧಿ ಕಂದಾಯವನ್ನು ಮುಂಗಡ ಹಣವಾಗಿ ಪಡೆಯಬೇಕೆಂದು ಸರ್ಕಾರ ಬಯಸಿತು. ಸರ್ಕಾರದ ಈ ಪ್ರಚೋದನಕಾರಿ ಕ್ರಮದಿಂದ ಬೆಂಕಿಗೆ ತುಪ್ಪ ಸುರಿದಂತಾಯಿತು.

1957ರ ಕೊನೆಯಲ್ಲಿ ಮತ್ತು 1958ರ ಆರಂಭದಲ್ಲಿ, ಯಾವಾಗ ಕಂದಾಯದ ಅಂದಾಜು ನೋಟೀಸುಗಳು ಬಂದವೋ, ರಾಜ್ಯದ ಇಡೀ ರೈತಾಪಿ ಜನ ಕೆಂಡಾಮಂಡಲವಾದರು. ಸಾಮೂಹಿಕ ಮನವಿಗಳು, ಸಹಿ ಸಂಗ್ರಹ ಆಂದೋಲನ, ಸಮಾವೇಶಗಳು, ಸಮ್ಮೇಳನಗಳು ಹಾಗೂ ಮತಪ್ರದರ್ಶನಗಳ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. 11,000 ರೈತರು ವೈಯಕ್ತಿಕವಾಗಿ ಕಂದಾಯ ನೋಟೀಸುಗಳ ವಿರುದ್ಧ ಕಾನೂನು ಆಕ್ಷೇಪಣೆ ಸಲ್ಲಿಸಿದರು. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾ ಫೆಬ್ರವರಿ 1958ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿದವು. ಎಲ್ಲಾ ಪಕ್ಷಗಳ ಸಮಾವೇಶವೊಂದನ್ನು ಚಂಡೀಘಡದಲ್ಲಿ ನಡೆಸಿ ಜಂಟೀ ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಯು ರಾಜ್ಯ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿತು. 1958ರ ಸೆಪ್ಟೆಂಬರ್‌ನಲ್ಲಿ, ಒಂದು ಲಕ್ಷಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದ ರೈತರ ಸಾಮೂಹಿಕ ಮತಪ್ರದರ್ಶನವನ್ನು ರಾಜ್ಯಾದ್ಯಂತ ನಡೆಸಲಾಯಿತು. ಕಿಸಾನ್ ಸಭಾವು ಸರ್ಕಾರದ ವಾದವನ್ನು ಪ್ರಶ್ನಿಸದೆ ಹಾಗೇ ಬಿಟ್ಟುಬಿಡಲಿಲ್ಲ. ತನ್ನ ವಾಗ್ವಾದಗಳ ಮೂಲಕ ರಾಜ್ಯದ ಎಲ್ಲಾ ಪ್ರಜಾಸತ್ತಾತ್ಮಕ ಮನಸ್ಸುಗಳ ಬೆಂಬಲವನ್ನು ಪಡೆಯಿತು.

ಕಿಸಾನ್ ಸಭಾವು ಹಲವಾರು ಮಟ್ಟದಲ್ಲಿ ಕಾರ್ಯಾಚರಣೆ ಸಮಿತಿಗಳನ್ನು ರಚಿಸಿತು ಮತ್ತು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಸ್ವಯಂಸೇವಕರನ್ನು ಆಯ್ಕೆ ಮಾಡಿಕೊಂಡಿತು. ಅದಕ್ಕೆ ಅಪಾರ ಸ್ಪಂದನೆ ದೊರಕಿತು. ಜನವರಿ ಮೂರನೇ ವಾರದ ಹೊತ್ತಿಗೆ, 10,000ಕ್ಕೂ ಹೆಚ್ಚು ಸ್ವಯಂಸೇವಕರು ನೋಂದಾಯಿಸಿಕೊಂಡರು, ಇವರು ಯಾವುದೇ ತ್ಯಾಗಕ್ಕೂ ಸಿದ್ಧರಾಗಿದ್ದರು. ರಾಜ್ಯ ಮಟ್ಟದ ಒಂದು ಕಾಯಾಚರಣೆ ಸಮಿತಿಯನ್ನು ರಚಿಸಲಾಯಿತು, ಅದು ಭೂಗತವಾಗಿ ಕೆಲಸ ಮಾಡಿತು.

ಜನವರಿ 1959ರಲ್ಲಿ, ಪಂಜಾಬಿನ ಆಹಾರ ಪರಿಸ್ಥಿತಿ ಹದಗೆಟ್ಟಿತು. 1958ರಲ್ಲಿ, ರೈತರು ತಮ್ಮ ಗೋಧಿ ಬೆಳೆಯನ್ನು ಕ್ವಿಂಟಾಲಿಗೆ ರೂ.34 ಕ್ಕೆ ಮಾರಾಟ ಮಾಡಬೇಕಾದ ಒತ್ತಡಕ್ಕೆ ಒಳಗಾದರು, ಆದರೆ ಕೇವಲ ಆರೇಳು ತಿಂಗಳೊಳಗೆ ಕೃಷಿ ಕೂಲಿಕಾರರು ಮತ್ತು ಬಡ ರೈತರು ಅದೇ ಗೋಧಿಯನ್ನು ಅದರ ದುಪ್ಪಟ್ಟು ಬೆಲೆಗೆ ಕೊಳ್ಳಬೇಕಾಯಿತು. ಸರ್ಕಾರ ಇತ್ತ ಆಹಾರ ದಾಸ್ತಾನನ್ನೂ ಮಾಡಲಿಲ್ಲ, ಅತ್ತ ಸರಿಯಾದ ಆಹಾರ ವಿತರಣೆ ವ್ಯವಸ್ಥೆಯನ್ನೂ ಸಂಘಟಿಸಲಿಲ್ಲ. ಆಹಾರ ಧಾನ್ಯಗಳಿಗೆ ಸರ್ಕಾರ ಪ್ರಕಟಿಸಿದ ದರವು ಕಾಗದದ ಮೇಲಷ್ಟೆ ಇತ್ತು. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾವು ಚಳುವಳಿ ಪ್ರಾರಂಭಿಸಲು ಕಾಳಜಿ ವಹಿಸಿ ಜನತಾ ಆಹಾರ ಸಮಿತಿಗಳನ್ನು ರಚಿಸಿದವು. ಸಾವಿರಾರು ಕೃಷಿ ಕೂಲಿಕಾರರನ್ನು, ಪಟ್ಟಣಗಳಲ್ಲಿರುವ ಕಾರ್ಮಿಕರು ಮತ್ತು ಬಡಜನರನ್ನು ಹಾಗೂ ಮಧ್ಯಮ ವರ್ಗದವರನ್ನೂ ಈ ಚಳುವಳಿಗಾಗಿ ಅಣಿನೆರೆಸಲಾಯಿತು. ಸರ್ಕಾರದ ಜನ–ವಿರೋಧಿ ಆಹಾರ ನೀತಿಯಿಂದಾಗಿ ರೈತರು ನಡೆಸುತ್ತಿದ್ದ ಅಭಿವೃದ್ಧಿ ಕಂದಾಯ ವಿರೋಧಿ ಹೋರಾಟಕ್ಕೆ ಕೃಷಿ ಕೂಲಿಕಾರರ ಮತ್ತು ಪಟ್ಟಣವಾಸಿಗಳ ಜನರ ಸಹಾನುಭೂತಿಯನ್ನು ಗಳಿಸಲು ಸಾಧ್ಯವಾಯಿತು.

ಜನವರಿ 21, 1959 ರಂದು ಯಾವಾಗ ರೈತರಿಗೆ ನೋಟೀಸುಗಳನ್ನು ನೀಡಿದರೋ, ಆಗ ಅಭಿವೃದ್ಧಿ ಕಂದಾಯ ವಿರೋಧಿ ಹೋರಾಟವು ನಾಲ್ಕು ಜಿಲ್ಲೆಗಳಲ್ಲಿ ಪ್ರಾರಂಭವಾದವು. ಎರಡು ವಾರಗಳ ನಂತರ, ಅದು ಇನ್ನೂ ನಾಲ್ಕು ಜಿಲ್ಲೆಗಳಿಗೆ ಹಬ್ಬಿತು, ನಂತರ ಬಾಧಿತ ಎಲ್ಲಾ ಒಂಭತ್ತು ಜಿಲ್ಲೆಗಳಿಗೂ ಹರಡಿತು ಮತ್ತು ಕಡಿಮೆ ಅವಧಿಯಲ್ಲಿಯೇ, ಅದು ಇಡೀ ರಾಜ್ಯದ ಗಮನವನ್ನು ಸೆಳೆಯಿತು. ಸತ್ಯಾಗ್ರಹಿಗಳನ್ನು ಸ್ವಾಗತಿಸಲು ಇಡೀ ಊರಿಗೆ ಊರೇ ಸೇರಿತು ಮತ್ತು ಅವರು ಊರಲ್ಲಿ ಜಾತಾ ಮಾಡುವಾಗ ಅವರ ಜತೆ ಸಾವಿರಾರು ಜನ ಸೇರಿಕೊಂಡರು. ರೈತರ ಗೋಳಿನ ಮತ್ತು ಹೋರಾಟದ ಸಮಯದಲ್ಲಿ ವ್ಯಕ್ತವಾದ ಕೆಚ್ಚೆದೆಯ ಕತೆಗಳ ಬಗ್ಗೆ ಬಾಲಕರು ಮತ್ತು ಬಾಲಕಿಯರು ಹೊಸ ಹೊಸ ಹಾಡುಗಳನ್ನು ಕಟ್ಟಿ ಹಾಡುವ ಮೂಲಕ ಒಂದು ಹೊಸ ಸಾಂಸ್ಕೃತಿಕ ಪುನರ್‌ಜಾಗೃತಿಯನ್ನೇ ಉಂಟುಮಾಡಿದರು.

ಬಡ ಹಾಗೂ ಮಧ್ಯಮ ರೈತರು ಆರಂಭದಲ್ಲೇ ಚಳುವಳಿಯಲ್ಲಿ ಭಾಗವಹಿಸಿದ್ದರೆ, ಶ್ರೀಮಂತ ರೈತರು ಮುಂದಿನ ಹಂತದಲ್ಲಿ ಸೇರಿಕೊಂಡರು. ಅಭಿವೃದ್ಧಿ ಕಂದಾಯದಿಂದ ಕೃಷಿಕಾರ್ಮಿಕರು ಬಾಧಿತರಾಗದಿದ್ದಾಗಲೂ, ಸಹಾನುಭೂತಿ ವ್ಯಕ್ತಪಡಿಸಲು ಬಂಧನಕ್ಕೆ ಒಳಗಾದರು. ಆಹಾರ ಚಳುವಳಿಗೆ ಮತ್ತು ಕೂಲಿ ಹೆಚ್ಚಳ ಹಾಗೂ ಭೂ ವಿತರಣೆಯ ಬೇಡಿಕೆಗಳಿಗೆ ಕಿಸಾನ್ ಸಭಾ ನೀಡಿದ ಬೆಂಬಲವು ಇದಕ್ಕೆ ಕೊಡುಗೆ ನೀಡಿತು. ನೂರಾರು ಕಂದಾಯ ಸಂಗ್ರಹಗಾರರು, ಪಂಚರು ಮತ್ತು ಸರಪಂಚರು ಈ ಚಳುವಳಿಯಲ್ಲಿ ಭಾಗವಹಿಸಿದರು. ಅಭಿವೃದ್ಧಿ ಕಂದಾಯದ ಸಂಗ್ರಹಕ್ಕಾಗಿ ನೀಡಿದ್ದ ಚೀಟಿಗಳನ್ನು ಕಂದಾಯ ಸಂಗ್ರಹಕಾರರು ಹರಿದು ಹಾಕಿದರು. ಈ ಚಳುವಳಿಯ ಅವಧಿಯಲ್ಲಿ ಎರಡು ತಿಂಗಳ ಕಾಲ ಸಚಿವರು ಮತ್ತು ಕಾಂಗ್ರೆಸ್ ಮುಖಂಡರು ಹಳ್ಳಿಗಳಲ್ಲಿ ಸಭೆ ಮಾಡುವುದಕ್ಕಾಗಲೀ ಅಥವಾ ಹಳ್ಳಿಗಳಿಗೆ ಪ್ರವೇಶ ಮಾಡಲಿಕ್ಕಾಗಲೀ ಸಾಧ್ಯವಾಗಲಿಲ್ಲ. ಹಳ್ಳಿಗಳಲ್ಲಿದ್ದ ಎಲ್ಲಾ ಪಕ್ಷಗಳೂ ಕಿಸಾನ್ ಸಭಾ ನೇತೃತ್ವದ ಚಳುವಳಿಯನ್ನು ಬೆಂಬಲಿಸಿದರು. ಫೆಬ್ರವರಿ ಕೊನೆಯ ಹೊತ್ತಿಗೆ, ಇಡೀ ರಾಜ್ಯದ ವಾತಾವರಣದಲ್ಲಿ ವಿದ್ಯುತ್ ಸಂಚಾರವಾದಂತಾಗಿತ್ತು ಮತ್ತು ಅಭಿವೃದ್ಧಿ ಕಂದಾಯ ವಿರೋಧಿ ಹೋರಾಟವು ಇಡೀ ರಾಜ್ಯದ ಜನರ ಗಮನವನ್ನು ಸೆಳೆದಿತ್ತು.

ಲಕ್ಷಾಂತರ ರೈತರು ನಾನಾ ಸ್ವರೂಪಗಳಲ್ಲಿ ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರು ಮತಪ್ರದರ್ಶನಗಳಲ್ಲಿ, ಹಳ್ಳಿಗಳ ಪ್ರಭಾತ ಫೇರಿಗಳಲ್ಲಿ, ಸತ್ಯಾಗ್ರಹಿಗಳನ್ನು ಸ್ವಾಗತಿಸುವಲ್ಲಿ, ಸತ್ಯಾಗ್ರಹಿಗಳ ಮೇಲೆ ದಂಡ ವಿಧಿಸಿ ವಸೂಲಿ ಮಾಡುವುದರ ವಿರುದ್ಧದ ಹೋರಾಟದಲ್ಲಿ, ಮನೆ ಮನೆಗಳಿಗೆ ಹೋರಾಟದ ಸಂದೇಶವನ್ನು ಕೊಂಡೊಯ್ಯುವಲ್ಲಿ ಮತ್ತು ಸರ್ಕಾರದ ದಬ್ಬಾಳಿಕೆಗಳ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿದ್ದರು. ಸರ್ಕಾರವು ಸಂಪೂರ್ಣವಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕಾದ ಸ್ಥಿತಿ ತಲುಪಿತ್ತು. ಅದು ರೈತರಲ್ಲಿ ಒಡಕುಂಟುಮಾಡಲು ಪ್ರಯತ್ನಿಸಿತ್ತು.

ರಿಯಾಯಿತಿಗಳು ಮತ್ತು ಭರವಸೆಗಳ ಆಧಾರದಲ್ಲಿ ಹೋರಾಟವನ್ನು ದುರ್ಬಲಗೊಳಿಸುವ ಕಾಂಗ್ರೆಸ್ಸಿನ ಪ್ರಚಾರವು ವಿಫಲವಾದಾಗ, ಸರ್ಕಾರವು ಕ್ರೂರ ದಬ್ಬಾಳಿಕೆಗೆ ಇಳಿಯಿತು. ಎಲ್ಲಾ ಕಿಸಾನ್ ಸಭಾ ಹಾಗೂ ಕಮ್ಯುನಿಸ್ಟ್ ಕಾರ್ಯಕರ್ತರ ವಿರುದ್ಧ ವಾರಂಟುಗಳನ್ನು ನೀಡಿತು, ಆದರೆ ಅವರನ್ನು ಬಂಧಿಸಲಾಗಲಿಲ್ಲ. ಈ ವೈಫಲ್ಯದಿಂದ ಕೋಪಾವಿಸ್ಟರಾಗಿ ಗ್ರಾಮಸ್ಥರನ್ನು ಗುರಿಯಾಗಿಟ್ಟುಕೊಂಡು ಮಶೀನ್ ಗನ್ನುಗಳ ಸಮೇತ ಜನರ ತಿರುಗಾಟವನ್ನು ನಿರ್ಬಂಧಿಸುವ ಸಲುವಾಗಿ ಸಶಸ್ತ್ರ ಪೋಲಿಸರು ಅನೇಕ ಹಳ್ಳಿಗಳನ್ನು ವಶಪಡಿಸಿಕೊಂಡರು ಮತ್ತು ಇಡೀ ಹಳ್ಳಿಗಳನ್ನು ಲೂಟಿ ಮಾಡಿ ಸತ್ಯಾಗ್ರಹಿಗಳ ಮೇಲೆ ವಿಧಿಸಿದ ದಂಡ ವಸೂಲಿಗಾಗಿ ಹಳ್ಳಿಯವರ ಸಾಮಾನುಗಳನ್ನು ಹರಾಜು ಹಾಕಿದರು. ರೈತರು ಮತ್ತು ಸತ್ಯಾಗ್ರಹಿಗಳನ್ನು ಪೋಲಿಸ್ ಠಾಣೆಗೆ ಎಳೆದೊಯ್ದರು ಮತ್ತು ನಿರ್ದಯವಾಗಿ ಹೊಡೆದರು, ಸರ್ಕಾರಿ ಅಧಿಕಾರಿಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡರು, ನ್ಯಾಯಾಂಗ ಮತ್ತು ಕಾರ್ಯಾಂಗ ಆಳುವ ಪಕ್ಷದ ಕೈಗೊಂಬೆಗಳಾದವು. ಅವರ ಕಾರ್ಯಾಚರಣೆಗಳಿಗೆ ಯಾವುದೇ ಲಿಖಿತ ಆದೇಶಗಳಿರಲಿಲ್ಲ, ಸಿಬ್ಬಂದಿಗಳು ಅವರ ಮನಸ್ಸಿಗೆ ಬಂದಹಾಗೆ ನಡೆದುಕೊಂಡರು. ಲಾಠಿ ಚಾರ್ಜ್, ಟಿಯರ್ ಗ್ಯಾಸ್, ಗೋಲಿಬಾರ್ ಮತ್ತು ಲೂಟಿಗಳು ದಿನನಿತ್ಯದ ವಿದ್ಯಮಾನಗಳಾದವು. ಪೋಲಿಸರೊಂದಿಗಿನ ಕಾದಾಟದಲ್ಲಿ ಸುಳ್ಳು ಪ್ರಕರಣ ದಾಖಲಿಸಿ ನೂರಾರು ಪುರುಷರು ಮತ್ತು ಮಹಿಳೆಯರನ್ನು ಬಂಧಿಸಿದರು. ಪೋಲಿಸ್ ದಬ್ಬಾಳಿಕೆಯ ಹೆಚ್ಚು ಆಘಾತವನ್ನು ಜಲಂಧರ್ ಜಿಲ್ಲೆಯು ಎದುರಿಸಿತು. ಹಳ್ಳಿಗಳನ್ನು ಸುತ್ತುವರಿದಾಗ ಪೋಲಿಸರ ಸವಾಲನ್ನು ಸ್ವೀಕರಿಸಿದ ಮಹಿಳೆಯರು ಅವರನ್ನು ಹಿಮ್ಮೆಟ್ಟಿಸಿದರು. ಪೋಲಿಸ್ ದಬ್ಬಾಳಿಕೆಯ ಎದುರಿನಲ್ಲಿ ಮಹಿಳೆಯರು ಸಾಟಿಯಿಲ್ಲದ ಕಲಿತನವನ್ನು ತೋರಿದರು. ಅನೇಕ ಕಮ್ಯುನಿಸ್ಟರು ಮತ್ತು ಕಿಸಾನ್ ಸಭಾದವರನ್ನು ತಲೆಮರೆಸಿಕೊಂಡವರು ಎಂದು ಘೋಷಿಸಿ ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡರು.

ಕಿಸಾನ್ ಸಭಾದ ಕಛೇರಿ ಕಾರ್ಯನಿರ್ವಹಣೆಯನ್ನು ಅಸಾಧ್ಯವಾಗಿಸಿದರು. ಕಮ್ಯುನಿಸ್ಟ್ ಪಕ್ಷದ ದಿನಪತ್ರಿಕೆ 'ನವಾಂ ಜಮಾನಾ' ಪ್ರಕಟವಾಗದಂತೆ ನೋಡಿಕೊಂಡರು, ಏಕೆಂದರೆ ಅಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳನ್ನೆಲ್ಲಾ ಬಂಧಿಸಿ ಜೈಲಿಗೆ ಕಳಿಸಿದ್ದರು. ಜನರ ಮನೋಭಾವ ಹೇಗಿತ್ತೆಂದರೆ ಪಕ್ಷದ ಪತ್ರಿಕೆಯ ಸಿಬ್ಬಂದಿಗಳನ್ನು ಬಂಧಿಸಿದಾಗ, ಎರಡೇ ದಿನಗಳಲ್ಲಿ ಹಲವಾರು ಜನರು ಮುಂದೆ ಬಂದು ಪತ್ರಿಕೆಯನ್ನು ಮತ್ತೆ ಪ್ರಾರಂಭಿಸಿದರು.

ಸರ್ಕಾರದ ದಬ್ಬಾಳಿಕೆಯು ರಾಜ್ಯದ ಎಲ್ಲಾ ಜನರ ಕೋಪಕ್ಕೆ ಕಾರಣವಾಯಿತು ಮತ್ತು ಜನಚಳುವಳಿಯ ವಿರುದ್ಧದ ದಬ್ಬಾಳಿಕೆಯನ್ನು ಸರ್ಕಾರವು ಮುಂದುವರಿಸಲು ಸಾಧ್ಯವಾಗದಂತೆ ಮಾಡಿದರು. ಇಡೀ ಆಡಳಿತ ವ್ಯವಸ್ಥೆಯನ್ನೇ ನಿತ್ರಾಣಗೊಳಿಸಿದರು. ಸರ್ಕಾರವು ಗತ್ಯಂತರವಿಲ್ಲದೇ ಚಳುವಳಿಯ ಎದುರು ಶರಣಾಗಬೇಕಾಯಿತು. ಅಭಿವೃದ್ಧಿ ಕಂದಾಯವನ್ನು ಕಡಿಮೆ ಮಾಡಬೇಕೆಂಬ ಬೇಡಿಕೆಯನ್ನು ಹಾಗೂ ಕಿಸಾನ್ ಸಭಾದ ಇತರ ಬೇಡಿಕೆಗಳನ್ನೂ ಮುಖ್ಯ ಮಂತ್ರಿಗಳು ಒಪ್ಪಿಕೊಂಡರು. ಮಾರ್ಚ್ 22, 1959 ರಂದು ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.


ಹೋರಾಟದ ಉದ್ದಕ್ಕೂ, ಜಿಲ್ಲಾ ಕೋರ್ಟುಗಳ ಕೆಲಸಕ್ಕೆ ಅಡ್ಡಿಯುಂಟುಮಾಡಿದ ಸತ್ಯಾಗ್ರಹದಲ್ಲಿ 19,000 ಸ್ವಯಂಸೇವಕರು ಪಾಲ್ಗೊಂಡರು, 10,000 ಜನರು ಜೈಲಿಗೆ ಹೋದರು, 3,000 ಸ್ವಯಂಸೇವಕರು ಪೋಲಿಸರ ಕ್ರೂರ ಹೊಡೆತಕ್ಕೆ ಸಿಲುಕಿದರು ಮತ್ತು ಇನ್ನೂ ನೂರಾರು ಜನರು ಪೋಲಿಸ್ ಠಾಣೆಗಳಲ್ಲಿ ಹಿಂಸೆಗೆ ಒಳಗಾದರು. ಮೂರು ಮಹಿಳೆಯರನ್ನೂ ಒಳಗೊಂಡಂತೆ ಎಂಟು ಸಂಗಾತಿಗಳು ಪೋಲಿಸರ ಗುಂಡಿಗೆ ಹುತಾತ್ಮರಾದರು; ಒಬ್ಬರು ಪೋಲಿಸ್ ಕಿರುಕುಳದಿಂದ ಮಡಿದರೆ ಮತ್ತಿಬ್ಬರು ಜೈಲಿನಲ್ಲಿ ಕೊನೆಯುಸಿರೆಳೆದರು. ಚಳುವಳಿಯನ್ನು ಹಿಂತೆಗೆದುಕೊಂಡ ದಿನವೂ 250 ಸತ್ಯಾಗ್ರಹಿಗಳು ಚಂಡೀಗಢವನ್ನು ತಲುಪಿದ್ದರು ಮತ್ತು 3,000 ಕ್ಕೂ ಹೆಚ್ಚು ಜನರು ರಾಜ್ಯದ ಎಲ್ಲಾ ಜಿಲ್ಲಾ ಕೋರ್ಟುಗಳ ಮುಂದೆ ಧರಣಿ ನಡೆಸಲು ತೆರಳಿದ್ದರು.

ಈ ಚಳುವಳಿಯು ರಾಜಾಸ್ತಾನ ಮತ್ತು ಬಿಹಾರ್‌ಗಳಂತಹ ರಾಜ್ಯಗಳ ಮೇಲೂ ಗಮನಾರ್ಹ ಪರಿಣಾಮ ಬೀರಿತು. ಕೆಲವು ದೂರದ ಪ್ರದೇಶಗಳಲ್ಲಿನ ಹಳ್ಳಿಗಳನ್ನು ಹೊರತುಪಡಿಸಿದರೆ ಬೇರೆಲ್ಲೂ ಅಭಿವೃದ್ಧಿ ಕಂದಾಯವನ್ನು ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ರೈತರ ನಡುವೆ ಮತ್ತು ರೈತರು ಹಾಗೂ ಕೃಷಿ ಕೂಲಿಕಾರರ ನಡುವಿನ ಹಿಂದೂ ಮತ್ತು ಸಿಖ್ಖರ ಐಕ್ಯತೆಯನ್ನು ಬೆಸೆಯುವ ಮೂಲಕ ಕೋಮುವಾದಿ ಶಕ್ತಿಗಳಿಗೆ ಈ ಚಳುವಳಿಯು ದೊಡ್ಡ ಹೊಡೆತವನ್ನೇ ಕೊಟ್ಟಿತು. ಗ್ರಾಮೀಣ ಮತ್ತು ಪಟ್ಟಣವಾಸಿಗಳ ನಡುವೆ ಒಡಕುಂಟುಮಾಡಲು ಯತ್ನಿಸಿದವರಿಗೂ ಈ ಚಳುವಳಿಯಿಂದಾಗಿ ದೊಡ್ಡ ಹಿನ್ನಡೆಯಾಯಿತು, ಏಕೆಂದರೆ ರೈತರ ಬೇಡಿಕೆಗಳಿಗೆ ಪಟ್ಟಣಗಳ ಜನರೂ ಬೆಂಬಲ ನೀಡಿದರು. ಈ ಹೋರಾಟವು ಪಂಜಾಬ್ ಮತ್ತು ಈಗ ಬೇರೆಯಾಗಿರುವ ಹರ‍್ಯಾಣದ ಜನರ ನಡುವಿನ ಐಕ್ಯತೆಯನ್ನು ಬಲಪಡಿಸಿತು ಕೂಡ. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾ ಹೊಸ ಪ್ರದೇಶಗಳಿಗೆ ವಿಸ್ತರಿಸಿ ಕಾಂಗ್ರೆಸ್ ಪಕ್ಷ ಮತ್ತು ಅದರ ನೀತಿಗಳಿಗೆ ಒಂದು ಬಲಿಷ್ಠ ವಿರೋಧ ಶಕ್ತಿಯಾಗಿ ಹೊರಹೊಮ್ಮಿದವು. ■

ಮೋದಿ ದರ್ಬಾರಿನಲ್ಲಿ 6.2 ಕೋಟಿ ಹೆಚ್ಚು ಹಸಿದವರು

– ವಸಂತರಾಜ ಎನ್.ಕೆ.

ದೇಶದ ಆಹಾರ ಅಭದ್ರತೆಗಿಂತ ಅದರ ಸೂಚಕಗಳ ಪ್ರಕಟಣೆಯ ಕುರಿತು ತೀವ್ರ ಅಭದ್ರತೆ ಅನುಭವಿಸುವ ಸರಕಾರ, ಆಹಾರ ಭದ್ರತೆಯ ಕರಾರುವಾಕ್ಕಾದ ಸೂಚಕವಾದ PMSFI ಕಂಡು ಹಿಡಿಯುವ ಸಮೀಕ್ಷೆಯನ್ನು ನಡೆಸುವಂತೆ ಮಾಡುವುದು ಹೇಗೆ ಎಂಬುದು ಹಸಿದವರ ಮತ್ತು ಅವರ ಕುರಿತು ಕಾಳಜಿ ಇರುವವರ ಮುಂದಿರುವ ಯಕ್ಷಪ್ರಶ್ನೆ.



ಮೊದಲ ಮೋದಿ ಸರಕಾರದ ಆಡಳಿತದ ಅವಧಿಯಲ್ಲಿ 6.2 ಕೋಟಿ ಹೆಚ್ಚು ಜನ ಆಹಾರ ಅಭದ್ರತೆಯತ್ತ ತಳ್ಳಲ್ಪಟ್ಟಿದ್ದಾರೆ, ಅಂದರೆ ಹಸಿದವರ ಸಂಖ್ಯೆ ಅಷ್ಟು ಹೆಚ್ಚಾಗಿದೆ. ಭಾರತದಲ್ಲಿ 2019ರಲ್ಲಿ ಆಹಾರ ಅಭದ್ರತೆಯಲ್ಲಿರುವವರ ಸಂಖ್ಯೆ 2014ರಲ್ಲಿ ಇದ್ದಿದ್ದಕ್ಕಿಂತ ಸಂಖ್ಯೆ ಶೇ. 3.8ರಷ್ಟು ಹೆಚ್ಚಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಹಸಿದವರು (ಆಹಾರ ಅಭದ್ರತೆ ಇರುವವರು) ಇರುವ ದೇಶ ನಮ್ಮದು. 'ಜಾಗತಿಕ ಆಹಾರ ಮತ್ತು ಪೌಷ್ಟಿಕಾಂಶಗಳ ಅಭದ್ರತೆಯ ಪರಿಸ್ಥಿತಿಯ ವರದಿ' (SOFI - State of Food Insecurity) ಯಲ್ಲಿ ಈ ಅಂಕೆಸಂಖ್ಯೆಯನ್ನು ಕೊಡಲಾಗಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ (FAO) ಈ SOFI ವರದಿಯನ್ನು ಪ್ರತಿ ವರ್ಷ ಪ್ರಕಟಿಸುತ್ತದೆ. FAO ಪ್ರತಿ ವರ್ಷ ಪ್ರಕಟಿಸುತ್ತಿರುವ SOFI ವರದಿ ಹಸಿವು ಮತ್ತು ಆಹಾರ ಅಭದ್ರತೆಯ ಕುರಿತಾದ ಕರಾರುವಾಕ್ಕಾದ ಅಂದಾಜು ಎನ್ನಲಾಗಿದೆ.

2017 ರಿಂದ SOFI ವರದಿಯಲ್ಲಿ ಎರಡು ಆಹಾರ ಅಭದ್ರತೆಯ ಪ್ರಮುಖ ಸೂಚಕಗಳನ್ನು ಪ್ರಕಟಿಸುತ್ತಿದೆ. ಒಂದು ಹಿಂದಿನಿಂದಲೂ ಪ್ರಕಟಿಸುತ್ತಾ ಬಂದ 'ಪ್ರಚಲಿತ ಅಪೌಷ್ಟಿಕತೆ' (PoU -Prevalence of Undernourishment). ಇನ್ನೊಂದು 'ಪ್ರಚಲಿತ ಸಾಧಾರಣ ಮತ್ತು ತೀವ್ರ ಆಹಾರ ಅಭದ್ರತೆ' (PMSFI -Prevalence of Moderate and Severe Food Insecurity). ಇವೆರಡೂ ಸೂಚಕಗಳು ಆಹಾರ ಅಭದ್ರತೆ ಮತ್ತು ಹಸಿವನ್ನು ಕೊನೆಗಾಣಿಸುವ ಸಾರ್ವತ್ರಿಕವಾಗಿ ಒಪ್ಪಿತವಾದ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿ 2.1ರ ಭಾಗವಾಗಿರುವಂಥವು. 'ಪ್ರಚಲಿತ ಅಪೌಷ್ಟಿಕತೆ' (PoU) ಆಹಾರದಲ್ಲಿ ಸತತವಾಗಿ ಕ್ಯಾಲೋರಿಗಳ ಅಭಾವ ಎದುರಿಸುತ್ತಿರುವ ಜನಸಂಖ್ಯೆಯ ಪ್ರಮಾಣವನ್ನು ಸೂಚಿಸುತ್ತದೆ. 'ಪ್ರಚಲಿತ ಸಾಧಾರಣ ಮತ್ತು ತೀವ್ರ ಆಹಾರ ಅಭದ್ರತೆ (PMSFI) ಅಗತ್ಯ ಪ್ರಮಾಣದ ಮತ್ತು ಪೌಷ್ಟಿಕ ಆಹಾರ ಸಿಗದಿರುವವರ ಪ್ರಮಾಣದ ಸೂಚಕ. PoU ಸೂಚಕವು NSSO (ರಾಷ್ಟ್ರೀಯ ಸಮೀಕ್ಷೆ ಸಂಸ್ಥೆ) ನಡೆಸುವ ಬಳಕೆಯ ಮೇಲಿನ ಖರ್ಚಿನ ಸಮೀಕ್ಷೆ (Survey on Consumption Expenditure) ಮೇಲೆ ಆಧರಿಸಿದೆ. PMSFI ಆಹಾರ ಅಭದ್ರತೆಯ ಒಟ್ಟು ಅನುಭವದ ವಾರ್ಷಿಕ ಸಮೀಕ್ಷೆ ಮೇಲೆ ಆಧರಿಸಿದೆ. ಆಹಾರದ ಅಭಾವ, ಊಟ ಬಿಡುವುದು, ಕೊಳ್ಳಲು ಸಾಧ್ಯವಾಗದ್ದರಿಂದ ಪೌಷ್ಟಿಕತೆಯ ಆಹಾರವನ್ನು (ಉದಾ: ಮೊಟ್ಟೆ, ಮೀನು, ಮಾಂಸ) ಕೈಬಿಡುವುದು ಇತ್ಯಾದಿ ಆಹಾರ ಅಭದ್ರತೆಯ ಹಲವು ಆಯಾಮಗಳನ್ನು ಇದಕ್ಕಾಗಿ ಮಾಡುವ ಸಮೀಕ್ಷೆಯಲ್ಲಿ ಒಳಗೊಳ್ಳಲಾಗಿದೆ. FIES (Food Insecurity Experience Scale) ಎಂದು ಕರೆಯಲಾಗುವ FAO ಸಿದ್ಧಪಡಿಸಿರುವ ಮತ್ತು ಸಾರ್ವತ್ರಿಕವಾಗಿ ಒಪ್ಪಿತವಾದ ಅಳತೆಯನ್ನು ಸಮೀಕ್ಷೆಯ ಪರಿಣಾಮವಾಗಿ ನಿಗದಿಗೊಳಿಸಲಾಗುತ್ತದೆ. FAO 140 ದೇಶಗಳಲ್ಲಿ ಸ್ವತಃ ಸಂಘಟಿಸುವ FIES ಸಂಬಂಧಿ ಪ್ರಶ್ನೆಗಳನ್ನು ಕೇಳುವ FAO-GWP ಸಮೀಕ್ಷೆಯ ಮೂಲಕ ಪ್ರತಿ ದೇಶದ PMSFI ಕಂಡು ಹಿಡಿಯಲಾಗುತ್ತದೆ. ಕೆಲವು ದೇಶಗಳು ತಮ್ಮದೇ ರಾಷ್ಟ್ರೀಯ ಈಖಇಖ ಸಮೀಕ್ಷೆಗಳನ್ನು ನಡೆಸುತ್ತವೆ. ಈ ಎರಡು ಸೂಚಕಗಳಲ್ಲಿ PMSFI ಆಹಾರ ಅಭದ್ರತೆಯನ್ನು ಹೆಚ್ಚು ನಿಖರವಾಗಿ ಸಮಗ್ರವಾಗಿ ಹಿಡಿದಿಡುವ ಸೂಚಕ.

ವರದಿಯ ಪ್ರಕಾರ ಭಾರತದಲ್ಲಿ ಸಾಧಾರಣ ಮತ್ತು ತೀವ್ರ ಆಹಾರ ಅಭದ್ರತೆ ಎದುರಿಸುತ್ತಿರುವವರ ಪ್ರಮಾಣ 2014–16ರಲ್ಲಿ 27.8% ಇದ್ದಿದ್ದು, 2017–19ರಲ್ಲಿ 31.6% ಗೆ ಏರಿದೆ. ಸಾಧಾರಣ ಮತ್ತು ತೀವ್ರ ಆಹಾರ ಅಭದ್ರತೆ ಎದುರಿಸುತ್ತಿರುವವರ ಸಂಖ್ಯೆ 2014–16ರಲ್ಲಿ 42.65 ಕೋಟಿ ಯಿಂದ, 48.86 ಕೋಟಿಗೆ ಏರಿದೆ. ಜಗತ್ತಿನ ಸಾಧಾರಣ ಮತ್ತು ತೀವ್ರ ಆಹಾರ ಅಭದ್ರತೆ ಎದುರಿಸುತ್ತಿರುವವರ ಅತಿ ದೊಡ್ಡ (22%) ಪ್ರಮಾಣದ ಜನ ಇರುವ ದೇಶ ಭಾರತವಾಗಿದೆ. ಮಾತ್ರವಲ್ಲ, ದಕ್ಷಿಣ ಏಶ್ಯಾದ PMSFI ಸೂಚಕ 0.5% ರಷ್ಟು ಕಡಿಮೆಯಾಗಿದೆ. ಆದರೆ, ಭಾರತದ್ದು 3.7% ರಷ್ಟು ಹೆಚ್ಚಿದೆ. ಇದು ಕೊವಿದ್–19 ಮಹಾಮಾರಿಯ ಹರಡುವಿಕೆ, ಅದರಿಂದಾಗಿ ಹಾಕಿದ ಲಾಕ್‌ಡೌನ್, ಅದರಿಂದಾಗುವ ಆರ್ಥಿಕ ಸಾಮಾಜಿಕ ಪರಿಣಾಮಗಳು ಇತ್ಯಾದಿ ದೇಶವನ್ನು ಅಪ್ಪಳಿಸಿದ ಮೊದಲಿನ ಅಂಕೆಸಂಖ್ಯೆ ಎಂಬುದನ್ನು ಗಮನಿಸಬೇಕು.


2014–2019ರ ಅವಧಿಯಲ್ಲಿ ಎರಡೂ ಸೂಚಕಗಳ ಪ್ರಕಾರ ಆಹಾರ ಅಭದ್ರತೆ ಹೆಚ್ಚಿರುವುದಕ್ಕೆ ಕಾರಣ ಈ ಅವಧಿಯಲ್ಲಿ ವ್ಯಾಪಕವಾಗಿದ್ದ ಕೃಷಿ ಬಿಕ್ಕಟ್ಟು, ಬಳಕೆಯ ಮೇಲೆ ದುಷ್ಪರಿಣಾಮಗಳಿಂದಾಗಿ ಹೆಚ್ಚಿನ ಕ್ಷೇತ್ರಗಳಲ್ಲಿ ಹೂಡಿಕೆಯ ಅಭಾವ, ಅದರ ಪರಿಣಾಮವಾದ ಉದ್ಯೋಗ ಆದಾಯಗಳ ನಷ್ಟ ಮುಖ್ಯ ಕಾರಣ ಎನ್ನಲಾಗಿದೆ. ಇವೆಲ್ಲವೂ ದೇಶದ ದೊಡ್ಡ ಜನವಿಭಾಗದ ಆಹಾರ ಭದ್ರತೆಯ ಮೇಲೆ ನೇರ ಪರಿಣಾಮ ಬೀರುತ್ತವೆ. ಸಾಲದೆಂಬಂತೆ ಇದೇ ಅವಧಿಯಲ್ಲಿ ಜಾರಿಯಾದ ನೋಟು ನಿಷೇಧ ಮತ್ತು ಜಿ.ಎಸ್.ಟಿ ಅಸಂಘಟಿತ ಸಣ್ಣ, ಅತಿ ಸಣ್ಣ ಉದ್ಯಮಗಳಿಗೆ ಮರ್ಮಾಘಾತ ಮಾಡಿದ್ದು ಆಹಾರ ಅಭದ್ರತೆಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಈ ಅಭದ್ರತೆಯನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಬಹುದಾಗಿದ್ದ ರೇಗಾ, ಆಹಾರ, ಇಂಧನ ಮುಂತಾದ ಆವಶ್ಯಕ ವಸ್ತು/ಸೇವೆಗಳ ಸಬ್ಸಿಡಿ ಕಡಿತ ಅದನ್ನು ಹೆಚ್ಚಿಸಿದೆ. ಈಗ ಕೊವಿದ್–19 ರ ಪರಿಣಾಮವಾಗಿ ಆಹಾರ ಅಭದ್ರತೆ ಅಗಾಧವಾಗಿ ಹೆಚ್ಚಿರುತ್ತದೆ. ಅದಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಸಮಸ್ಯೆಯ ಅಗಾಧತೆ ಅಂದಾಜು ಮಾಡಲು ಈಗಲಾದರೂ FIES ಸಂಬಂಧಿ ಪ್ರಶ್ನೆಗಳನ್ನು ಕೇಳುವ PMSFI ಕಂಡು ಹಿಡಿಯುವ ಸಮೀಕ್ಷೆಯನ್ನು ನಡೆಸಬೇಕಾಗಿದೆ.

ಆದರೆ ಈಗಿರುವ ಸರಕಾರ 2017–18ರ NSSO (ರಾಷ್ಟ್ರೀಯ ಸಮೀಕ್ಷೆ ಸಂಸ್ಥೆ) ನಡೆಸುವ ಬಳಕೆಯ ಮೇಲಿನ ಖರ್ಚಿನ ಸಮೀಕ್ಷೆ (Survey on Consumption Expenditure) ವರದಿಯ ಪ್ರಕಟಣೆಯನ್ನು ತಡೆ ಹಿಡಿದಿದೆ. ಇದರಿಂದಾಗಿ ಈ ಬಾರಿಯ ಭಾರತದ PoU ಸೂಚಕ ತಪ್ಪಾಗಿರುವ ಸಾಧ್ಯತೆಯಿದೆ. ಮೇಲೆ ಹೇಳಿದ ವರದಿಯನ್ನು ತಡೆ ಹಿಡಿದದ್ದರಿಂದ SOFI ವರದಿಯ ತಯಾರಿಗೆ ಆಹಾರ ಬಳಕೆಯ ಬದಲಿಗೆ ಆಹಾರ ಲಭ್ಯತೆ (ಅಥವಾ ಪೂರೈಕೆ) ದತ್ತಾಂಶಗಳನ್ನು ಬಳಸಲಾಗಿದೆ. ಆದರೆ ಭಾರತದಲ್ಲಿ ತೀವ್ರ ಅಸಮಾನತೆಯಿಂದಾಗಿ ಆಹಾರ ಲಭ್ಯತೆ (ಅಥವಾ ಪೂರೈಕೆ)ಯ ಏರಿಕೆ/ಇಳಿಕೆ ಮತ್ತು ಆಹಾರ ಬಳಕೆಯ ಏರಿಕೆ/ಇಳಿಕೆ ಒಂದೇ ಪ್ರಮಾಣದಲ್ಲೂ ಒಂದೇ ದಿಕ್ಕಿನಲ್ಲೂ (ಅಂದರೆ ಲಭ್ಯತೆ ಹೆಚ್ಚಾದರೆ ಬಳಕೆ ಹೆಚ್ಚಾಗಬೇಕೆಂದಿಲ್ಲ, ಯಾಕೆಂದರೆ ಬಳಕೆ ಆದಾಯ ಇತ್ಯಾದಿ ಅಂಶಗಳ ಮೇಲೆ ಅವಲಂಬಿಸಿರುತ್ತದೆ) ಇರಬೇಕೇಂದಿಲ್ಲ. ಭಾರತ FIES ಸಂಬಂಧಿ ಪ್ರಶ್ನೆಗಳನ್ನು ಕೇಳುವ PMSFI ಕಂಡು ಹಿಡಿಯುವ ಸಮೀಕ್ಷೆಯನ್ನು ನಡೆಸುವುದಿಲ್ಲ. ಮಾತ್ರವಲ್ಲ ಭಾರತ ಸೇರಿದಂತೆ (140 ದೇಶಗಳಲ್ಲಿ) ಜಾಗತಿಕವಾಗಿ ನಡೆಸಲಾಗುವ FAO-GWP ಸಮೀಕ್ಷೆಯ ತನ್ನ ದತ್ತಾಂಶಗಳನ್ನು ಪ್ರಕಟಿಸಲು ಅನುಮತಿ ಕೊಡದ ಬೆರಳೆಣಿಕೆಯ ದೇಶಗಳಲ್ಲಿ ಒಂದು. ಆದರೆ SOFI ವರದಿಯಲ್ಲಿ ವಲಯವಾರು ದೇಶವಾರು ದತ್ತಾಂಶಗಳನ್ನು ಪ್ರಕಟಿಸುವುದರಿಂದ (ಭಾರತ ಸೇರಿರುವ) ದಕ್ಷಿಣ ಏಶ್ಯಾದ ಮತ್ತು ಭಾರತ ಬಿಟ್ಟು ಇತರ ಎಲ್ಲ ದೇಶಗಳ ದತ್ತಾಂಶಗಳನ್ನು ಬಳಸಿಕೊಂಡು ಭಾರತದ PMSFI ಸೂಚಕವನ್ನು ಕಂಡು ಹಿಡಿಯಬಹುದು. ಮೇಲೆ ಹೇಳಿದ ಸೂಚಕವನ್ನು ಈ ರೀತಿಯಲ್ಲಿ ಕಂಡು ಹಿಡಿಯಲಾಗಿದೆ. ದೇಶದ ಆಹಾರ ಅಭದ್ರತೆಗಿಂತ ಅದರ ಸೂಚಕಗಳ ಪ್ರಕಟಣೆಯ ಕುರಿತು ತೀವ್ರ ಅಭದ್ರತೆ ಅನುಭವಿಸುವ ಸರಕಾರ ಆಹಾರ ಭದ್ರತೆಯ ಕರಾರುವಾಕ್ಕಾದ ಸೂಚಕವಾದ PMSFI ಕಂಡು ಹಿಡಿಯುವ ಸಮೀಕ್ಷೆಯನ್ನು ನಡೆಸುವಂತೆ ಮಾಡುವುದು ಹೇಗೆ ಎಂಬುದು ಹಸಿದವರ ಮತ್ತು ಅವರ ಕುರಿತು ಕಾಳಜಿ ಇರುವವರ ಮುಂದಿರುವ ಯಕ್ಷಪ್ರಶ್ನೆ.

(ವೈಶಾಲಿ ಬನ್ಸಲ್ ಅವರ ದಿ ಹಿಂದು ನಲ್ಲಿ ಅಗಸ್ಟ್ 24ರಂದು ಪ್ರಕಟವಾದ ಲೇಖನದ ಮೇಲೆ ಆಧಾರಿತ)

ವೈ ಪ್ಲಸ್‌ಭದ್ರತೆ –ನಿಜವಾಗಿ ಯಾರಿಗೆ? ಯಾತಕ್ಕೆ?

ಬಾಲಿವುಡ್ ತಾರೆ ಕಂಗನಾ ರನೌತ್ ಅವರಿಗೆ ಕೇಂದ್ರ ಗೃಹಮಂತ್ರಾಲಯ 'ವೈ ಪ್ಲಸ್' ಭದ್ರತೆಯನ್ನು ಒದಗಿಸಿರುವ ಸುದ್ದಿ ದೇಶದ ಗಮನ ಸೆಳೆದಿದೆ, ಬಾಲಿವುಡ್ ನಟ ಸುಶಾಂತ್ ಸಿಂಗ್‌ರಜಪೂತ್ ಸಾವಿನ ಹಿನ್ನೆಲೆಯಲ್ಲಿ ಶಿವಸೇನಾ ಮುಖಂಡರು ಮತ್ತು ಮಹಾರಾಷ್ಟ್ರ ಸರಕಾರ ಹಾಗೂ ಈ ಬಾಲಿವುಡ್ ತಾರೆಯ ನಡುವಿನ ಇತ್ತೀಚಿನ ವಾಗ್ವಾದಗಳ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಮಂತ್ರಾಲಯ ಈ ಭದ್ರತೆಯನ್ನು ಒದಗಿಸಿದೆ ಎನ್ನಲಾಗಿದೆ. ಇದು ಸಿ ಆರ್ ಪಿ ಎಫ್ ನ ಹನ್ನೊಂದು ಕಮಾಂಡೋಗಳಿಂದ ಭದ್ರತೆಯ ವ್ಯವಸ್ಥೆ!



ದಿಲ್ಲಿಯ ಪಕ್ಕದ ಉತ್ತರ ಪ್ರದೇಶದಲ್ಲಿ 17 ವರ್ಷದ , 13 ವರ್ಷದ, 3 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಕೊಲೆ ಎಂಬ ಸುದ್ದಿಯೊಂದಿಗೆ ವೈ+ ಭದ್ರತೆಯ ಸುದ್ದಿ ಬಂದಿದೆ ಎಂಬ ಸಂಗತಿಯತ್ತ ವ್ಯಂಗ್ಯಚಿತ್ರಕಾರ ಮಂಜುಲ್ ಅವರು ಇಲ್ಲಿ ಗಮನ ಸೆಳೆದಿದ್ದಾರೆ .ಕೃಪೆ: ಫಸ್ಟ್‌ಪೋಸ್ಟ್




ಯಾಕೆ"? ವೈ? ವೈ? ಜಿಎಸ್‌ಟಿ, ಜಿಡಿಪಿ, ಆತ್ಮ ಹತ್ಯೆ, ಉದ್ಯೋಗ, ಪರೀಕ್ಷೆ ಮುಂತಾದ ವಿದ್ಯಾರ್ಥಿಗಳ, ಯುವಜನರ, ರೈತರ ,ರಾಜ್ಯಗಳ, ಇಡೀ ಅರ್ಥವ್ಯವಸ್ಥೆಯ ಪ್ರಶ್ನೆಗಳಿಂದ ಸರಕಾರಕ್ಕೆ ಭದ್ರತೆ ಕೊಡಲಿಕ್ಕಾಗಿ ಇರಬಹುದೇ? ಇರಬಹುದೇನೋ!

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಗಲ್ಫ್ ನ್ಯೂಸ್

ವೈ ಭದ್ರತೆ ಮತ್ತು ಜೆ ಭದ್ರತೆಯೂ, ಭದ್ರತೆಯ ಉದ್ಯೋಗವೂ!

ಸರಿ, ನಮಗೇನೂ ವೈ ಪ್ಲಸ್ ಭದ್ರತೆ ಬೇಡ, 'ಜೆ 'ಭದ್ರತೆ ಕೊಡಿ, ಸಾಕು ಎಂದು ಜನರು ಕೇಳುತ್ತಿದ್ದಾರಂತೆ.

ಏನಿದು ಜೆ ಭದ್ರತೆ? ಇದು ನಮಗಷ್ಟೇ ಅಲ್ಲ, ಪ್ರಧಾನ ಮಂತ್ರಿಗಳಿಗೂ ಗೊತ್ತಿರಲಿಲ್ಲವಂತೆ.




"ಅವರಿಗೆ ಜೆ ಕೆಟಗರಿಯಲ್ಲಿ ಜಾಬ್ ಸೆಕ್ಯುರಿಟಿ ಬೇಕಂತೆ' ಅಂದರೆ ಉದ್ಯೋಗ ಭದ್ರತೆ!

"ಮಿತ್ರೋಂ, ವೈ ಕೆಟಗರಿಯಲ್ಲಿ 11 ಭದ್ರತಾ ಉದ್ಯೋಗಗಳನ್ನು ಈಗಷ್ಟೇ ನಿರ್ಮಿಸಿದ್ದೇನೆ'!

ವ್ಯಂಗ್ಯಚಿತ್ರ ಕೃಪೆ: ಅರವಿಂದ ತೆಗ್ಗಿನಮಠ,

ಜಿಎಸ್‌ಟಿ ಪರಿಹಾರ ನೀಡಿಕೆ ಬಗ್ಗೆ ಕೇಂದ್ರದ ವಿಲಕ್ಷಣ ನಿಲುವು

ಕೇಂದ್ರ ಸರಕಾರ ತಾನೇ ಸಾಲ ಮಾಡಿ ಏಕೆ ಕೊಡಬಾರದು?



ಕೇಂದ್ರವು ಪರಿಹಾರವಾಗಿ ಕೊಡಬೇಕಿದ್ದ ಹಣದ ಬದಲು, ತಾವೇ ಸಾಲ ಮಾಡಿಕೊಳ್ಳುವಂತೆ ರಾಜ್ಯಗಳಿಗೆ ಸೂಚನೆ ನೀಡಿರುವ ಕೇಂದ್ರದ ನಿಲುವು ವಿಲಕ್ಷಣವಾಗಿದೆ. 2.35 ಲಕ್ಷ ಕೋಟಿ ರೂ.ಗಳನ್ನು ಸುರಕ್ಷಿತವಾಗಿ ಸಾಲ ಮಾಡಬಹುದು ಮತ್ತು ಅದನ್ನು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಬಳಸಬಹುದು ಎಂಬ ಅಂಶವನ್ನು ಈ ಸೂಚನೆಯ ಮೂಲಕ ಕೇಂದ್ರವೇ ಒಪ್ಪಿಕೊಂಡಂತೆ ಆಗಿರುವಾಗ, ತಾನೇ ಸಾಲ ಮಾಡಿ ಆ ಹಣವನ್ನು ಜಿಎಸ್‌ಟಿ ಪರಿಹಾರವಾಗಿ ರಾಜ್ಯಗಳಿಗೆ ಏಕೆ ಹಸ್ತಾಂತರಿಸುವುದಿಲ್ಲ? ಕೇಂದ್ರ ಸರ್ಕಾರವು ರಾಜ್ಯಗಳಿಗೆ ಕೊಡಬೇಕಿರುವ ಜಿಎಸ್‌ಟಿ ಪರಿಹಾರದ ಬಾಧ್ಯತೆಯನ್ನು ಪೂರೈಸಲು ಆರ್‌ಬಿಐನಿಂದ ಸಾಲ ಪಡೆಯುವ ಕ್ರಮವು ಒಂದೇ ಕಲ್ಲಿನಿಂದ ಅನೇಕ ಹಕ್ಕಿಗಳನ್ನು ಕೊಲ್ಲುತ್ತದೆ. ಆದರೆ, ಅರ್ಥಶಾಸ್ತ್ರದ ಬಗ್ಗೆ ಸೀಮಿತ ತಿಳಿವಳಿಕೆ ಹೊಂದಿರುವ ಮತ್ತು ರಾಜ್ಯಗಳ ಬಗ್ಗೆ ಸಹಾನುಭೂತಿ ಇನ್ನೂ ಹೆಚ್ಚು ಸೀಮಿತವಾಗಿರುವ ಮೋದಿ ಸರಕಾರವು ಈ ಅಂಶಗಳನ್ನು ಸ್ಪಷ್ಟವಾಗಿ ನೋಡಲಾರದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಪರೋಕ್ಷ ತೆರಿಗೆಗಳನ್ನು ಸಂವಿಧಾನ ದತ್ತವಾಗಿ ವಿಧಿಸುವ ಅಧಿಕಾರವನ್ನು ಹೊಂದಿದ್ದ ರಾಜ್ಯಗಳು, ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ತಮ್ಮ ತೆರಿಗೆ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟ ಸನ್ನಿವೇಶದಲ್ಲಿ, ಜಿಎಸ್‌ಟಿ ಜಾರಿಯಿಂದಾಗಿ ರಾಜ್ಯಗಳಿಗೆ ತಮ್ಮ ಆದಾಯದಲ್ಲಿ ಕೊರತೆ ಉಂಟಾದಲ್ಲಿ, ಅಂತಹ ಕೊರತೆಯನ್ನು ಐದು ವರ್ಷಗಳ ಕಾಲ ಪರಿಹಾರವಾಗಿ ತುಂಬಿಕೊಡುವ ಭರವಸೆಯನ್ನು ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡಿತ್ತು. ಈ ಕೊರತೆಯ ಪ್ರಮಾಣವನ್ನು, ರಾಜ್ಯಗಳ ಆದಾಯವು ಸರಾಸರಿ ಶೇ.14 ಬೆಳವಣಿಗೆ ದರ ಎಂದಿಟ್ಟುಕೊಂಡರೆ ಎಷ್ಟಾಗಬಹುದು ಎಂದು ಅಂದಾಜಿಸಿ ಅದಕ್ಕನುಗುಣವಾಗಿ ಪರಿಹಾರವಾಗಿ ರಾಜ್ಯಗಳಿಗೆ ತುಂಬಿಕೊಡುವ ಏರ್ಪಾಟನ್ನು 2017ರಲ್ಲಿ ಒಂದು ಕಾಯ್ದೆಯ ಮೂಲಕ ಮಾಡಲಾಗಿತ್ತು. ವಾಸ್ತವವಾಗಿ, ಹಲವು ರಾಜ್ಯಗಳು ಜಿಎಸ್‌ಟಿಯತ್ತ ಹೊರಳಲು ಈ ಭರವಸೆಯೇ ಒಂದು ದೊಡ್ಡ ಪ್ರೇರಣೆಯಾಗಿ ಕೆಲಸಮಾಡಿತ್ತು.

ಆದರೆ ಆದಾಯ ಸಂಗ್ರಹಣೆಯಲ್ಲಿ ಜಿಎಸ್‌ಟಿ ಪದ್ಧತಿಯು ಹೀನಾಯವಾಗಿ ಸೋತಿದೆ. ಈ ಸೋಲಿಗೆ ಭಾಗಶಃವಾಗಿ ಜಿಎಸ್‌ಟಿಯಲ್ಲಿಯೇ ಅಂತರ್ಗತವಾಗಿರುವ ಕೆಲವು ದೌರ್ಬಲ್ಯಗಳು ಕಾರಣವಾಗಿವೆ ಮತ್ತು ಜಿಡಿಪಿಯ ಬೆಳವಣಿಗೆಯು ಕುಂಠಿತವಾಗಿರುವುದೂ ಸಹ ಭಾಗಶಃವಾಗಿ ಕಾರಣವಾಗಿದೆ. ಅದೇ ರೀತಿಯಲ್ಲಿ, ರಾಜ್ಯಗಳಿಗೆ ಪರಿಹಾರ ಒದಗಿಸಬೇಕಿರುವ ಜಿಎಸ್‌ಟಿ ಸೆಸ್ ಸಂಗ್ರಹಣೆಯೂ ವಿಪರೀತ ಎನ್ನುವಷ್ಟು ಮಟ್ಟಿಗೆ ಕಡಿಮೆಯಾಗಿದೆ. ರಾಜ್ಯಗಳ ಆದಾಯದ ಬೆಳವಣಿಗೆ ಜಡಗೊಂಡಿರುವ ಕಾರಣದಿಂದ ಕೇಂದ್ರವು ಒದಗಿಸಬೇಕಿರುವ ಪರಿಹಾರದ ಮೊತ್ತವು ಅಗಾಧವಾಗಿದೆ ಮತ್ತು ಅದರ ಅವಶ್ಯಕತೆಯೂ ಬಹಳ ತುರ್ತಾಗಿರುವ ಸಂದರ್ಭದಲ್ಲಿ, ಆ ನಿಮಿತ್ತ ಸಂಗ್ರಹಿಸುತ್ತಿದ್ದ ಜಿಎಸ್‌ಟಿ ಸೆಸ್ ಆದಾಯದ ಬೆಳವಣಿಗೆಯೂ ರಾಜ್ಯಗಳ ಆದಾಯದ ರೀತಿಯಲ್ಲಿಯೇ ಜಡಗಟ್ಟಿ ನಿಂತಿದೆ. ಆದ್ದರಿಂದ, ಪರಿಹಾರ ಕೊಡಲು ಕೊರತೆ ಬೀಳುವ ಹಣವನ್ನು ಹೊಂದಿಸಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಇರುವ ತಾರ್ಕಿಕ ಮಾರ್ಗವೆಂದರೆ ಒಂದೋ ಸಾಲ ಎತ್ತುವುದು ಇಲ್ಲವೇ ಇತರ ಮೂಲಗಳಿಂದ ತೆರಿಗೆಯನ್ನು ಸಂಗ್ರಹಿಸುವುದು. ನಂತರ, ಈ ರೀತಿಯಲ್ಲಿ ಒದಗಿಸಿಕೊಂಡ ಹಣದಿಂದ ರಾಜ್ಯ ಸರ್ಕಾರಗಳಿಗೆ ಕೊಡಬೇಕಿರುವ ಪರಿಹಾರದ ಬಾಕಿಯನ್ನು ಚುಕ್ತಾ ಮಾಡುವುದು.

ಆದರೆ, ಕೇಂದ್ರ ಸರ್ಕಾರವು ಪರಿಹಾರ ಒದಗಿಸುವುದಾಗಿ ರಾಜ್ಯ ಸರ್ಕಾರಗಳಿಗೆ ಕೊಟ್ಟ ಭರವಸೆಯನ್ನು ಈಡೇರಿಸುವ ಬದಲು ಮಾತು ಕದಿಯುತ್ತಿದೆ. ಕೊರತೆಯ ಈ ಸಮಸ್ಯೆಯು 2019ರ ಆಗಸ್ಟ್‌ನಲ್ಲೇ ಆರಂಭವಾಗಿತ್ತು. ಕೊರೊನಾ ಸಾಂಕ್ರಾಮಿಕ ಅಪ್ಪಳಿಸಿದ್ದರಿಂದಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಸಮಸ್ಯೆ ಉಲ್ಬಣಗೊಂಡಿದೆ. ಈ ಸಾಂಕ್ರಾಮಿಕವು ಜಿಎಸ್‌ಟಿ ಆದಾಯವು ತೀವ್ರವಾಗಿ ಇಳಿಯುವಂತೆ ಮಾಡಿದೆ. ಅದೇ ಸಮಯದಲ್ಲಿ ರಾಜ್ಯ ಸರ್ಕಾರಗಳ ಅಗತ್ಯ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಿದೆ. 2020–21ರ ಸಾಲಿನಲ್ಲಿ ರಾಜ್ಯ ಸರ್ಕಾರಗಳಿಗೆ ಪರಿಹಾರವಾಗಿ ಕೇಂದ್ರವು ಕೊಡಬೇಕಾಗುವ ಮೊತ್ತವನ್ನು 3 ಲಕ್ಷ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಈ ಉದ್ದೇಶಕ್ಕಾಗಿ ಸಂಗ್ರಹಿಸಿರುವ ಕೇವಲ 65 ಸಾವಿರ ಕೋಟಿ ರೂ.ಗಳನ್ನು ಕೇಂದ್ರವು ರಾಜ್ಯಗಳಿಗೆ ಹಂಚಬಹುದಷ್ಟೇ. ಉಳಿದ 2.35 ಲಕ್ಷ ಕೋಟಿ ರೂ.ಗಳ ಪರಿಹಾರವನ್ನು ಕೊಡಲು ಕೇಂದ್ರವು ನಿರಾಕರಿಸುತ್ತಿದೆ. ಈ ಸಂಬಂಧವಾಗಿ ಆಗಸ್ಟ್ 27ರಂದು ನಡೆದ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಉಳಿದ 2.35 ಲಕ್ಷ ಕೋಟಿ ರೂ.ಗಳನ್ನು ರಾಜ್ಯ ಸರ್ಕಾರಗಳೇ ಸಾಲ ಎತ್ತುವ ಮೂಲಕ ಒದಗಿಸಿಕೊಳ್ಳಬೇಕೆಂದು ಕೇಂದ್ರವು ಸೂಚಿಸಿದೆ. ಈ ಸಂಬಂಧವಾಗಿ ಎತ್ತುವ ಸಾಲಗಳ ರೀತಿಯ ಬಗ್ಗೆ ರಾಜ್ಯ ಸರ್ಕಾರಗಳಿಗೆ ಎರಡು ಆಯ್ಕೆಗಳನ್ನು ನೀಡಿದೆ.

ಕೇಂದ್ರವು ಪರಿಹಾರವಾಗಿ ಕೊಡಬೇಕಿದ್ದ ಹಣದ ಬದಲು, ತಾವೇ ಸಾಲ ಮಾಡಿಕೊಳ್ಳುವಂತೆ ರಾಜ್ಯಗಳಿಗೆ ಸೂಚನೆ ನೀಡಿರುವ ಕೇಂದ್ರದ ಈ ನಿಲುವು, ಎರಡು ಸ್ಪಷ್ಟವಾದ ಕಾರಣಗಳಿಂದಾಗಿ, ಸಂಪೂರ್ಣವಾಗಿ ವಿಲಕ್ಷಣವಾಗಿದೆ: ಮೊದಲನೆಯದಾಗಿ, ಈ ನಿಲುವು, ಕೇಂದ್ರ ಸರ್ಕಾರವೇ ಕೊಟ್ಟಿದ್ದ ವಾಗ್ದಾನದ ಉಲ್ಲಂಘನೆಯಾಗುತ್ತದೆ ಮಾತ್ರವಲ್ಲ, ಪಾರ್ಲಿಮೆಂಟ್ ಅಂಗೀಕರಿಸಿದ ಕಾಯ್ದೆಯೊಂದರ ಉಲ್ಲಂಘನೆಯೂ ಆಗುತ್ತದೆ. ಸರ್ಕಾರ ಕೊಟ್ಟಿದ್ದ ಈ ವಾಗ್ದಾನವನ್ನು ಆಧರಿಸಿಯೇ ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ಬಿಟ್ಟು ಕೊಟ್ಟು, ಜಿಎಸ್‌ಟಿ ಜಾರಿಗೆ ತರಲು ಅತ್ಯವಶ್ಯವಾಗಿದ್ದ ಸಾಂವಿಧಾನಿಕ ತಿದ್ದುಪಡಿಗೆ ರಾಜ್ಯಗಳು ಒಪ್ಪಿಕೊಂಡಿದ್ದವು. ಆದರೆ, ಕೇಂದ್ರ ಸರಕಾರದ ಈ ಕ್ರಮವು ಈ ಸಾಂವಿಧಾನಿಕ ಏರ್ಪಾಟನ್ನೇ ಹಾಳುಗೆಡವುತ್ತದೆ. ಎರಡನೆಯದಾಗಿ, ಕೇಂದ್ರದ ಈ ನಿಲುವಿನಲ್ಲಿ ಯಾವುದೇ ಆರ್ಥಿಕ ತರ್ಕವೂ ಇಲ್ಲ.

ಕೇಂದ್ರ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿದರೆ ಅರ್ಥವ್ಯವಸ್ಥೆಗೆ ಯಾವ ರೀತಿಯ ಹಾನಿಯಾಗುತ್ತದೆ ಎಂದು ಭಾವಿಸುತ್ತದೆಯೋ ಅದೇ ರೀತಿಯ ಹಾನಿಯು ರಾಜ್ಯಗಳು ಸಾಲ ಮಾಡಿದಾಗ ಅವುಗಳನ್ನು ಅಷ್ಟೇ ಸಮಾನಾಗಿ ತಟ್ಟುತ್ತದೆ. ವಾಸ್ತವವಾಗಿ, ಸಾಲ ಎತ್ತುವಂತೆ ರಾಜ್ಯಗಳಿಗೆ ಹೇಳುವ ಮೂಲಕ ಕೇಂದ್ರವು 2.35 ಲಕ್ಷ ಕೋಟಿ ರೂ.ಗಳನ್ನು ಸುರಕ್ಷಿತವಾಗಿ ಸಾಲ ಮಾಡಬಹುದು ಮತ್ತು ಅದನ್ನು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಬಳಸಬಹುದು ಎಂಬ ಅಂಶವನ್ನು ಒಪ್ಪಿಕೊಂಡಿದೆ. ಆದರೂ, ಕೇಂದ್ರವೇ ಸಾಲ ಮಾಡಿ ಆ ಹಣವನ್ನು ಜಿಎಸ್‌ಟಿ ಪರಿಹಾರವಾಗಿ ರಾಜ್ಯಗಳಿಗೆ ಏಕೆ ಹಸ್ತಾಂತರಿಸುವುದಿಲ್ಲ?

ಕೇಂದ್ರವೇ ಸಾಲ ಮಾಡಿದ ಪಕ್ಷದಲ್ಲಿ, ಎರಡು ಸ್ಪಷ್ಟ ಪ್ರಯೋಜನಗಳಿವೆ: ಮೊದಲನೆಯದಾಗಿ ಮತ್ತು ಬಹಳ ಮುಖ್ಯವಾಗಿ, ಸಾಂವಿಧಾನಿಕ ಶಿಷ್ಟಾಚಾರಗಳನ್ನು ಪಾಲಿಸಿದಂತಾಗುತ್ತದೆ. ಹಾಗಾಗಿ, ವಚನಭ್ರಷ್ಟತೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎರಡನೆಯದಾಗಿ, ಕೇಂದ್ರ ಸರ್ಕಾರವು ಹೊಂದಿರುವ ವ್ಯಾಪಕ ತೆರಿಗೆ ಅಧಿಕಾರದ ಜೊತೆಗೆ, ಅದು ಮಾಡುವ ಸಾಲವು, ಸಾಲದಾತರಿಗೆ ಭರವಸೆಯ ಶ್ರೀರಕ್ಷೆಯನ್ನು ಒದಗಿಸುತ್ತದೆ. ಸಾಲ ಮರುಪಾವತಿಸಲು ತಪ್ಪಬಹುದು ಎಂಬ ಭಯ ಉದ್ಭವಿವುದಿಲ್ಲ. ಹಾಗಾಗಿ, ಕೇಂದ್ರವು ನಿರ್ಭೀತಿಯಿಂದ ಸಾಲ ಮಾಡಬಹುದು, ರಾಜ್ಯಗಳಂತಲ್ಲದೆ.

ಆದರೂ, ಕೇಂದ್ರವು ಎರಡು ಸಲಹೆಗಳನ್ನು ರಾಜ್ಯಗಳ ಮುಂದಿಟ್ಟಿದೆ. ಇವೆರಡೂ ಆಧಾರ ರಹಿತವಾದ ಸಲಹೆಗಳೇ. ಮೊದಲನೆಯ ಸಲಹೆಯ ಪ್ರಕಾರವಾಗಿ, ಇಡೀ ವಿಶ್ವವನ್ನೇ ಕಾಡುತ್ತಿರುವ ಕೊರೊನಾ ಸಾಂಕ್ರಾಮಿಕದಿಂದಾಗಿ ಜಿಎಸ್‌ಟಿ ಆದಾಯವು ಬೃಹತ್ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದು ದೇವರ ಆಟ. ಆದ್ದರಿಂದ, ಈ ಪರಿಸ್ಥಿತಿಗೆ ಕೇಂದ್ರವನ್ನು ಹೊಣೆ ಮಾಡಲಾಗದು. ಎರಡು ಪಾರ್ಟಿಗಳು ಸೇರಿ ಒಂದು ಖಾಸಗಿ ಒಪ್ಪಂದವನ್ನು ಮಾಡಿಕೊಂಡಿದ್ದರೂ ಸಹ, ಈ ರೀತಿಯ ಕೈಮೀರಿದ ಘಟನೆಗಳು ಸಂಭವಿಸಿದ ಸಂದರ್ಭದಲ್ಲಿ, ಇಬ್ಬರೂ (ಎರಡೂ ಪಾರ್ಟಿಗಳು) ಒಪ್ಪಂದದ ನಿಬಂಧಗಳಿಂದ ಮುಕ್ತರಾಗುತ್ತಾರೆ. ಪಾರ್ಟಿಗಳು/ವ್ಯಕ್ತಿಗಳು ತಮ್ಮ ತಮ್ಮ ಲಾಭವನ್ನು ಕಾಪಾಡಿಕೊಳ್ಳುವ ಇಂತಹ ಒಂದು ಕ್ರಮವು ಬಂಡವಾಳಶಾಹಿ ಪದ್ಧತಿಯ ಒಂದು ವಿಶೇಷ. ಆದರೆ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಚುನಾಯಿತಗೊಂಡ ಸರ್ಕಾರದ ಎರಡು ಸ್ತರಗಳ (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು) ನಡುವಿನ ಒಪ್ಪಂದಗಳಿಗೆ ಕೈಮೀರಿದ ಘಟನೆಗಳ ಸಂದರ್ಭದಲ್ಲಿ ಬಾಧ್ಯತೆಯಿಂದ ಮುಕ್ತವಾಗುವ ನಿಬಂಧನೆಗಳನ್ನು ಅನ್ವಯಿಸಲಾಗದು. ಹಾಗಾಗಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ದೇವರ ಆಟದ ಬಗ್ಗೆ ಮೊರೆಯಿಡುವ ಕ್ರಮವು ಒಂದು ಒಕ್ಕೂಟ ವ್ಯವಸ್ಥೆಯಲ್ಲಿ, ಎರಡು ಸ್ತರಗಳ ಚುನಾಯಿತ ಸರ್ಕಾರಗಳ ನಡುವಿನ ಸಂಬಂಧವನ್ನು ಎರಡು ಪಾರ್ಟಿಗಳ/ವ್ಯಕ್ತಿಗಳ ನಡುವಿನ ಒಂದು ಖಾಸಗಿ ಒಪ್ಪಂದದ ಮಟ್ಟಕ್ಕೆ ಇಳಿಸುತ್ತದೆ. ಇದು ಕೇವಲ ವಿಲಕ್ಷಣವಷ್ಟೇ ಅಲ್ಲ, "ಸಹಕಾರಿ ಒಕ್ಕೂಟ ವ್ಯವಸ್ಥೆ"ಯ ಬಗ್ಗೆ ತುತ್ತೂರಿ ಊದುವ ಸರ್ಕಾರದ ಒಂದು ಪರಮೋಚ್ಚ ವ್ಯಂಗ್ಯದ ಕೃತ್ಯವೂ ಆಗುತ್ತದೆ.

ಕೇಂದ್ರ ಸರ್ಕಾರದ ಎರಡನೆಯ ಸಲಹೆಯ ಪ್ರಕಾರ, ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡುವ ಸಲುವಾಗಿ ಕೇಂದ್ರವು ಸಾಲ ಮಾಡಿದರೆ, ಸಾಲ ತೀರಿಸುವ ವೆಚ್ಚವು (ಬಡ್ಡಿ) ಗಣನೀಯವಾಗಿ ಏರಿಕೆಯಾಗುತ್ತದೆ. ಅದರಿಂದ ಇಡೀ ಅರ್ಥವ್ಯವಸ್ಥೆಗೆ ಹಾನಿ ತಟ್ಟುತ್ತದೆ. ಮತ್ತೊಂದೆಡೆ, ರಾಜ್ಯ ಸರ್ಕಾರಗಳು ಸಾಲ ಮಾಡಿದರೆ, ಅವುಗಳ ಸಾಲ ತೀರಿಸುವ ವೆಚ್ಚವು (ಬಡ್ಡಿ) ಹೆಚ್ಚುವುದಿಲ್ಲ ಎಂಬ ಈ ವಾದಕ್ಕೆ ಯಾವುದೇ ಆಧಾರವಿಲ್ಲ.

ಅಲ್ಲದೆ, ಕೇಂದ್ರ ಸರ್ಕಾರವು ಏಕೆ ಸಾಲ ಎತ್ತಬಾರದು ಎಂಬುದಕ್ಕೆ ಯಾವುದೇ ಕಾರಣವಿಲ್ಲ. ಕೇಂದ್ರ ಸರ್ಕಾರದ ಎಣಿಕೆಯ ಪ್ರಕಾರವೇ ಈ ಪರಿಸ್ಥಿತಿಯು "ದೇವರ ಆಟ" ಎಂದಾಗಿರುವಾಗ, ಅದೇ ಕಾರಣವು ಸಾಲ ಎತ್ತುವ ಅಗತ್ಯವನ್ನೂ ಪ್ರತಿಪಾದಿಸುತ್ತದೆ. ಹಾಗಾಗಿ, ಆರ್‌ಬಿಐ ಬ್ಯಾಂಕಿಂಗ್ ವ್ಯವಸ್ಥೆಗೆ ಸಾಲ ನೀಡುವ ದರದಲ್ಲಿ (ರೆಪೊ ದರದಲ್ಲಿ), ತನ್ನ ಅವಶ್ಯಕತೆಗೆ ಸಾಕಾಗುವಷ್ಟು ಸಾಲವನ್ನು ಒದಗಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್‌ನ್ನು ಸಲೀಸಾಗಿ ಕೇಳಬಹುದು.

2020–21ರ ಸಾಲಿನಲ್ಲಿ ರಾಜ್ಯ ಸರ್ಕಾರಗಳಿಗೆ ಪರಿಹಾರವಾಗಿ ಕೊಡಲು ಕೊರತೆ ಬಿದ್ದಿರುವ 2.35 ಲಕ್ಷ ಕೋಟಿ ರೂ.ಗಳನ್ನು ಆರ್‌ಬಿಐನಿಂದ ರೆಪೋ ದರದಲ್ಲಿ ಸಾಲ ಮಾಡಿದರೆ, ಅದರಿಂದ ಮೀಸಲು ಹಣದ ಮೊತ್ತವೂ, ಅಂದರೆ ಅರ್ಥವ್ಯವಸ್ಥೆಯಲ್ಲಿನ ಕರೆನ್ಸಿಯೇನೂ ಅಷ್ಟರ ಮಟ್ಟಿಗೆ ಹೆಚ್ಚುವುದಿಲ್ಲ.

ಒಂದು ಸರಳ ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ಜನರ ಬಳಿ ನಗದು ರೂಪದ ಹಣವಿಲ್ಲ. ಅವರು ತಮ್ಮ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದಾರೆ ಎಂದು ಭಾವಿಸೋಣ. ಈಗ, ಕೇಂದ್ರವು ರಾಜ್ಯ ಸರ್ಕಾರಗಳಿಗೆ 100 ರೂ.ಗಳನ್ನು ಜಿಎಸ್‌ಟಿ ಪರಿಹಾರವಾಗಿ ನೀಡಿದರೆ, ಆ ಎಲ್ಲ ಹಣವೂ ಠೇವಣಿಯಾಗಿ ಬ್ಯಾಂಕುಗಳಿಗೆ ಬರುತ್ತದೆ. ಆಗ, ಬ್ಯಾಂಕುಗಳಿಗೆ ಒದಗಿದ ಈ ಹೆಚ್ಚುವರಿ ಸಂಪನ್ಮೂಲವನ್ನು ಬ್ಯಾಂಕ್‌ಗಳು ಸಾಲ ಕೊಡುತ್ತವೆ. ಕರೆನ್ಸಿ ವ್ಯವಸ್ಥೆಯ ನಿಯಮಗಳ ಪ್ರಕಾರ, ನಗದು ಮೀಸಲು ಅನುಪಾತವು ಶೇ.10

ಪುಟ 14 ನೋಡಿ

ಜಿಎಸ್‌ಟಿ: ಸಂಭ್ರಮದ ಉದ್ಘಾಟನೆ



ಒಂದು ವರ್ಷದ ನಂತರ–ಚಿತ್ರ ಕೃಪೆ: ನ್ಯೂಸ್ ಲಾಂಡ್ರಿ



ಜಿಎಸ್‌ಟಿ ಪರಿಹಾರ ನೀಡಿಕೆ ಬಗ್ಗೆ ಕೇಂದ್ರದ ವಿಲಕ್ಷಣ ನಿಲುವು

ಪುಟ 13 ರಿಂದ

ರಕ್ಷಿದೆ ಎಂದುಕೊಳ್ಳೋಣ. ಆಗ ಬ್ಯಾಂಕ್‌ಗಳು ಪಡೆದ ಠೇವಣಿಗಳ ಮೊತ್ತದ ಶೇ.10ರಷ್ಟು ನಗದು ಹಣವನ್ನು ರಿಸರ್ವ್ ಬ್ಯಾಂಕ್‌ನಲ್ಲಿ ಇಡಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು 300 ರೂ ಗಳ "ಯೋಗ್ಯ" ಬೇಡಿಕೆ ಇದೆ ಎಂದು ಭಾವಿಸೋಣ. 300 ರೂಪಾಯಿಗಳನ್ನು ಬ್ಯಾಂಕುಗಳು ಸಾಲವಾಗಿ ನೀಡುತ್ತವೆ. ಈ ಕ್ರಮದ ಒಂದು ಅಗತ್ಯವಾಗಿ ಬ್ಯಾಂಕ್‌ಗಳು 40ರೂಗಳನ್ನು ನಗದು ರೂಪದಲ್ಲಿ ಹೊಂದಿರಬೇಕು. ಹಾಗಾಗಿ, ಹೊಸ ಠೇವಣಿಯಾಗಿ ಪಡೆದ 100 ರೂಗಳಲ್ಲಿ ಉಳಿದ 60 ರುಪಾಯಿಗಳನ್ನು ಬ್ಯಾಂಕ್‌ಗಳು ಆರ್‌ಬಿಐನಿಂದ ಸರ್ಕಾರಿ ಬಾಂಡ್‌ಗಳನ್ನು (ಭದ್ರತಾ ಪತ್ರಗಳನ್ನು) ಖರೀದಿಸಲು ಬಳಸುತ್ತವೆ. ಹೀಗಾಗಿ, ಆರ್‌ಬಿಐ ನಿಂದ ಕೇಂದ್ರ ಸರ್ಕಾರವು 100 ರೂ.ಸಾಲ ಪಡೆದರೂ, ಕರೆನ್ಸಿ ವ್ಯವಸ್ಥೆಯಲ್ಲಿ ಮೀಸಲು ಹಣದ ಪ್ರಮಾಣವು ಕೇವಲ 40 ರೂಪಾಯಿಗಳಷ್ಟು ಮಾತ್ರ ಏರಿಕೆಯಾಗುತ್ತದೆ.

ಕೇಂದ್ರ ಸರ್ಕಾರವು ಆರ್‌ಬಿಐನಿಂದ ರೆಪೊ ದರದಲ್ಲಿ ಸಾಲ ಪಡೆಯುವುದರಲ್ಲಿ ಇನ್ನೂ ಎರಡು ಅನುಕೂಲಗಳಿವೆ. ಮೊದಲನೆಯದಾಗಿ, ಹೆಚ್ಚುವರಿ ಸಂಪನ್ಮೂಲಗಳನ್ನು ಬ್ಯಾಂಕುಗಳ ಕೈಯಲ್ಲಿ ಇಡುವುದರಿಂದ, ಬ್ಯಾಂಕ್‌ಗಳು ತಮ್ಮ ಗಿರಾಕಿಗಳಿಗೆ ಸಾಲ ಕೊಡುವ ಉದ್ದೇಶಕ್ಕಾಗಿ ಆರ್‌ಬಿಐನಿಂದ ಸಾಲ ಪಡೆಯುವ ಅವಶ್ಯಕತೆ ಇರುವುದಿಲ್ಲ. ಹೀಗಾಗಿ, ಬ್ಯಾಂಕ್ ಸಾಲಗಳು ವಿಸ್ತರಿಸುತ್ತವೆ. ಎರಡನೆಯದಾಗಿ, ಅರ್ಥವ್ಯವಸ್ಥೆಯಲ್ಲಿ ಹಣದ ಲಭ್ಯತೆ ಹೆಚ್ಚುವುದರಿಂದ ಬ್ಯಾಂಕ್‌ಗಳು ವಿಧಿಸುವ ಬಡ್ಡಿಯ ದರ ಇಳಿಯುತ್ತದೆ. ಭಾರತದ ಅರ್ಥವ್ಯವಸ್ಥೆಯು ಸದ್ಯದಲ್ಲಿ ಒಂದು ತೀವ್ರ ಆರ್ಥಿಕ ಹಿಂಜರಿತಕ್ಕೆ ಒಳಗಾಗಿರುವ ಸನ್ನಿವೇಶದಲ್ಲಿ ಈ ಎರಡೂ ಕ್ರಮಗಳು ಅಪೇಕ್ಷಣೀಯ ಬೆಳವಣಿಗೆಗಳು ಎಂದೇ ಪರಿಗಣಿಸಬೇಕು.

ಅಂದರೆ, ಕೇಂದ್ರ ಸರ್ಕಾರವು ರಾಜ್ಯಗಳಿಗೆ ಕೊಡಬೇಕಿರುವ ಜಿಎಸ್‌ಟಿ ಪರಿಹಾರದ ಬಾಧ್ಯತೆಯನ್ನು ಪೂರೈಸಲು ಆರ್‌ಬಿಐನಿಂದ ಸಾಲ ಪಡೆಯುವ ಕ್ರಮವು ಒಂದೇ ಕಲ್ಲಿನಿಂದ ಅನೇಕ ಹಕ್ಕಿಗಳನ್ನು ಕೊಲ್ಲುತ್ತದೆ. ಮೊದಲನೆಯದಾಗಿ, ಜಿಎಸ್‌ಟಿ ಆದಾಯದ ಕೊರತೆಯನ್ನು ಪರಿಹಾರವಾಗಿ ರಾಜ್ಯಗಳಿಗೆ ತುಂಬಿಕೊಡುವ ಏರ್ಪಾಟನ್ನು 2017ರಲ್ಲಿ ಕಾಯ್ದೆಬದ್ಧಗೊಳಿಸಿದ ಸಾಂವಿಧಾನಿಕ ಬಾಧ್ಯತೆಯನ್ನು ಕೇಂದ್ರ ಸರ್ಕಾರವು ಈಡೇರಿಸಲು ಈ ಕ್ರಮವು ನೆರವಾಗುತ್ತದೆ. ಎರಡನೆಯದಾಗಿ, ಈ ಕ್ರಮವು ರಾಜ್ಯ ಸರ್ಕಾರಗಳನ್ನು ಯಾವುದೇ ಆರ್ಥಿಕ ತೊಂದರೆಗೆ ಈಡುಮಾಡುವುದಿಲ್ಲ. ಹಾಗಾಗಿ, ಒಕ್ಕೂಟ ವ್ಯವಸ್ಥೆಯು ಬಲಗೊಳ್ಳುತ್ತದೆ. ಮೂರನೆಯದಾಗಿ, ಕಡಿಮೆ ಬಡ್ಡಿ ದರ ಮತ್ತು ಹಣದ ಲಭ್ಯತೆ ಸುಗಮಗೊಳ್ಳಲು ಪ್ರೋತ್ಸಾಹ ಸಿಗುವುದರಿಂದ ಆರ್ಥಿಕ ಹಿಂಜರಿತವನ್ನು ಪರಿಣಾಮಕಾರಿಯಾಗಿ ನಿವಾರಿಸಲು ಸಾಧ್ಯವಾಗುತ್ತದೆ. ಆದರೆ, ಅರ್ಥಶಾಸ್ತ್ರದ ಬಗ್ಗೆ ಸೀಮಿತ ತಿಳಿವಳಿಕೆ ಹೊಂದಿರುವ ಮತ್ತು ರಾಜ್ಯಗಳ ಬಗ್ಗೆ ಸಹಾನುಭೂತಿ ಇನ್ನೂ ಹೆಚ್ಚು ಸೀಮಿತವಾಗಿರುವ ಮೋದಿ ಸರಕಾರವು ಈ ಅಂಶಗಳನ್ನು ಸ್ಪಷ್ಟವಾಗಿ ನೋಡಲಾರದು.

ಜಿಎಸ್‌ಟಿ ಪರಿಹಾರದ ಕೊರತೆಯುನ್ನು ಪರಿಹರಿಸಿಕೊಳ್ಳಲು ಸಾಲ ಪಡೆಯಬೇಕೆಂಬ ಕೇಂದ್ರದ ಪ್ರಸ್ತಾವನೆಯನ್ನು, ಬಿಜೆಪಿ ಆಡಳಿತವಿರುವ ಎರಡು ರಾಜ್ಯಗಳನ್ನು ಹೊರತುಪಡಿಸಿ, ಎಲ್ಲ ಪ್ರಮುಖ ರಾಜ್ಯಗಳೂ ತಿರಸ್ಕರಿಸಿವೆ. ಕೇರಳ ಸರ್ಕಾರವಂತೂ ಈ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸಿದೆ. ನಮ್ಮ ರಾಜಕೀಯ ರಚನೆಯ ಒಕ್ಕೂಟ ವ್ಯವಸ್ಥೆಯನ್ನು ಸಂರಕ್ಷಿಸಬೇಕು ಎಂದಾದರೆ, ರಾಜ್ಯಗಳಿಗೆ ಸಲ್ಲಬೇಕಾದ ಹಣವನ್ನು ತೆರುವುದು ಅತ್ಯಗತ್ಯ ಮತ್ತು ಅನಿವಾರ್ಯ ಕ್ರಮವಾಗುತ್ತದೆ.



ಕೇರಳದ ಶಾಲಾಶಿಕ್ಷಣದಲ್ಲಿ ಮತ್ತೊಂದು ಸಾಧನೆ 34 'ಉತ್ಕೃಷ್ಟತೆಯ ಕೇಂದ್ರ' ಕಟ್ಟಡಗಳ ಉದ್ಘಾಟನೆ

ಸಾರ್ವಜನಿಕ ಶಿಕ್ಷಣದಲ್ಲಿ ಮತ್ತು ಸಾರ್ವಜನಿಕ ಆರೋಗ್ಯದ ಕ್ಷೇತ್ರದಲ್ಲಿ ದೇಶದಲ್ಲಿ ಆಗಲೇ ಮೊದಲ ಸ್ಥಾನದಲ್ಲಿರುವ ಕೇರಳದ ಎಡ ನೇತೃತ್ವದ ಸರಕಾರ ಇಷ್ಟಕ್ಕೇ ನಿಲ್ಲದೆ ಇದನ್ನು ಮತ್ತಷ್ಟು ಬಲಪಡಿಸಲು ಪ್ರಯತ್ನಿಸುತ್ತಲೇ ಇದೆ. ವಿಶೇಷವಾಗಿ ಕೋವಿಡ್ ವಿರುದ್ಧ ಸಮರ ಇದಕ್ಕೆ ಇನ್ನಷ್ಟು ಒತ್ತಾಸೆ ನೀಡಿದೆ.

ಈ ನಿಟ್ಟಿನಲ್ಲಿ ಎಲ್‌ಡಿಎಫ್ ಸರಕಾರದ ಇನ್ನೊಂದು ಸಾಧನೆ ಎಂದರೆ ಸಪ್ಟಂಬರ್ 9ರಂದು ರಾಜ್ಯದ ವಿವಿಧ ಚುನಾವಣಾ ಕ್ಷೇತ್ರಗಳಲ್ಲಿ 34 ಹೊಸ ಶಾಲಾ ಕಟ್ಟಡಗಳ ಉದ್ಘಾಟನೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದನ್ನು ನೆರವೇರಿಸಿದ್ದಾರೆ. ಇದು ಎಲ್‌ಡಿಎಫ್ ಸರಕಾರದ ಸಾರ್ವಜನಿಕ ಶಿಕ್ಷಣ ಪುನಶ್ಚೇತನ ಮಿಷನ್' ಮತ್ತು ಕೇರಳ ಮೂಲರಚನೆ ಮತ್ತು ಶಿಕ್ಷಣ ತಂತ್ರಜ್ಞಾನ (ಕೆಐಟಿಯ) ಜಂಟಿಯಾಗಿ ಜಾರಿಗೊಳಿಸುತ್ತಿರುವ 'ಉತ್ಕೃಷ್ಟತೆಯ ಕೇಂದ್ರಗಳು' ಪ್ರಾಜೆಕ್ಟಿನ ಭಾಗ.

ಕಾರ್ಪೊರೇಟ್‌ಗಳು ನಡೆಸುವ ಖಾಸಗಿ ಶಾಲಾ ಕಟ್ಟಡಗಳಿಗಿಂತಲೂ ಇವು ಉತ್ತಮ ದರ್ಜೆಯ ಕಟ್ಟಡಗಳು ನಾಡಿನ ಗಮನವನ್ನು ಸೆಳೆಯುತ್ತಿವೆ. ಕೇರಳ ಶಿಕ್ಷಣಕ್ಕೆ ಹಾಗೂ ಆರೋಗ್ಯಕ್ಕೆ ಗಮನ ಕೊಟ್ಟಿರುವುದು ಇವತ್ತು, ನಿನ್ನೆಯ ಕಥೆಯಲ್ಲ. ಅದಕ್ಕೆ ಹಲವು ದಶಕಗಳ ಇತಿಹಾಸವಿದೆ. ಘೋಷಿಸಿದ ಯೋಜನೆಗಳನ್ನು ಬದ್ಧತೆಯಿಂದ ಕಾರ್ಯಗತಗೊಳಿಸುವ ಸಚಿವ ಸಂಪುಟ ಅಲ್ಲಿದೆ. ಅದಕ್ಕಾಗಿಯೇ ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಕೇರಳದ ಅಭಿವೃದ್ಧಿ ಭಾರತಕ್ಕೆ ಸ್ಫೂರ್ತಿ ಮತ್ತು ಭರವಸೆಯಾಗಿ ಕಾಣುತ್ತದೆ. ಅನೇಕ ರಾಜ್ಯಗಳು ಶಾಲಾ– ಕಾಲೇಜು ತೆರೆಯಲು ಹಾಗೂ ಅಭಿವೃದ್ಧಿ ಕೆಲಸ ಮಾಡಲು ಕೊರೊನಾ ಕಾರಣವನ್ನು ಹೇಳಿ ಮುಂದೂಡುತ್ತಿರುವುದನ್ನು ನೋಡುತ್ತಿದ್ದೇವೆ. ಹಿಂದೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಮುಚ್ಚಿದ್ದ ಸರಕಾರಿ ಶಾಲೆಗಳನ್ನು ಪುನ: ತೆರೆಯುವ ಮೂಲಕ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಅತ್ಯಾಧುನಿಕ ಸೌಲಭ್ಯಗಳ ಮೂಲಕ ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ಬಲಪಡಿಸುತ್ತಿದೆ.

100 ದಿನಗಳು 100 ಪ್ರಾಜೆಕ್ಟ್‌ಗಳು

ಕೊವಿಡ್ ವಿರುದ್ಧ ಸಮರದಲ್ಲಿ ರಾಜ್ಯದ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ತೊಂದರೆಯಾಗದಂತೆ ಓಣಂ ದಿನದಂದು ಮುಂದಿನ 100 ದಿನಗಳಿಗೆ 100 ಪ್ರಾಜೆಕ್ಟ್ ಗಳನ್ನು ಕೇರಳದ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.

ಇದರ ಭಾಗವಾಗಿಯೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಸಂಬಂಧಪಟ್ಟಂತೆ– ಎಲ್ಲ ಕೆಳ ಪ್ರಾಥಮಿಕ ಶಾಲೆಗಳನ್ನು ಹೈಟೆಕ್ ಶಾಲೆಗಳಾಗಿ ಪರಿವರ್ತಿಸುವ ಕಾರ್ಯಕ್ರಮ ಪ್ರಗತಿಯಲ್ಲಿದ್ದು, 11,400 ಶಾಲೆಗಳಲ್ಲಿ ಕಂಪ್ಯೂಟ್ರ್ ಲ್ಯಾಬ್‌ಗಳನ್ನು ರಚಿಸಲಾಗುವುದುಮುಂದಿನ 100ದಿನಗಳಲ್ಲಿ 5ಲಕ್ಷ ಶಾಲಾ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆಯ ವಿದ್ಯಾಶ್ರೀ ಪ್ರಾಜೆಕ್ಟನ್ನು ಕೆಎಸ್‌ಎಫ್‌ಇ ಮತ್ತು ಕುಡುಂಬಶ್ರೀ ಆಶ್ರಯದಲ್ಲಿ ಆರಂಭಿಸಲಾಗುವುದು. 18 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಿರುವ 10 ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ) ಗಳನ್ನು ಉದ್ಘಾಟಿಸಲಾಗುವುದು.

ಸರಕಾರೀ ಮತ್ತು ಅನುದಾನಿತ ಕಾಲೇಜುಗಳಲ್ಲಿ 150 ಹೊಸ ಕೋರ್ಸ್‌ಗಳನ್ನು ಆರಂಭಿಸುವ ಯೋಜನೆ ಹಾಕಿಕೊಂಡಿದ್ದು ಸಪ್ಟಂಬರ್ 15ರೊಳಗೆ ಇವುಗಳಲ್ಲಿ 100 ಕೋರ್ಸ್ ಗಳ ಪ್ರಕಟಣೆ ಮಾಡಲಾಗುವುದು. 126 ಕೋಟಿ ರೂ.ಗಳ ಹೂಡಿಕೆ ಮಾಡಿ 32 ಉನ್ನತ ಶಿಕ್ಷಣ ಸಮಸ್ಥೆಗಳಿಗೆ ಕಟ್ಟಡಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು.

ಮುಂದಿನ 100 ದಿನಗಳಲ್ಲಿ ಕಾಲೇಜುಗಳು ಮತ್ತು ಹೈಯರ್ ಸೆಕೆಂಡರಿ ವಲಯಗಳಲ್ಲಿ 1000 ಹುದ್ದೆಗಳನ್ನು ನಿರ್ಮಿಸಲಾಗುವುದು.

ಕೇರಳದ ಯಶಸ್ಸಿಗೆ ಕಾರಣವಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಯೋಜನೆಗಳನ್ನು ಕೂಡ ಈ 100 ಪ್ರಾಜೆಕ್ಟ್‌ಗಳಲ್ಲಿ ಹಾಕಿಕೊಳ್ಳಲಾಗಿದೆ. ಇದುವರೆಗೆ 9768 ಆರೋಗ್ಯ ಕಾರ್ಯಕರ್ತರನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ನೇಮಕ ಮಾಡಿಕೊಳ್ಳಲಾಗಿತ್ತು, ಅಗತ್ಯವಿದ್ದರೆ ಈ 100 ದಿನಗಳಲ್ಲಿ ಇನ್ನಷ್ಟು ನೇಮಕಾತಿಗಳನ್ನು ಮಾಡಲಾಗುವುದು. ಮೊದಲ ಹಂತದ ಕೊವಿಡ್ ಶುಶ್ರೂಷಾ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಲಾಗುವುದು, ಸೋಂಕು ತಪಾಸಣೆಯ ಸಂಖ್ಯೆಯನ್ನು ದಿನಕ್ಕೆ 50,000ಕ್ಕೆ ಹೆಚ್ಚಿಸಲಾಗುವುದು.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸುಸಜ್ಜಿತ ಕುಟುಂಬ ಆರೋಗ್ಯ ಕೇಂದ್ರಗಳ ದರ್ಜೆಗೆ ಏರಿಸುವ ಕಾರ್ಯಕ್ರಮದಲ್ಲಿ ಇದುವರೆಗೆ 386 ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಇದಕ್ಕೆ ಇನ್ನೂ 153 ಹೊಸ ಕುಟುಂ ಆರೋಗ್ಯ ಕೇಂದ್ರಗಳ ಉದ್ಘಾಟನೆ ಮಾಡಲಾಗುವುದು.

100 ದಿನಗಳು 100 ಪ್ರಾಜೆಕ್ಟ್‌ಗಳು ಕಾರ್ಯಕ್ರಮದ ಇತರ ಮುಖ್ಯಾಂಶಗಳು ಹೀಗಿವೆ:

* ಕೊವಿಡ್ ವಿರುದ್ಧ ಸಮರದ ಭಾಗವಾಗಿ ಆರಂಭ ದಿಂದಲೇ ಕೈಗೊಂಡಿದ್ದ ಆಹಾರ ಭದ್ರತಾ ಕಾರ್ಯಕ್ರಮವನ್ನು ಮುಂದಿನ ನಾಲ್ಕು ತಿಂಗಳು ಮುಂದುವರೆಸಲಾಗುತ್ತದೆ. ರೇಷನ್ ಅಂಗಡಿಗಳ ಮೂಲಕ 88ಲಕ್ಷ ಕಾರ್ಡುದಾರರಿಗೆ ಕಿರಾಣಿ ಸಾಮಗ್ರಿಗಳ ಕಿಟ್‌ಗಳನ್ನು ನೇರವಾಗಿ ಹಂಚಲಾಗುವುದು.

* ಮುಖ್ಯಮಂತ್ರಿಗಳ ವಿಪತ್ತು ಪರಿಹಾರ ನಿಧಿಯಿಂದ 961 ಕೋಟಿ ರೂ.ಗಳನ್ನು ರಾಜ್ಯದಲ್ಲಿ 5000 ಗ್ರಾಮೀಣ ರಸ್ತೆಗಳನ್ನು ಸರಿಪಡಿಸಲು ಒದಗಿಸಲಾಗುವುದು. ಈಗಾಗಲೇ 189 ಪಿಡಬ್ಲ್ಯುಡಿ ರಸ್ತೆಗಳ ಕಾಮಗಾರಿ ಮುಗಿದಿದ್ದು ಅವನ್ನು ಸಾಗಾಣಿಕೆಗೆ ತೆರೆಯಲಾಗುವುದು. ಇನ್ನೂ 158 ಕಿ.ಮೀ. ರಸ್ತೆಗಳನ್ನು ಮತ್ತು 21 ಸೇತುವೆಗಳನ್ನು ನವಂಬರ್ ವೇಳೆಗೆ ಉದ್ಘಾಟಿಸಲಾಗುವದು.

* ಮುಖ್ಯಮಂತ್ರಿಗಳು ಕೃಷಿ, ನೀರು, ವಿದ್ಯುತ್, ಕ್ರೀಡೆ ಮತ್ತು ಸಂಸ್ಕೃತಿ, ಕುಡುಂಬಶ್ರೀ, ಸ್ಥಳೀಯ ಸ್ವಯಮಾಡಳಿತ ಮತ್ತು ನಾರು ಮತ್ತು ಗೇರುಬೀಜದಂತಹ ಪಾರಂಪರಿಕ ವಲಯಗಳಿಗೂ ಹಲವು ಪ್ರಕಟಣೆಗಳನ್ನು ಮಾಡಿದರು.

"ಜನಗಳ ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ಕೊವಿಡ್‌ನಿಂದ ನಿಧಾನಗೊಂಡಿರುವ ಯೋಜನೆಗಳನ್ನು ತ್ವರಿತಗೊಳಿಸಲಾಗುವದು. 100ದಿನಗಳ 100 ಪ್ರಾಜೆಕ್ಟ್‌ಗಳು ಅರ್ಥವ್ಯವಸ್ಥೆಗೆ ಮತ್ತು ಸಮಾಜಕ್ಕೆ ಹೊಸ ಹುರುಪು ತುಂಬುತ್ತವೆ. ಜನಸಾಮಾನ್ಯರಿಗೆ ನೇರವಾಗಿ ಪರಿಹಾರವನ್ನು ಒದಗಿಸಲಾಗವುದು ಎಂದು ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗ ನೀಡಿರುವ ವಚನಗಳ ಈಡೇರಿಕೆ ಇದು" ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಕೊವಿಡ್ ವಿರುದ್ಧ ಸಮರದಲ್ಲಿ ಈಗಲೂ ಮುಂದೆ

ಲಾಕ್ ಡೌನ್ ತೆರವು ಆಗಲಾರಾಭಿಸಿದಂದಿನಿಂದ ಕೇರಳದಲ್ಲೂ ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದರೂ ಈಗಲೂ ಈ ಸೋಂಕಿನ ವಿರುದ್ಧ ಸಮರದ ಎಲ್ಲ ಸೂಚ್ಯಂಕಗಳಲ್ಲೂ ಕೇರಳದ ಸಾಧನೆ ಬೇರೆಲ್ಲ ರಾಜ್ಯಗಳಿಗಿಂತ ಉತ್ತಮವಾಗಿಯೇ ಇದೆ

ಕೇರಳ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ಮತ್ತು ವಯಸ್ಸಾದವರ ಪ್ರಮಾಣ ಕ್ಯಾನ್ಸರ್, ಮಧುಮೇಹ ಮುಂತಾದ ಕಾಯಿಲೆಗಳ ಪ್ರಮಾಣ ಹೆಚ್ಚಿರುವ ರಾಜ್ಯವಾದರೂ ಸೋಂಕಿತರ ಪ್ರಮಾಣ ಒಂದು ದಶಲಕ್ಷದಲ್ಲಿ 2168. ರಾಷ್ಟ್ರೀಯ ಸರಾಸರಿ 2731ಕ್ಕಿಂತ ಕಡಿಮೆ.


ದಕ್ಷಿಣದ ರಾಜ್ಯಗಳಲ್ಲಿ ಆಂಧ್ರಪ್ರದೇಶದಲ್ಲಿ ಇದು ಅತಿ ಹೆಚ್ಚು 8479, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಸುಮಾರು 5000.

ಕೇರಳದಲ್ಲಿ ಈಗಲೂ ಸೋಂಕಿತರ ಆಂಟಿಜೆನ್ ಪರೀಕ್ಷೆ ನಕಾರಾತ್ಮಕವಾದ ಮೇಲೆಯೆ ಅವರನ್ನು ಆಸ್ಪತ್ರೆಯಿಂದ ಕಳಿಸುತ್ತಿರುವುದು, ಆದರೆ ಕರ್ನಾಟಕವೂ ಸೇರಿದಂತೆ ಇತರ ರಾಜ್ಯಗಳಲ್ಲಿ ರೋಗಲಕ್ಷಣಗಳು ಇಲ್ಲದಿದ್ದರೆ 10 ದಿನಗಳ ನಂತರ ಅವರನ್ನು ಡಿಸ್ಚಾರ್ಜ್ ಮಾಡಲಾಗುತ್ತಿದೆ.

ಮರಣದರವೂ ಕೇರಳದಲ್ಲಿಯೇ ಅತಿ ಕಡಿಮೆ, ಪ್ರತಿದಶಲಕ್ಷ ಜನಸಂಖ್ಯೆಗೆ 8.4 ಸಾವುಗಳು. ದೇಶದ ಸರಾಸರಿ 48, ತಮಿಳುನಾಡಿನಲ್ಲಿ ಇದು ಕೇರಳದ 11 ಪಟ್ಟಾದರೆ, ಕರ್ನಾಟಕದಲ್ಲಿ 12 ಪಟ್ಟು.

ಸೋಂಕಿತರಲ್ಲಿ ಸಾವುಗಳ ಪ್ರಮಾಣವೂ ಕೇರಳದಲ್ಲಿ ಪ್ರತಿ 100 ಸೋಂಕಿತರಲ್ಲಿ 4, ತಮಿಳುನಾಡಿನಲ್ಲಿ 17, ಮತ್ತು ಕರ್ನಾಟಕದಲ್ಲಿ 16, ಆಂಧ್ರಪ್ರದೇಶದಲ್ಲಿ 9. ರಾಷ್ಟ್ರೀಯ ಸರಾಸರಿಯೂ 17.

ಅಫ್ಘಾನಿಸ್ತಾನದಲ್ಲಿ ಖಾಸಗೀ ಮಿಲಿಟರಿ ಕಂಪನಿಗಳ ದರ್ಬಾರು





ನಾಗರಾಜ ನಂಜುಂಡಯ್ಯ

ಅಮೆರಿಕ ಅಫ್ಘಾನಿಸ್ತಾನದಲ್ಲಿ ತನ್ನ ಮಿಲಿಟರಿಯನ್ನು ನಿಜವಾಗಿಯೂ ಕಡಿಮೆ ಮಾಡಿ ಪೂರ್ಣವಾಗಿ ಹಿಂತೆಗೆಯುವುದೇ? ಅಫ್ಘಾನರು ಯಾವುದೇ ವಿದೇಶೀ ಹಸ್ತಕ್ಷೇಪವಿಲ್ಲದೆ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡುವುದೇ? ಅಫ್ಘಾನ್ ವಾಸ್ತವ ಗಮನಿಸಿದರೆ ಹಾಗೇನೂ ಕಾಣುತ್ತಿಲ್ಲ. ಯು.ಎಸ್ ಮಿಲಿಟರಿ ಸಿಬ್ಬಂದಿಯ ಕಡಿತವಾದಂತೆ ಅಫ್ಘಾನಿಸ್ತಾನದಲ್ಲಿ ಅಮೆರಿಕನ್ ಖಾಸಗಿ ಮಿಲಿಟರಿ ಕಂಪನಿಗಳ ದರ್ಬಾರು ಹೆಚ್ಚುತ್ತಿರುವಂತೆ ಕಾಣುತ್ತಿದೆ. ಟ್ರಂಪ್ ಆಡಳಿತದ ಅವಧಿಯಲ್ಲಿ, ಅಫ್ಘಾನಿಸ್ತಾನದಲ್ಲಿ ಖಾಸಗಿ ಭದ್ರತಾ ಗುತ್ತಿಗೆದಾರರ ಬಳಕೆಯು ಶೇ.65 ಕ್ಕಿಂತ ಹೆಚ್ಚಾಗಿದೆ, 6000 ಕ್ಕೂ ಹೆಚ್ಚು ಖಾಸಗಿ ಬಾಡಿಗೆ ಸೈನಿಕರು ಅಫ್ಘಾನಿಸ್ತಾನದಲ್ಲಿ ನೆಲೆಗೊಂಡಿದ್ದಾರೆ. ಹಿಂದೆ ಇರಾಕ್ ನಲ್ಲಿ ದೊಡ್ಡ ಪ್ರಮಾಣದಲ್ಲಿ ನಾಗರಿಕರ ಕಗ್ಗೊಲೆಗಳಲ್ಲಿ ದೊಡ್ಡ ಪಾತ್ರ ವಹಿಸಿದ ಬ್ಲ್ಯಾಕ್ ವಾಟರ್ ಸಂಸ್ಥಾಪಕ ಎರಿಕ್ ಪ್ರಿನ್ಸ್, ಅಫ್ಘಾನಿಸ್ತಾನದಲ್ಲಿ ಯುದ್ಧ ಮತ್ತು ವಾಯು ಕಾರ್ಯಾಚರಣೆಯನ್ನು ಸಹ ಪೂರ್ಣವಾಗಿ ತನ್ನ ಕಂಪನಿಗೆ ಗುತ್ತಿಗೆ ಕೊಡಿ ಎಂದು ಯುಎಸ್ ಸರ್ಕಾರಕ್ಕೆ ಯೋಜನೆಯನ್ನು ಮುಂದಿಟ್ಟಿದ್ದಾನೆ. ಈತ ಪತ್ರಿಕೆಯೊಂದರಲ್ಲಿ ಬರೆದ ಲೇಖನವೊಂದರಲ್ಲಿ ಈಸ್ಟ್ ಇಂಡಿಯಾ ಕಂಪನಿ ತನ್ನ ಸ್ಫೂರ್ತಿ ಮತ್ತು ಆದರ್ಶ ಎಂದಿದ್ದಾನೆ. ಕೇವಲ 2 ಸಾವಿರ ಬ್ರಿಟಿಶ್ ಅಧಿಕಾರಿಗಳನ್ನು ಇಟ್ಟುಕೊಂಡು ಇಂಡಿಯಾ ದಂತಹ ದೊಡ್ಡ ವಸಾಹತುವನ್ನು 18–19ನೇ ಶತಮಾನದಲ್ಲಿ ನಿಭಾಯಿಸುವುದು ಸಾಧ್ಯವಿದ್ದರೆ, ಇಂದಿನ ಉಚ್ಚ ತಂತ್ರಜ್ಞಾನ ಮತ್ತು ಉತ್ಕೃಷ್ಟ ದೂರ ಸಂಪರ್ಕ ಇರುವಾಗ ಅಫ್ಘಾನಿಸ್ತಾನದಂತಹ ದೇಶವನ್ನು ಪೂರ್ಣವಾಗಿ ನಡೆಸುವುದು ಸಾಧ್ಯವಿಲ್ಲವೇ ಎಂದು ಹೇಳಿದ್ದಾನೆ ಎಂಬುದು ಗಮನಾರ್ಹ. ಯು.ಎಸ್ ಸಾಮ್ರಾಜ್ಯಶಾಹಿ ತನ್ನ ಪರವಾಗಿ ಖಾಸಗಿ ಕಾರ್ಪೊರೆಟುಗಳು ಕಡಲುದರೋಡೆ ಮಾಡುವುದು ಮತ್ತು ಇಡೀ ದೇಶಗಳನ್ನು ವಸಾಹತುವಾಗಿ ನಿರ್ವಹಿಸುವ ಬಂಡವಾಳಶಾಹಿಯ ಮುಂದಿನ ಹಂತಕ್ಕೆ ಜಗತ್ತನ್ನು ಎಳೆದೊಯ್ಯಲು ಕಾತುರವಾಗಿದೆ.

ಯುಎಸ್ ಕಳೆದ 19 ವರ್ಷಗಳಿಂದ ತಾಲಿಬಾನ್ ವಿರುದ್ಧ ಯುದ್ಧದಲ್ಲಿ ತೊಡಗಿದೆ. ಇದಕ್ಕಾಗಿ 2 ಲಕ್ಷ ಕೋಟಿ ಡಾಲರ್ ಗಿಂತ ಹೆಚ್ಚು ಹಣ ಖರ್ಚು ಮಾಡಿದೆ ಎಂದು ಅಂದಾಜಿಸಲಾಗಿದೆ. ಯುದ್ಧ ಪೀಡಿತ ಅಫ್ಘಾನಿಸ್ತಾನಕ್ಕೆ ಶಾಂತಿಯನ್ನು ಮರಳಿ ತರುವಲ್ಲಿ, ತಾಲಿಬಾನ್ ಹೊಸ ಮಿತ್ರ ಎಂದು ಅಧ್ಯಕ್ಷ ಟಂಪ್ ನಂಬಿದ್ದಾರೆ. ಅಮೆರಿಕಾ ಮತ್ತು ತಾಲಿಬಾನ್ ನಡುವೆ 2020 ರ ಫೆಬ್ರವರಿ 29 ರಂದು ಕತಾರ್ ನ ದೋಹಾದಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಮಾತುಕತೆಯಲ್ಲಿ ಅಫ್ಘಾನಿಸ್ತಾನ ಸರ್ಕಾರವನ್ನು ಉದ್ದೇಶ ಪೂರ್ವಕವಾಗಿಯೇ ಶಾಂತಿ ಪ್ರಕ್ರಿಯೆಯಿಂದ ದೂರವಿಡಲಾಗಿತ್ತು. ಯುಎಸ್ ಸಮಾಲೋಚಕ ಜಲ್ಮೇ ಖಲೀಲ್ಜಾದ್ ಮತ್ತು ತಾಲಿಬಾನ್ ನ ಸ್ಥಾಪಕ ನಾಯಕ ಮುಲ್ಲಾ ಅಬ್ದುಲ್ ಘನಿ ಬರದಾರ್ ನಡುವೆ ಒಂದು ವರ್ಷದ ಕಾಲ ನಡೆದ ಸುದೀರ್ಘ ಮಾತುಕತೆಯ ನಂತರ ಈ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆದರೆ ಈ ಒಪ್ಪಂದದ ಪಾಲನೆಯಾಗಿ ಶಾಂತಿ ಸ್ಥಾಪನೆಯಾಗುತ್ತಿದೆಯೇ? ಅಮೆರಿಕ ಅಫ್ಘಾನಿಸ್ತಾನದಲ್ಲಿ ತನ್ನ ಮಿಲಿಟರಿಯನ್ನು ನಿಜವಾಗಿಯೂ ಕಡಿಮೆ ಮಾಡಿ ಪೂರ್ಣವಾಗಿ ಹಿಂತೆಗೆಯುವುದೇ? ಅಫ್ಘಾನರು ಯಾವುದೇ ವಿದೇಶೀ ಹಸ್ತಕ್ಷೇಪವಿಲ್ಲದೆ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡುವುದೇ? ಅಫ್ಘಾನ್ ವಾಸ್ತವ ಗಮನಿಸಿದರೆ ಹಾಗೇನೂ ಕಾಣುತ್ತಿಲ್ಲ. ಯು. ಎಸ್ ಮಿಲಿಟರಿ ಸಿಬ್ಬಂದಿಯ ಕಡಿತವಾದಂತೆ ಅಫ್ಘಾನಿಸ್ತಾನದಲ್ಲಿ ಖಾಸಗಿ ಮಿಲಿಟರಿ ಕಂಪನಿಗಳ ದರ್ಬಾರು ಹೆಚ್ಚುತ್ತಿರುವಂತೆ ಕಾಣುತ್ತಿದೆ.

ಆಗಸ್ಟ್ ಅಂತ್ಯದಲ್ಲಿ ತಾಲಿಬಾನಿನ ಒಂದು ಬಣವು ಅಮೆರಿಕದ ದೊಡ್ಡ ಮಿಲಿಟರಿ ನೆಲೆ ಮತ್ತು ದಕ್ಷಿಣ ಅಫ್ಘಾನಿಸ್ತಾನ ದ ಜಂಟಿ ಯುಎಸ್–ಅಫ್ಘಾನ್ ವಾಯು ನೆಲೆಯಾದ ಕ್ಯಾಂಪ್ ಡ್ವೈರ್ ಮೇಲೆ ಸುಮಾರು ಒಂದು ಡಜನ್ ರಾಕೆಟ್ ಗಳನ್ನು ಹಾರಿಸಿದಾಗ ಟ್ರಂಪ್ ತಾಲಿಬಾನ್ ಮೇಲೆ ಇಟ್ಟುಕೊಂಡಿದ್ದ ಭರವಸೆಗಳು ನಾಶವಾಗಿವೆ. ಹಾಗೆಯೇ, ಕೆಲವು ತಿಂಗಳ ಹಿಂದೆ, ತಾಲಿಬಾನ್ ಹೋರಾಟಗಾರರ ಮೇಲೆ ವೈಮಾನಿಕ ದಾಳಿ ನಡೆಸುವ ಮೂಲಕ ಯುಎಸ್ ಶಾಂತಿ ಒಪ್ಪಂದವನ್ನು ಉಲಂಘಿಸಿತ್ತು.

ಅಮೆರಿಕನ್ ಮಿಲಿಟರಿ ಬಲ ನಿಜವಾಗಿ ತಗ್ಗುತ್ತಿದೆಯೇ?

2016 ರಲ್ಲಿ ಟ್ರಂಪ್ ಅಧ್ಯಕ್ಷರಾದಾಗ, ಅಫ್ಘಾನಿಸ್ತಾನ ದಲ್ಲಿ ಸುಮಾರು 10 ಸಾವಿರ ಯುಎಸ್ ಮಿಲಿಟರಿ ಸಿಬ್ಬಂದಿ ಇದ್ದರು. ಈ ಸಂಖ್ಯೆ 2011–12ರಲ್ಲಿನ 1 ಲಕ್ಷಕ್ಕೆ ಹೋಲಿಸಿದರೆ ಸಾಕಷ್ಟು ಪ್ರಮಾಣದಲ್ಲಿ ತಗ್ಗಿದೆ. ಆದರೀಗ ಟ್ರಂಪ್ ರ ತಾಲಿಬಾನ್ ಜೊತೆ ಶಾಂತಿ ಒಪ್ಪಂದದ ಭಾಗವಾಗಿ, ಮತ್ತಷ್ಟು ಕಡಿಮೆಯಾಗುವ ಸಂಭವ ಹೆಚ್ಚಾಗಿದೆ. 2017ರಲ್ಲಿ 10 ಸಾವಿರಕ್ಕೆ ತಗ್ಗಿಸಲಾಗಿತ್ತು. 2018 ರಲ್ಲಿ, 8,600 ಕ್ಕೆ ಇಳಿಸಲಾಯಿತು. ಈ ವರ್ಷ ಅದನ್ನು 4,000ಕ್ಕೆ ಇಳಿಸಲಾಗುವುದು ಎಂದು ಟ್ರಂಪ್ ಹೇಳಿದ್ದು ನಿಜವಾದೀತೇ ಎಂಬ ಕುರಿತು ಸಂಶಯ ಈಗ ಮೂಡಿದೆ.

ಆದರೆ, ಅಮೆರಿಕನ್ನ್ ಸಾಮ್ರಾಜ್ಯಶಾಹಿಯನ್ನು 19 ವರ್ಷದಿಂದ ಅನುಭವಿಸುತ್ತಿರುವ ಅಫ್ಘಾನರಿಗೆ ಇದರಲ್ಲಿ ನಂಬಿಕೆ ಮೂಡಿಲ್ಲ. ಇದು ಟ್ರಂಪ್ ರ ಅಧ್ಯಕ್ಷೀಯ ಚುನಾವಣೆಯ ತಂತ್ರವೆಂಬ ಅನುಮಾನ ಅಮೆರಿಕನರನ್ನೂ ಕಾಡುತ್ತಿದೆ. ವಿದೇಶಗಳಲ್ಲಿ ಮಿಲಿಟರಿ ದುಸ್ಸಾಹಸಗಳ ಕಾರಣದಿಂದ ಆಗುವ ಯುಎಸ್ ಮಿಲಿಟರಿಯ ಖರ್ಚುಗಳನ್ನು ಕಡಿಮೆ ಮಾಡಲು ತಾನು ಬದ್ದನಾಗಿದ್ದೇನೆ ಎಂದು ಅಮೆರಿಕದ ಮತದಾರರಿಗೆ ಮನವರಿಕೆ ಮಾಡಲು ಟ್ರಂಪ್ ಇಂತಹ ಘೋಷಣೆ ಮಾಡುತ್ತಿದ್ದಾರೆ. ಅಮೆರಿಕಾ ಮತ್ತು ತಾಲಿಬಾನ್ ನಡುವಿನ ದೋಹಾ ಶಾಂತಿ ಒಪ್ಪಂದ ವಾಸ್ತವದಲ್ಲಿ ಕುಂಟುತ್ತಿದ್ದರೂ ಅದು ಕೆಲಸ ಮಾಡುತ್ತಿದೆ. ಇವು ತನ್ನ ವಿದೇಶ ನೀತಿಯ ವಿಜಯ ಎಂದು ತೋರಿಸಿಕೊಳ್ಳಲೂ ಸಹ ಈ ಘೋಷಣೆ ಬೇಕಾಗಿದೆ.

ಈ ಒಪ್ಪಂದದ ಪ್ರಕಾರ ಯುಎಸ್ ಮಿಲಿಟರಿ 2021 ರ ಮಧ್ಯ ಭಾಗದಲ್ಲಿ ಅಫ್ಘಾನಿಸ್ತಾನದಿಂದ ಸಂಪೂರ್ಣವಾಗಿ ಹಿಂದೆ ಸರಿಯಬೇಕು. ಹಾಗೆಯೇ, ತಾಲಿಬಾನ್ ಸಂಪೂರ್ಣವಾಗಿ ಭಯೋತ್ಪಾದಕ ಅಲ್ ಖೈದಾದಿಂದ ತನ್ನ ಸಂಪರ್ಕವನ್ನು ಕೊನೆಗಾಣಿಸಬೇಕು. ಆದರೆ, ಎರಡು ಕಡೆಯಿಂದಲೂ ಈ ಬದ್ಧತೆಯನ್ನು ಪೂರೈಸಲಾಗುತ್ತಿಲ್ಲ. ಬದಲಿಗೆ ಘರ್ಷಣೆ ಮುಂದುವರೆದಿದೆ.

ಆದಾಗ್ಯೂ, ಅಫ್ಘಾನಿಸ್ತಾನ ಸರ್ಕಾರ 400 ತಾಲಿಬಾನ್ ಖೈದಿಗಳನ್ನು ಬಿಡುಗಡೆ ಮಾಡಿ, ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಾಧಿಸಿದೆ.. ಆದರೆ, ತಾಲಿಬಾನ್ ವಶದಲ್ಲಿರುವ ಸಾವಿರ ಅಫ್ಘಾನ್ ಸರ್ಕಾರಿ ಖೈದಿಗಳನ್ನು ಮತ್ತು ಪ್ರತಿಯಾಗಿ 5 ಸಾವಿರ ತಾಲಿಬಾನ್ ಯೋಧರನ್ನು ಬಿಡುಗಡೆ ಮಾಡಬೇಕೆಂಬ ಒಪ್ಪಂದದ ಜಾರಿ ಇನ್ನೂ ಕುಂಟುತ್ತಿದೆ.

ಅಫ್ಘಾನಿಸ್ತಾನದ ಮತ್ತು ಮಧ್ಯ ಏಷ್ಯಾದ ಪ್ರಾದೇಶೀಕ ವ್ಯೂಹಾತ್ಮಕ ಪರಿಸ್ಥಿತಿಯನ್ನು ಗಮನಿಸಿದರೆ ಅಮೆರಿಕಾವು ತನ್ನ ಮಿಲಿಟರಿ ನೆಲೆಗಳನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವ ಸಂಭವ ಕಡಿಮೆ. ತಾಲಿಬಾನ್ ಮತ್ತು ರಶ್ಯನ್ನರು ಅಫ್ಘಾನಿಸ್ತಾನವನ್ನು ನಿಯಂತ್ರಿಸಲು ಮತ್ತು ಚೀನಿಯರು ತಮ್ಮ ಮೂಲ ಸೌಕರ್ಯ ಯೋಜನೆ ಗಳನ್ನು ಅಲ್ಲಿ ಪ್ರಾರಂಭಿಸಲು ಅಮೆರಿಕ ಬಿಡುವುದಿಲ್ಲ. ಯುಎಸ್ ಸೈನಿಕರನ್ನು ಕೊಲ್ಲಲು ಅಫ್ಘಾನ್ ದಂಗೆಕೋರರಿಗೆ ರಶ್ಯಾ ಹಣವನ್ನು ನೀಡುತ್ತಿದೆ ಎಂಬ ಯುಎಸ್ ನ ಆಪಾದನೆ ಇಂತಹ ಸೂಚನೆ ನೀಡುತ್ತಿದೆ.

ಮಧ್ಯ ಏಷ್ಯಾದ ಆಯಕಟ್ಟಿನ ಪ್ರದೇಶದಲ್ಲಿ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಇರಾನ್, ರಶ್ಯಾ ಮತ್ತು ಚೀನಾ ದೇಶಗಳು ಸೇರಿಕೊಂಡಿರುವುದು ಹೆಚ್ಚು ಸ್ಪಷ್ಟವಾಗಿ ಗೋಚರಿಸಿರುವ ಈ ಸಮಯದಲ್ಲಿ ಯುಎಸ್ ಮಿಲಿಟರಿ ಸಂಪೂರ್ಣವಾಗಿ ಅಫ್ಘಾನಿಸ್ತಾನವನ್ನು ಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ, ಅಫ್ಘಾನ್ ಭದ್ರತಾ ಪಡೆಗಳನ್ನು ನಿಯಂತ್ರಿಸಲು ಮತ್ತು ತನ್ನ ಪ್ರಾಮುಖ್ಯತೆಯನ್ನು ಕಾಪಾಡಿಕೊಳ್ಳಲು



ಅಫ್ಘಾನಿಸ್ತಾನದಲ್ಲಿ ಯುಎಸ್ ಹೆಚ್ಚಾಗಿ ತನ್ನ "ಖಾಸಗಿ ಸೇನೆ" ಮತ್ತು "ಗೂಢಚಾರಿಕೆ ಸಂಗ್ರಹ ತಂತ್ರಜ್ಞಾನ" ಗಳನ್ನು ಬಳಸಿಕೊಳ್ಳುವ ಯೋಜನೆ ಹೊಂದಿದೆ. "ಯುದ್ಧ ವಿಮಾನಗಳು, ಗೂಢಚಾರಿಕೆ ವಾಯುದಾಳಿ ನಿಯಂತ್ರಣ ಮತ್ತು ವಿಶೇಷ ಕಮಾಂಡೊ ಪಡೆಗಳ ಕೇಂದ್ರವಾಗಿರುವ" ಎರಡು–ಮೂರು ನೆಲೆಗಳನ್ನು ಮಾತ್ರ ಯು.ಎಸ್ ಮಿಲಿಟರಿ ನೇರವಾಗಿ ನಿರ್ವಹಿಸುವ ಯೋಜನೆ ಇದೆ ಎಂದು ಬ್ರೂಕಿಂಗ್ಸ್ ಇನ್ಸ್ಟಿಟ್ಯೂಟ್ ಹೇಳಿದೆ. ಉಳಿದದ್ದನ್ನು ಖಾಸಗಿ ಮಿಲಿಟರಿ ಕಂಪನಿಗಳಿಗೆ ಹೊರಗುತ್ತಿಗೆ ಕೊಡಲಿದೆಯಂತೆ.

ಪೆಂಟಗನ್ ನಿಂದ ಖಾಸಗಿ ಮಿಲಿಟರಿ ಕಂಪನಿಗಳತ್ತ

ಒಂದು ಕಡೆ ಮಿಲಿಟರಿ ವಾಪಾಸಾತಿ ಒಪ್ಪಂದ, ಮತ್ತೊಂದು ಕಡೆ ಪೆಂಟಗಾನ್ (ಯು. ಎಸ್ ರಕ್ಷಣಾ ವಿಭಾಗ) ನಿಂದ ಖಾಸಗಿ ಮಿಲಿಟರಿ ಗುತ್ತಿಗೆದಾರರಿಗೆ ಕೆಲಸದ ವರ್ಗಾವಣೆ – ಇದು ಟ್ರಂಪ್ ನ ಗೋಸುಂಬೆ ನೀತಿಗೆ ಸಾಕ್ಷಿಯಾಗಿದೆ. ಟ್ರಂಪ್ ಆಡಳಿತದ ಅವಧಿಯಲ್ಲಿ, ಅಫ್ಘಾನಿಸ್ತಾನದಲ್ಲಿ ಖಾಸಗಿ ಭದ್ರತಾ ಗುತ್ತಿಗೆದಾರರ ಬಳಕೆಯು ಶೇ.65 ಕ್ಕಿಂತ ಹೆಚ್ಚಾಗಿದೆ ಅಥವಾ 6000 ಕ್ಕೂ ಹೆಚ್ಚು ಖಾಸಗಿ ಬಾಡಿಗೆ ಸೈನಿಕರು ಅಫ್ಘಾನಿಸ್ತಾನದಲ್ಲಿ ನೆಲೆಗೊಂಡಿದ್ದಾರೆ. ಇವರನ್ನು ಯುಎಸ್ ಖಾಸಗಿ ಮಿಲಿಟರಿ ಕಂಪನಿಗಳು ಬಳಸಿಕೊಳ್ಳುತ್ತವೆ. ಯುಎಸ್ ಮಿಲಿಟರಿಗೆ ಮೂಲಸೌಕರ್ಯದ ಸೇವೆಗಳನ್ನು ಒದಗಿಸುವುದು ಮಾತ್ರವಲ್ಲದೆ ಯುದ್ಧ ಕಾರ್ಯಾಚರಣೆಗಳಲ್ಲಿ ಭಾಗವಹಿಸಲು ಕಂಪನಿಗಳಿಗೆ ಗುತ್ತಿಗೆ ಕೊಡಲಾಗುತ್ತಿದೆ. ಆ ಮೂಲಕ ಸಂಘಟಿತದ ಹಿಂಸಾಚಾರದಲ್ಲಿ ಖಾಸಗಿ ಭದ್ರತಾ ಕಂಪನಿಗಳನ್ನು ಇಳಿಸಲಾಗಿದೆ. ಈ ಹಿಂದೆ, ಇರಾಕ್ ಮತ್ತು ಅಫ್ಘಾನ್ ಯುದ್ಧಗಳಲ್ಲಿ ಅವು ಭಾಗವಹಿಸಿವೆ. ಖಾಸಗಿ ಬಾಡಿಗೆ ಸೈನಿಕರನ್ನು ಬಳಸಿಕೊಂಡು ವೆನೆಜುವೆಲಾ ದಲ್ಲಿ ಕ್ಷಿಪ್ರ ದಾಳಿ ನಡೆಸಿದ್ದು, ಅಲ್ಲಿನ ಭದ್ರತಾ ಪಡೆಗಳ ಮುಂಜಾಗ್ರತೆ ಕ್ರಮದಿಂದ, ಕ್ಷಿಪ್ರ ದಾಳಿಯನ್ನು ಹಿಮೆಟ್ಟಿಸಿದ್ದು ಇತ್ತೀಚಿನ ಸಾಕ್ಷಿ.

ಇಂತಹ ಖಾಸಗೀ ಮಿಲಿಟರಿ ಕಂಪನಿಗಳಿಗೆ ಯುಎಸ್ ನೀಡುವ ಪ್ರೋತ್ಸಾಹ ಎಷ್ಟಿದೆ ಎಂದರೆ, ಹಿಂದೆ ಇರಾಕ್ ನಲ್ಲಿ ದೊಡ್ಡ ಪ್ರಮಾಣದಲ್ಲಿ ನಾಗರಿಕರ ಕಗ್ಗೊಲೆಗಳಲ್ಲಿ ದೊಡ್ಡ ಪಾತ್ರ ವಹಿಸಿದ ಬ್ಲ್ಯಾಕ್ ವಾಟರ್ (ಈಗ ಅಕಾಡಮಿ ಎಂದು ಹೆಸರು ಬದಲಾಯಿಸಿದೆ) ಸಂಸ್ಥಾಪಕ ಎರಿಕ್ ಪ್ರಿನ್ಸ್, ಅಫ್ಘಾನಿಸ್ತಾನದಲ್ಲಿ ಯುದ್ಧ ಮತ್ತು ವಾಯು ಕಾರ್ಯಾಚರಣೆಯನ್ನು ಸಹ ಪೂರ್ಣವಾಗಿ ತನ್ನ ಕಂಪನಿಗೆ ಗುತ್ತಿಗೆ ಕೊಡಿ ಎಂದು ಯುಎಸ್ ಸರ್ಕಾರಕ್ಕೆ ಯೋಜನೆಯನ್ನು ಮುಂದಿಟ್ಟಿದ್ದಾನೆ.

ಅಧ್ಯಕ್ಷ ಅಶ್ರಪ್ ಘನಿ ಸೇರಿದಂತೆ, ಅಫ್ಘಾನಿಸ್ತಾನ ಸರ್ಕಾರದ ಅನೇಕರು ಅಫ್ಘಾನಿ ನೆಲದಲ್ಲಿ ಯುದ್ಧವನ್ನು ಖಾಸಗಿ ಕರಣಗೊಳಿಸುವ ಎರಿಕ್ ಪ್ರಿನ್ಸ್ ನ ಹೊಸ ಯೋಜನೆ ಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಅಮೆರಿಕಾದ ಮಾಜಿ ನೌಕಾಪಡೆಯ ಅಧಿಕಾರಿಯಾದ ಪ್ರಿನ್ಸ್ ನ ನಿವ್ವಳ ಆಸ್ತಿ 240 ಕೋಟಿ ಡಾಲರ್. ಇತ್ತೀಚಿಗೆ ಪ್ರಿನ್ಸ್ ಕಾಬೂಲ್ ಗೆ ಆಗಮಿಸಿದ್ದಾಗ ಅಧ್ಯಕ್ಷ ಆಶ್ರಫ್ ಘನಿ ಅವರನ್ನು ಭೇಟಿ ಮಾಡಲು ನಿರಾಕರಿಸಿದ್ದಾರೆ. ಈತ ಪತ್ರಿಕೆಯೊಂದರಲ್ಲಿ ಬರೆದ ಲೇಖನವೊಂದರಲ್ಲಿ ಈಸ್ಟ್ ಇಂಡಿಯಾ ಕಂಪನಿ ತನ್ನ ಸ್ಫೂರ್ತಿ ಮತ್ತು ಆದರ್ಶ ಎಂದಿದ್ದಾನೆ. ಕೇವಲ 2 ಸಾವಿರ ಬ್ರಿಟಿಶ್ ಅಧಿಕಾರಿಗಳನ್ನು ಇಟ್ಟುಕೊಂಡು ಇಂಡಿಯಾದಂತಹ ದೊಡ್ಡ ವಸಾಹತುವನ್ನು 18–19ನೇ ಶತಮಾನದಲ್ಲಿ ನಿಭಾಯಿಸುವುದು ಸಾಧ್ಯವಿದ್ದರೆ ಇಂದಿನ ಉಚ್ಚ ತಂತ್ರಜ್ಞಾನ ಮತ್ತು ಉತ್ಕೃಷ್ಟ ದೂರ ಸಂಪರ್ಕ ಇರುವಾಗ ಅಫ್ಘಾನಿಸ್ತಾನದಂತಹ ದೇಶವನ್ನು ಪೂರ್ಣವಾಗಿ ನಡೆಸುವುದು ಸಾಧ್ಯವಿಲ್ಲವೇ ಎಂದು ಹೇಳಿದ್ದಾನೆ ಎಂಬುದು ಗಮನಾರ್ಹ.

ಇತ್ತೀಚೆಗೆ ಯು.ಎಸ್ ಸರಕಾರದ ನ್ಯಾಯ ಇಲಾಖೆ ತಾನು ಕಡಲ ಮಧ್ಯದಲ್ಲಿ ದೊಡ್ಡ ಹಡಗೊಂದರಲ್ಲಿ ಇದ್ದ ಇರಾನ್ ರಫ್ತು ಮಾಡುತ್ತಿದ್ದ (11.2 ಲಕ್ಷ ಬ್ಯಾರೆಲ್) ತೈಲವನ್ನು ತನ್ನ ಮಿಲಿಟರಿ ಬಳಸದೆ (ಅಂದರೆ ಸಶಸ್ತ್ರ ಬಾಡಿಗೆ ಸೈನ್ಯವನ್ನು ಬಳಸಿ) ಕಸಿದುಕೊಂಡಿತು ಎಂದು ಕೊಚ್ಚಿಕೊಂಡಿದೆ. ಅಂತರ್‍ರಾಷ್ಟ್ರೀಯ ಕಾನೂನುಗಳ ಪ್ರಕಾರ 'ಕಡಲುಗಳ್ಳತನದ ಅಪರಾಧ' ಎಂದು ಕರೆಯಲಾಗುವ ಈ ಕ್ರಮವನ್ನು ಯು. ಎಸ್ ಕೋರ್ಟು ಎತ್ತಿ ಹಿಡಿದಿದೆ. ಈ ತೈಲ ಯು. ಎಸ್ ಸರಕಾರ 'ಭಯೋತ್ಪಾದಕ ಸಂಘಟನೆ' ಎಂದು ಘೋಷಿಸಿರುವ ಇರಾನಿನ ಸೈನ್ಯದ ಪ್ರಭಾವವನ್ನು ಹೆಚ್ಚಿಸುತ್ತದೆ. ಆದ್ದರಿಂದ ಈ ಕ್ರಮ ಯು.ಎಸ್ ಕಾನೂನುಗಳ ಪ್ರಕಾರ ಕಾನೂನುಬದ್ಧವಂತೆ!

ನಿಯಮಗಳನ್ನು ಒಪ್ಪಂದಗಳನ್ನು ಒಳಗೊಂಡ ಅಂತರಾಷ್ಟ್ರೀಯ ವ್ಯವಸ್ಥೆಯನ್ನು ನಾಶಮಾಡಲು ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳನ್ನು ದುರ್ಬಲಗೊಳಿಸಲು ಯು.ಎಸ್ ಶತಪ್ರಯತ್ನ ಮಾಡುತ್ತಿದೆ. ಯು.ಎಸ್ ಸಾಮ್ರಾಜ್ಯಶಾಹಿ ತನ್ನ ಪರವಾಗಿ ಖಾಸಗಿ ಕಾರ್ಪೊರೆಟುಗಳು ಕಡಲುದರೋಡೆ ಮಾಡುವುದು ಮತ್ತು ಇಡೀ ದೇಶಗಳನ್ನು ವಸಾಹತುವಾಗಿ ನಿರ್ವಹಿಸುವ ಬಂಡವಾಳಶಾಹಿಯ ಮುಂದಿನ ಹಂತಕ್ಕೆ ಜಗತ್ತನ್ನು ಎಳೆದೊಯ್ಯಲು ಕಾತುರವಾಗಿದೆ. ಭಾರತದ ಆಳುವ ವರ್ಗ 'ಚೀನಿ ವಿಸ್ತರಣವಾದ'ದ ವಿರುದ್ಧ ಹೋರಾಡುವ ಮತ್ತು 'ಸಾಂಸ್ಕೃತಿಕ ರಾಷ್ಟ್ರವಾದ'ವನ್ನು ಉತ್ತೇಜಿಸುವ ಭರದಲ್ಲಿ, ಯು.ಎಸ್ ಸಾಮ್ರಾಜ್ಯಸಾಹಿ ಅಂತರ್‍ರಾಷ್ಟ್ರೀಯ ವ್ಯವಸ್ಥೆಯ ನಿಯಮಗಳನ್ನು ತಲೆಕೆಳಗು ಮಾಡುತ್ತಿದೆ ಎಂಬುದನ್ನು ಗುರುತಿಸದಷ್ಟು ಕುರುಡಾಗಿದೆ. ●

JANASHAKTHI KANNADA VARA PATRIKE September 14-20, 2020 Price: Rs. 10/- Date of Publication: 11 September 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸೆಪ್ಟಂಬರ್ 5: ಕಾರ್ಮಿಕರು, ರೈತರು, ಕೃಷಿಕೂಲಿಕಾರರ ಮತ್ತೊಂದು ದೇಶವ್ಯಾಪಿ ಪ್ರತಿಭಟನೆ......... ಪುಟ 8 ರಿಂದ

























JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**